ಬ್ಯಾಂಕಿನ ಪ್ರಧಾನ ಕಛೇರಿ, ಬೆಂಗಳೂರು




Vijaya Bank (H.O) - Illuminated on Founders' day


ಮೂಲ್ಕಿಯ ಸುಪುತ್ರ

# ಜಪ್ಪುಗುತ್ತು ಮೂಲ್ಕಿ ಸುಂದರರಾಮ ಶೆಟ್ಟಿ

ಮತ್ತು

# ವಿಜಯಾ ಬ್ಯಾಂಕ್


1915-1981



ಡಾ. ಮೂಲ್ಕಿ ಅಚ್ಯುತ ಕುಡ್ವ


ಈ ಲೇಖಕರ ಪ್ರಥಮ ಕೃತಿ

ಮೂಲ್ಕಿ ಮತ್ತು ಈ ಪುಣ್ಯ ಸ್ಥಳದ 75 ಪ್ರತಿಭಾವಂತರು



ಬಪ್ಪನಾಡು

ಶ್ರೀ ದುರ್ಗಾಪರಮೇಶ್ವರೀ ಅಮ್ಮನವರು



ಶ್ರೀದೇವಿಯ ಪಾದಾರವಿಂದಗಳಲ್ಲಿ

ಈ ನನ್ನ ಕೃತಿಯ ಸಮರ್ಪಣೆ

ಮೂಲ್ಕಿಯ ಸುಪುತ್ರ

# ಕಕ್ವಗುತ್ತು ಮೂಲ್ಕಿ ಸುಂದರರಾಮ ಶೆಟ್ಟಿ

ಮತ್ತು

# ವಿಜಯಾ ಬ್ಯಾಂಕ್

ಡಾ। ಮುಲ್ಕಿ ಅಚ್ಚುತ ಆರ್. ಕುಡ್ವ

"Mulkiya Suputhra Kakwaguttu, Mulki Sundara Rama Shetty Mattu Vijaya Bank" *Written by* **Dr. Mulki Achutha R. Kudva.**

ಮೊದಲ ಮುದ್ರಣ : 2003

© ಡಾ। ಅಚ್ಚುತ ಆರ್. ಕುಡ್ವ

Cell : 9845082257

ಈ ಕೃತಿ ಮಾರಾಟಕ್ಕಾಗಿ ಅಲ್ಲ; ಕಕ್ವಗುತ್ತು, ಮೂಲ್ಕಿ ಸುಂದರರಾಮ ಶೆಟ್ಟರ ಸರಳ ಸುಂದರ ಸದಾ ಹಸನ್ಮುಖಿ ಶ್ರೀ ರಾಮನಂತೆ ನಿಷ್ಕಳಂಕ ವ್ಯಕ್ತಿತ್ವದ ಪ್ರಚಾರವೇ ಈ ಕೃತಿಯ ಉದ್ದೇಶ.

ಡಿ. ಟಿ. ಪಿ. ಮತ್ತು ಮುದ್ರಣ :
ಮಯೂರ್ ಗ್ರಾಫಿಕ್ಸ್, ಮುಲ್ಕಿ, ಫೋನ್ - 2290091

# ಲೇಖಕರ ಎರಡು ಮಾತು



ಬದುಕಲು ಸಾಹಿತ್ಯದ ಅಗತ್ಯವಿಲ್ಲ. ಆದರೆ ಜೀವಿಸಲು ಸಾಹಿತ್ಯ ಉಸಿರಿನಷ್ಟೇ ಅಗತ್ಯ. ಪ್ರತಿಯೊಬ್ಬರೂ ಸಾಹಿತ್ಯವನ್ನು ಒಂದಲ್ಲ ಒಂದು ರೀತಿಯಲ್ಲಿ, ತನ್ನ ಜೀವನದಲ್ಲಿ ಖಂಡಿತವಾಗಿಯೂ ಅಳವಡಿಸಿಕೊಳ್ಳುತ್ತಾನೆ. ಯಾವುದಾದರೂ ಒಂದು ಕಾರ್ಯಕ್ಕೆ ಒಂದು ಕಾರಣ ಇದ್ದೇ ಇರುತ್ತದೆ. ಇದನ್ನು ನಾವು ಕಾರ್ಯ ಕಾರಣ ಎನ್ನುತ್ತೇವೆ. 'ಮೂಲ್ಕಿ'ಗೊಂದು ಅದ್ಭುತ ಇತಿಹಾಸವಿದೆ. ಇತರರಿಗೆ ಬಿಡಿ, ಮೂಲ್ಕಿಯಲ್ಲೇ ನೆಲೆಸಿರುವ ಅದೆಷ್ಟೋ ಜನರಿಗೆ ಇದರ ಬಗ್ಗೆ ಗೊತ್ತಿಲ್ಲ. ಅದೇ ರೀತಿ ಮೂಲ್ಕಿಯು ಅನೇಕ ಶ್ರೇಷ್ಠ ವ್ಯಕ್ತಿಗಳಿಗೆ ಜನ್ಮ ನೀಡಿದೆ. ದೇಶದ ಆರ್ಥಿಕ ಪ್ರಗತಿಗೆ ಕಾರಣರಾದ ಅಮ್ಮೆಂಬಳ ಸುಬ್ಬುರಾವ್ ಪೈ, ಸುಂದರರಾಮ ಶೆಟ್ಟಿ ಮತ್ತು ಟಿ. ಎ. ಪೈಯವರು ಹುಟ್ಟಿದ್ದು ಮೂಲ್ಕಿಯಲ್ಲೇ. ದೇಶದ ಸ್ವಾತಂತ್ರ್ಯಕ್ಕಾಗಿ ತನ್ನೆಲ್ಲಾ ಸಂಪತ್ತನ್ನು ತ್ಯಾಗ ಮಾಡಿದ ಶ್ರೇಷ್ಠ ಮಾನವತಾವಾದಿ ಕಾರ್ನಾಡು ಸದಾಶಿವರಾಯರು ಹುಟ್ಟಿದ್ದು ಮೂಲ್ಕಿಯಲ್ಲೇ.

ನಾನು 1996ರಲ್ಲಿ ಮೂಲ್ಕಿ ಮತ್ತು ಈ ಪುಣ್ಯ ಸ್ಥಳದ 75 ಪ್ರತಿಭಾವಂತರು ಎಂಬ ಕಿರು ಹೊತ್ತಿಗೆಯನ್ನು ಬರೆದು ಸುಬ್ಬರಾವ್ ಪೈಯವರ ಜನ್ಮ ದಿನವಾದ ನವೆಂಬರ್ 19ರಂದು ಬಿಡುಗಡೆಗೊಳಿಸಿದ್ದ ಈ ಕೃತಿಯನ್ನು ಬರೆಯುವ ಸಂದರ್ಭದಲ್ಲಿ

ನಮ್ಮೂರಿನ ಹೆಮ್ಮೆಯ ಪುತ್ರ ಆಧುನಿಕ ವಿಜಯಾ ಬ್ಯಾಂಕಿನ ಶಿಲ್ಪಿ ದಿ. ಕಕ್ವಗುತ್ತು ಸುಂದರರಾಮ ಶೆಟ್ಟರ ಬಗ್ಗೆ ಒಂದು ಕೃತಿಯನ್ನು ರಚಿಸಬೇಕೆಂಬ ಒಂದು ಕನಸು ಕಂಡಿದ್ದೆ. ಆದರೆ ಇಂತಹ ಧೀಮಂತ ವ್ಯಕ್ತಿಯ ಬಗ್ಗೆ ಸಾಕಷ್ಟು ಮಾಹಿತಿ, ದಾಖಲೆಗಳನ್ನು ಪಡೆಯುವುದು ಅಷ್ಟು ಸುಲಭವಾದ ಕಾರ್ಯವಲ್ಲವೆಂದು ಭಾವಿಸಿದೆ. ಆದರೆ ಶ್ರೀ ಮನೋಹರ ಶೆಟ್ಟಿಯವರ 90 ವರ್ಷದ ತಾಯಿ ರತಿ ಅಮ್ಮನವರು ಸುಂದರರಾಮ ಶೆಟ್ಟಿಯವರ ಸೋದರ ತಂಗಿ ಸುಮತಿ ಶೆಟ್ಟಿ ಹಾಗೂ ಭಾವ ಶ್ರೀ ಬಿ. ಜೆ. ಶೆಟ್ಟಿಯವರು ಶ್ರೀ ಸುಂದರರಾಮ ಶೆಟ್ಟಿಯವರ ಜೀವನದ ಬಗ್ಗೆ ಅತ್ಯಮೂಲ್ಯ ಮಾಹಿತಿ ಒದಗಿಸಿಕೊಟ್ಟು ನನ್ನ ಕೃತಿ ರಚನೆಗೆ ನಾಂದಿ ಹಾಕಿಸಿಕೊಟ್ಟರು. ಈ ಪುಸ್ತಕ ರಚಿಸಲು ನನಗೆ ಪ್ರೋತ್ಸಾಹವನ್ನು ಕೊಟ್ಟು ಹುರಿದುಂಬಿಸಿದ ವ್ಯಕ್ತಿ ಶ್ರೀ ಕಕ್ವಗುತ್ತು ಸುಕುಮಾರ ಶೆಟ್ಟಿ.

ಶ್ರೀ ಯು. ಕ್ಯಾಪ್ಟನ್ ದಿನೇಶ್ ಭಂಡಾರಿ ಮತ್ತು ತಮ್ಮಂದಿರು, ಶ್ರೀಮತಿ ಕೌಸಲ್ಯ ಆಳ್ವ ಮತ್ತು ಸಹೋದರಿಯರು, ಶ್ರೀಯುತ ಹರಿ ಪೂಂಜಾರವರು ದಿವಂಗತ ಸುಂದರರಾಮಶೆಟ್ಟರ ಜೀವನದ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸಿಕೊಟ್ಟು ಈ ಕೃತಿ ರಚನೆಗೆ ಸಹಕಾರಿಯಾಗಿದ್ದಾರೆ. ವಿಜಯಾ ಬ್ಯಾಂಕಿನ ಉದ್ಯೋಗಿ ಶ್ರೀ ಕಿರಣ್ ಶೆಟ್ಟಿ ಮತ್ತು ಶ್ರೀ ಅಮರನಾಥ ಶೆಟ್ಟಿಯವರು ವಿಜಯಾ ಬ್ಯಾಂಕಿನ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನನಗೆ ಒದಗಿಸಿ ಪುಸ್ತಕಕ್ಕೆ ಇನ್ನೂ ಹೆಚ್ಚಿನ ಹೊಳಪನ್ನು ಕೊಟ್ಟಿದ್ದಾರೆ.



ಒಬ್ಬ ವ್ಯಕ್ತಿಯ ಜೀವನ ಚರಿತ್ರೆ ಬರೆಯಬೇಕಾದರೆ ಸ್ಪಷ್ಟ ಹಾಗೂ ಸಮರ್ಪಕ ಮಾಹಿತಿ ದೊರಕಿದ ಪಕ್ಷದಲ್ಲಿ ಇದಕ್ಕೆ ಒಂದು ರೂಪ ಬರುತ್ತದೆ ಎಂದು ಮನಗಂಡು ಹಲವು ಮೂಲಗಳಿಂದ ಹಾಗೂ ವ್ಯಕ್ತಿಗಳಿಂದ ಮಾಹಿತಿ ಪಡೆದಿದ್ದೇನೆ. ದಿ ಯೂನಿಯನ್ ಕ್ಲಬ್ ಮೂಲ್ಕಿಯ ಸುವರ್ಣ ಮಹೋತ್ಸವದ ಸುವರ್ಣ ಸಂಚಿಕೆ 'ಜ್ಞಾನ ಜ್ಯೋತಿ', ಜ್ಞಾನ ಮಂದಿರ ಉದ್ಘಾಟನಾ ಸ್ಮರಣ ಸಂಚಿಕೆ ಹಾಗೂ ಕೊಲೆಕಾಡಿ ಹಿರಿಯ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆಯಿಂದಲೂ, ದಿ. ಸುಂದರರಾಮ ಶೆಟ್ಟರ ಬಗ್ಗೆ ಮಾಹಿತಿ ಪಡೆದಿದ್ದೇನೆ. ಈ ಕೃತಿ ರಚನೆಗೆ ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಶ್ರೀ ವೇಣುಗೋಪಾಲ್, ವಾಣಿಜ್ಯ ಉಪನ್ಯಾಸಕ ಶ್ರೀ ಬಿ. ವಾಮನ ಬಾಳಿಗಾ, ನನ್ನ ಮಿತ್ರ ವಿ. ಸತೀಶ ಕಾಮತ್ ಹಾಗೂ ನನ್ನ ಧರ್ಮಪತ್ನಿ ಶ್ರೀಮತಿ ಶಾಂತಿ ಕುಡ್ವರು ನನ್ನೊಂದಿಗೆ ವಿನಯ ಪೂರ್ವಕವಾಗಿ ಸಹಕರಿಸಿರುತ್ತಾರೆ. ಈ ಕೃತಿಯ ಮುದ್ರಣವನ್ನು ಅಚ್ಚುಕಟ್ಟಾಗಿ ಮಾಡಿದಂತಹ ಮಯೂರ ಗ್ರಾಫಿಕ್ಸ್‌ನ ಶ್ರೀಮತಿ ಶಕುಂತಲ ಅಡಿಗರವರಿಗೂ ನಾನು ಅಭಾರಿಯಾಗಿದ್ದೇನೆ. ಮುನ್ನುಡಿಯನ್ನು ಕ್ಲಪ್ತ ಸಮಯದಲ್ಲಿ ಬರೆದು ಕೊಟ್ಟು ಸಹಕರಿಸಿದ ಶ್ರೀ ಕ್ಯಾಪ್ಟನ್ ದಿನೇಶ ಭಂಡಾರಿಯವರಿಗೆ ಅಭಿನಂದನೆಗಳು. ಹಿನ್ನುಡಿಯನ್ನು ಬರೆದ ಶ್ರೀ ದೇವದಾಸ ರಾವ್‌ರವರಿಗೆ ವಂದನೆಗಳು. ಛಾಯಾಚಿತ್ರವನ್ನು ಅಂದವಾಗಿ ಸೆರೆಹಿಡಿದು ಸಹಕರಿಸಿದ ಸುವರ್ಣ

ಸ್ಟುಡಿಯೋ ಮೂಲ್ಕಿಯ ಶ್ರೀ ಪ್ರಕಾಶ ಸುವರ್ಣರವರಿಗೆ ನಾನು ಚಿರಋಣಿಯಾಗಿರುತ್ತೇನೆ. ಈ ಮುದ್ರಣಕ್ಕೆ ಸಹಕಾರ ನೀಡಿದ ಮೂಲ್ಕಿ ಸಭಾಗೃಹ ಸಮಿತಿಗೆ ನಾನೂ ಶಿರಬಾಗಿ ವಂದಿಸುತ್ತೇನೆ. ಇದಲ್ಲದೆ ಈ ಕೃತಿ ಬಿಡುಗಡೆಗೆ ಸಹಕರಿಸಿದ ಎಲ್ಲರಿಗೂ ವಂದನೆ ಸಲ್ಲಿಸುತ್ತಿದ್ದೇನೆ.

ಈ ಕೃತಿಯನ್ನು ಬರೆಯಲು ಸ್ಫೂರ್ತಿ ನೀಡಿ ಸಂಪೂರ್ಣ ಆಶೀರ್ವಾದ ಮಾಡಿದಂತಹ ನಮ್ಮ ಅಮ್ಮ ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರಿಗೆ ಈ ಕೃತಿಯನ್ನು ಅರ್ಪಿಸಲು ತುಂಬಾ ಸಂತೋಷವಾಗುತ್ತಿದೆ. ಮಹಾತ್ಮ ಗಾಂಧಿಯ ಜನ್ಮ ದಿನವಾದ ಅಕ್ಟೋಬರ್ 2ರಂದು ಈ ಕೃತಿಯನ್ನು ಬಿಡುಗಡೆಗೊಳಿಸಲು ಸರ್ವಸಿದ್ಧತೆ ತಯಾರಾಗಿರುತ್ತದೆ ಹಾಗೂ ಓದುಗರಾದ ತಾವೆಲ್ಲರೂ ಇನ್ನು ಮುಂದೆಯೂ ಸಹಕರಿಸಬೇಕೆಂದು ನಮ್ರ ಪ್ರಾರ್ಥನೆ.



*Group Captain (Retd.)*
*DC Bhandary Vr. C*
*Indian Air Force*

128, Jal Vayu Vihar,
Kammanahalli
Bangalore - 560 043
Tele : 5443219

Date : 11-09-2003

# ಮುನ್ನುಡಿ



ಡಾ । ಅಚ್ಯುತ ಕುಡ್ವ ಹಾಗೂ ಪ್ರೊಫೆಸರ್ ಸ್ಯಾಮ್ ಮ್ಯಾಬೆನ್‌ರವರು, ಮೂಲ್ಕಿ ಸುಂದರರಾಮ ಶೆಟ್ಟರವರ ಬಗ್ಗೆ ಪುಸ್ತಕದ ಕರಡು ಪ್ರತಿಯನ್ನು ನನ್ನ ಬಳಿ ತೋರಿಸಿದಾಗ, ಶೆಟ್ಟರ ಓರ್ವ ಕುಟುಂಬದ ಸದಸ್ಯನಾಗಿ ನನಗೆ ಅತೀವ ಸಂತೋಷ ಹಾಗೂ ಹೆಮ್ಮೆಯಾಯಿತು. ಕೊನೆಗಾದರೂ ಮೂಲ್ಕಿಯ ಓರ್ವರು ಮೂಲ್ಕಿಯ ಖ್ಯಾತ ವ್ಯಕ್ತಿಯ ಸಾಧನೆಗಳನ್ನು ಕಪ್ಪು ಮತ್ತು ಬಿಳುಪಿನಲ್ಲಿ ಕಾಣುವಂತಹ ಪ್ರಯತ್ನ ಮಾಡಿರುತ್ತಾರೆ.

ಇವರು ''ಯುಗಪುರುಷ'' - ಎತ್ತರದ ನಿಲುವು, ಸುರದ್ರೂಪಿ, ದೃಢಕಾಯ ಹಾಗೂ ಆಕರ್ಷಕ ವ್ಯಕ್ತಿತ್ವ ಮತ್ತು ಗಂಭೀರವಾದ ಧ್ವನಿಯುಳ್ಳವರಾಗಿದ್ದು, ದಯಾಮಯಿ ಹಾಗೂ ಮೃದು ಹೃದಯವಂತ ವ್ಯಕ್ತಿಯಾಗಿ ಸುಂದರರಾಮ ಶೆಟ್ಟಿಯವರನ್ನು ನಾನು ಕಂಡುಕೊಂಡಿದ್ದೆ.

ಸುಂದರರಾಮ ಶೆಟ್ಟಿ ಹಾಗೂ ವಿಜಯಾ ಬ್ಯಾಂಕ್, ಒಂದೇ ನಾಣ್ಯದ ಎರಡು ಮುಖಗಳಂತೆ. ಯುವಕರಿಗೆ, ಬಡ ಜನರಿಗೆ ಹಾಗೂ ಅಗತ್ಯವಿರುವ ಜನರಿಗೆ ಕೆಲಸವನ್ನು ಕೊಟ್ಟು, ತಮ್ಮ ಮುಂದಿನ ಜೀವನವನ್ನು ಸರಿದಾರಿಯಲ್ಲಿ ಸಾಗಿಸುವರೇ ಶ್ರೀಯುತ ಶೆಟ್ಟರು ವಿಜಯಾ ಬ್ಯಾಂಕನ್ನು ಸಾಕಷ್ಟು ಉಪಯೋಗಿಸಿರುತ್ತಾರೆ. ಇವರ ಬಳಿ ಬಂದವರು ಖಾಲಿ ಕೈಯಲ್ಲಿ ಹಿಂದೆ ಹೋದದ್ದು ಅತೀ ವಿರಳ. ''ಅರ್ಹ ಹಾಗೂ ಅಗತ್ಯವಿರುವವರಿಗೆ ಸಹಾಯ ಮಾಡುವುದು'' ಎಂಬ ಧ್ಯೇಯವಿರಿಸಿದ ಇವರಿಗೆ ನಿಯಮ ಹಾಗೂ ನಿಬಂಧನೆಗಳೇ ದಿಕ್ಸೂಚಿ.

ನನ್ನ ಸ್ಫೂರ್ತಿಯ ಚಿಲುಮೆಯಾಗಿರುವ ಇಂತಹ ವ್ಯಕ್ತಿಯ ಬಗ್ಗೆ ಕೆಲವು ಮಾತುಗಳನ್ನು ಬರೆಯಲು ನನಗೆ ಅತೀವ ಸಂತೋಷ ಹಾಗೂ ಹೆಮ್ಮೆಯಾಗುತ್ತಿದೆ. ಡಾ. ಕುಡ್ವರವರ ಈ ಒಂದು ಸಾಧನೆಯೂ, ಮುಂದಿನ ಯುವ ಜನಾಂಗಕ್ಕೆ ಮೂಲ್ಕಿಯ ಇತಿಹಾಸ ಪುತ್ರರ ಬಗ್ಗೆ ತಿಳಿಯುವ ಬಗ್ಗೆ ದಾರಿದೀಪವಾಗಲಿ ಎಂಬುದೇ ನನ್ನ ಹಾರೈಕೆ.

- ದಿನೇಶ್‌ಚಂದ್ರ ಭಂಡಾರಿ



*Group Captain (Retd.)*
*DC Bhandary Vr. C*
*Indian Air Force*

128, Jal Vayu Vihar,
Kammanahalli
Bangalore - 560 043
Tele : 5443219

Date : 11-09-2003

**FOREWORD**



*When Dr. Achyuth Kudva and Prof. Sam Maben came to me with a draft copy of the book, they were going to bring out on Mulki Sunder Ram Shetty, I being one from the family felt very happy and proud. At last some one from Mulki was trying to put in black and white the achievements of the great man from Mulki.*

*He was a "Yuga Purusha" - Tall, handsome, well built with a commanding and imposing personality and a booming voice - kind, soft and gentle at heart - that was what Sunder Ram Shetty was to me.*

*Sundar Ram Shetty & Vijaya Bank were*

the two sides of the same coin. He made extensive use of Vijaya Bank to help the young, poor and needy people by providing them job and settling them along the right side of their future life. Hardly anyone went back unhappy after meeting him. For him rules and regulations were only guide lines to achieve what he wanted - "helping the needy".

I feel proud and privileged to put in these few lines on my ideal man. Dr. Kudva's effort will go a long way in reminding the future generation, particularly of Mulki - about the great son of this small place.

**- Dinesh Chandra Bhandary**



## ಮೂಲ್ಕಿಯ ಸುಪುತ್ರ
# ಕಕ್ವಗುತ್ತು, ಮೂಲ್ಕಿ ಸುಂದರರಾಮ ಶೆಟ್ಟಿ
## ಮತ್ತು ವಿಜಯಾ ಬ್ಯಾಂಕ್

### ಹಿನ್ನೆಲೆ:

ಕರ್ನಾಟಕದ ಭೂಪಟದಲ್ಲಿ ಮೂಲ್ಕಿ ಒಂದು ಸಣ್ಣ ಊರು. ಭಾರತದ ಭೂಪಟದಲ್ಲಿ ನೋಡಿದರೆ ಗಾತ್ರದಲ್ಲಿ ಮೂಲ್ಕಿ ಒಂದು ಸಣ್ಣ ಬಿಂದು ಅಷ್ಟೆ. ಬಿಂದುವಿನಿಂದ ಸಿಂಧು ಎನ್ನುವಂತೆ ಮೂಲ್ಕಿ ಒಂದು ಬಿಂದುವಾಗಿಕೊಂಡೇ ಸಿಂಧುತನವನ್ನು ತೋರ್ಪಡಿಸಲು ದುಡಿದ ಮಹನೀಯರು ಹಲವರು. ತಮ್ಮ ಅಗಾಧ ಅನುಭವ, ಸತತ ಪರಿಶ್ರಮದಿಂದ ಮೂಲ್ಕಿಯ ಹೆಸರು ಜಗಜ್ಜಾಹೀರು ಆಗುವಂತೆ ಮಾಡಿದ ಮಹನೀಯರು ಇವರು. ಏನೂ ಅಲ್ಲದ ಮೂಲ್ಕಿ ಇಂದು ದುರ್ಗಾಪರಮೇಶ್ವರೀ ಅಮ್ಮನವರ ಕೃಪಾ ಆಶೀರ್ವಾದದಿಂದ ಜನಮನದಲ್ಲಿ ಉಳಿಯುವಂತಾದುದು ಇಂತಹ ಮಹನೀಯರ ಸೇವಾ ಮನೋಭಾವದಿಂದ ಹಾಗೂ ಅವರ ಅದೃಷ್ಟದ ಬಲದಿಂದ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿದೆ. ದೇಶದ ಬೇರೆ ಯಾವುದೇ ಭಾಗದಲ್ಲಿ ಹುಟ್ಟಿಕೊಳ್ಳದಷ್ಟು ಬ್ಯಾಂಕ್‌ಗಳು ಈ ಮಣ್ಣಿನಲ್ಲಿ ಬೆಳೆದು ತಮ್ಮ ಶಾಖೆಗಳನ್ನು ಬೆಳೆಸಿ ಸಮೃದ್ಧಿ ಹೊಂದಿವೆ. ಮೂಲತಃ ದಕ್ಷಿಣ ಕನ್ನಡದ ಜನರು ವ್ಯವಹಾರ ಚತುರರು. ಆದುದರಿಂದಲೇ ದಕ್ಷಿಣ ಕನ್ನಡದವರು ಬುದ್ಧಿವಂತರು ಎಂಬ ಹೆಸರನ್ನು ಗಳಿಸಿದ್ದಾರೆ. ಆಗಿ ಹೋದ ಹಲವು ಮಹನೀಯರ ಕಾರ್ಯಸಾಧನೆಯು ದೈತ್ಯಶಕ್ತಿಯಾಗಿ, ನಿರಂತರ ಮಾರ್ಗದರ್ಶಕವಾಗಿ, ಆಧುನಿಕ ಬದುಕಿನ ಬಟ್ಟಲನ್ನು ಇನ್ನಷ್ಟು ವಿಸ್ತಾರಗೊಳಿಸಿದೆ.

ದೇಶದ ಬ್ಯಾಂಕಿಂಗ್ ಭೂಪಟದಲ್ಲಿ ಉಡುಪಿ, ಮಂಗಳೂರು ಮತ್ತು ಮೂಲ್ಕಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಇಲ್ಲಿಯ ನೆಲದಲ್ಲಿ ಸುಮಾರು ಇಪ್ಪತ್ತಮೂರು ಬ್ಯಾಂಕುಗಳು ಹುಟ್ಟಿ, ದೇಶದ ಒಟ್ಟು ಇಪ್ಪತ್ತೇಳು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಾಲ್ಕು ಬ್ಯಾಂಕುಗಳು ಇಲ್ಲಿಯೇ ಹುಟ್ಟಿ ಬೆಳೆದಿವೆ ಎಂದು ಗಮನಿಸುವಾಗ, ಈ ಪ್ರದೇಶದ ವಿಶಿಷ್ಟತೆ ಅರ್ಥವಾಗಬಲ್ಲದು.

ದೇಶದ ಅನೇಕ ಭಾಗಗಳು ಇನ್ನೂ ಬ್ಯಾಂಕಿಂಗ್ ವ್ಯವಸ್ಥೆಯ ಬಗೆಗೆ ತಲೆಕೆಡಿಸಿಕೊಳ್ಳದಿದ್ದಾಗ ಈ ಜಿಲ್ಲೆಯ ಅನೇಕ ಸಣ್ಣ ಸಣ್ಣ ಊರುಗಳಲ್ಲಿ ಬ್ಯಾಂಕ್‌ಗಳು ಕಾರ್ಯತತ್ಪರವಾಗಿದ್ದವು ಹಾಗೂ ಸಾಮಾನ್ಯ ಜನರಿಗೂ ಉಳಿತಾಯದ ಮನೋಭಾವವನ್ನು ಕಲ್ಪಿಸಿಕೊಟ್ಟಿದ್ದವು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ಮಹಾನೀಯರು ಇಲ್ಲೇ ಹುಟ್ಟಿ, ಇಲ್ಲೇ ಬೆಳೆದವರು ಎಂದು ಹೇಳುವಾಗ ಸಂತಸವಾಗುತ್ತದೆ. ಕೆನರಾ ಬ್ಯಾಂಕನ್ನು ಸ್ಥಾಪಿಸಿದ ಅಮ್ಮೆಂಬಳ ಸುಬ್ರಾಯ ಪೈ, ಸಿಂಡಿಕೇಟ್ ಬ್ಯಾಂಕ್‌ನ ರೂವಾರಿ ಶ್ರೀ ಟಿ. ಎಂ. ಎ. ಪೈ, ಕಾರ್ಪೋರೇಶನ್ ಬ್ಯಾಂಕಿನ ಏಳಿಗೆಗಾಗಿ ಕಾರಣರಾದ ಎಂ. ಆರ್. ಕಾಮತ್ ಅಲ್ಲದೇ ವಿಜಯಾ ಬ್ಯಾಂಕಿನ ಕೀರ್ತಿಯನ್ನು ಶಿಖರಕ್ಕೇರಿಸಿದಂತಹ ಕಕ್ವ ಗುತ್ತು ಶ್ರೀ ಸುಂದರರಾಮ ಶೆಟ್ಟಿ ಇವರೆಲ್ಲರೂ ಮೂಲ್ಕಿಯಲ್ಲೇ ಹುಟ್ಟಿದವರೆಂದು ಹೇಳಲು ತುಂಬಾ ಆನಂದವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಳೀಯ ಬ್ಯಾಂಕ್‌ಗಳು ಹುಟ್ಟುವ ಮೊದಲು ಕೇವಲ ಎರಡು ಬ್ಯಾಂಕ್‌ಗಳು ಇದ್ದುವು. ಅವುಗಳೆಂದರೆ. ಬ್ಯಾಂಕ್ ಆಫ್ ಮೈಸೂರು ಮತ್ತು ಜಿ. ಅರ್ಬಿತ್ ನಾಟ್ ಫಂಡ್ ಕಂಪೆನಿ ಎಂಬ ಬ್ಯಾಂಕುಗಳಾಗಿದ್ದವು. ಶ್ರೀ ಮೊಳಹಳ್ಳಿ ಶಿವರಾಯರ ಮಾರ್ಗದರ್ಶನದಲ್ಲಿ 1904ರಲ್ಲಿ ಪುತ್ತೂರಿನಲ್ಲಿ ಸಹಕಾರಿ ಕ್ಷೇತ್ರದಲ್ಲಿ



ಸಾಲ ನೀಡುವ ಬ್ಯಾಂಕೊಂದು ಜನ್ಮ ತಾಳಿತು. ಜಿಲ್ಲೆಯಲ್ಲಿ ಹುಟ್ಟಿದ ಪ್ರಥಮ ಬ್ಯಾಂಕು ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್. 1906ರಲ್ಲಿ ಉಡುಪಿಯಲ್ಲಿ ಜನ್ಮತಾಳಿ, ಕೆನರಾ ಹಿಂದೂ ಪರ್ಮನೆಂಟ್ ಫಂಡಿನ ಸ್ಥಾಪನೆಯಾಗಿ ನಂತರ 'ಕೆನರಾ ಬ್ಯಾಂಕ್ ಲಿಮಿಟೆಡ್' ಎಂದು ನಾಮಾಂತರಗೊಂಡಿತು. ಜಾತಿಯ ನೆಲೆಯಲ್ಲಿ ಸಾರಸ್ವತ ಸಮಾಜದವರಿಂದ ಜಯಲಕ್ಷ್ಮಿ ಬ್ಯಾಂಕ್ ಲಿಮಿಟೆಡ್, ಬ್ರಾಹ್ಮಣ ಸಮುದಾಯದವರಿಂದ ಕರ್ನಾಟಕ ಬ್ಯಾಂಕ್ ಹಾಗೂ ಕ್ರೈಸ್ತ ಬಾಂಧವರಿಂದ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಮಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದುವು. ಉಡುಪಿಯಲ್ಲಿ ಪಾಂಗಾಳ ನಾಯಕ್ ಬ್ಯಾಂಕ್ ಹಾಗೂ ಡಾ. ತೋನ್ಸೆ ಮಾಧವ ಪೈ ಅವರ ಮಾರ್ಗದರ್ಶನದಲ್ಲಿ ಕೆನರಾ ಇಂಡಸ್ಟ್ರಿಯಲ್ ಆ್ಯಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ 1925ರಲ್ಲಿ ಜನ್ಮ ತಾಳಿದವು.

ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ಪ್ರತಿಭಾಶಾಲಿಗಳಾಗಿದ್ದು, ಭೂಮಾಲಿಕರಾಗಿದ್ದ ಬಂಟ ಸಮುದಾಯದ ಮುಖಂಡರು 1931ರಲ್ಲಿ ವಿಜಯಾ ಬ್ಯಾಂಕನ್ನು ಮಂಗಳೂರಿನಲ್ಲಿ ಸ್ಥಾಪನೆ ಮಾಡಿದರು. ವಿಜಯಾ ಬ್ಯಾಂಕಿನ ಪ್ರಥಮ ಅಧ್ಯಕ್ಷರಾಗಿ ಮೂಲ್ಕಿಯ ಸಾಹುಕಾರ್ ಕಾಳಪ್ಪ ಶೆಟ್ಟಿಯವರ ಮಗ ಅತ್ತಾವರ ಬಾಲಕೃಷ್ಣ ಶೆಟ್ಟಿ (ಎ. ಬಿ. ಶೆಟ್ಟಿ) ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ತದ ನಂತರ ಹದಿನೇಳು ವರ್ಷಗಳ ದೀರ್ಘಕಾಲ ಅಧ್ಯಕ್ಷರಾಗಿದ್ದವರು ಶ್ರೀ ಬಿ. ಮಂಜಯ್ಯ ಹೆಗ್ಡೆಯವರು. ಅಲ್ಲಿಯವರೆಗೆ ನಿಧಾನವಾಗಿ ಸಾಗುತ್ತಿದ್ದ ವಿಜಯಾ ಬ್ಯಾಂಕಿಗೆ ವೇಗದೂತದ ಚಾಲನೆಯನ್ನು ಕೊಟ್ಟವರು ಮೂಲ್ಕಿಯ ಸುಂದರರಾಮ ಶೆಟ್ಟಿಯವರು. ಬಂಟ ಸಮುದಾಯದ ಈ ವೀರ ಯಶೋಗಾಥೆ ಪ್ರಾರಂಭವಾದುದು 1962ರಲ್ಲಿ. ಧೀರನಾಗಿ ಮುನ್ನುಗ್ಗುವ ಛಲದ ಶೆಟ್ಟರು ಹದಿನೇಳು ವರ್ಷಗಳಷ್ಟು ದೀರ್ಘಕಾಲದ ಅವಧಿಯಲ್ಲಿ, ವಿಜಯಾ ಬ್ಯಾಂಕಿನ

ವಿಜಯ ಪತಾಕೆಯನ್ನು ದೇಶದ ಉದ್ದಗಲಕ್ಕೆ ಹಾರಿಸಿದರು. ಯಶಸ್ಸಿನ ಬೆನ್ನೇರಿ ಹೊರಟ ವಿಜಯ ಬ್ಯಾಂಕಿನ ಸಾಹಸಗಾಥೆ ಮೂಲ್ಕಿ ಸುಂಧರರಾಮ ಶೆಟ್ಟಿಯವರ ನೇತೃತ್ವದಲ್ಲಿ ಹೊಸ ಮೈಲುಗಲ್ಲನ್ನು ಸ್ಥಾಪಿಸಿತು. ವಿಜಯಾ ಬ್ಯಾಂಕಿನ ಬಗೆಗೆ ಮಾತನಾಡುವಾಗ ಹಾಗೂ ಮೂಲ್ಕಿಯ ಹೆಸರನ್ನು ನೆನೆಯುವಾಗ ಮೂಲ್ಕಿ ಸುಂದರರಾಮ ಶೆಟ್ಟಿಯವರ ಹೆಸರು ತನ್ನಿಂದ ತಾನೇ ಸೇರ್ಪಡೆಗೊಳ್ಳುತ್ತದೆ. ಧೀರೋದಾತ್ತ ವ್ಯಕ್ತಿತ್ವದ ಸುಂದರರಾಮ ಶೆಟ್ಟಿಯವರು ಸುಂದರರಾಮರಾಗಿದ್ದರು ಮಾತ್ರವಲ್ಲ ಶ್ರೀ ರಾಮನಂತಹ ಸಾಮರ್ಥ್ಯದ ವ್ಯಕ್ತಿತ್ವವನ್ನು ಹೊಂದಿ, ಕರ್ನಾಟಕದ ಬ್ಯಾಂಕಿಂಗ್ ಇತಿಹಾಸದಲ್ಲಿ ಅದ್ವಿತೀಯರಾಗಿ ಕಾಣಿಸಿಕೊಂಡಿದ್ದಾರೆ.

ಬಂಟ ಎಂಬ ಪದ 'ವೀರ' ಅಥವಾ 'ಶೂರ' ಎಂಬ ಅರ್ಥಕೊಡುವುದರಿಂದ ಅವರು ಸೈನಿಕರಾಗಿ ಇರಬೇಕೆಂಬುದಾಗಿ ಹಲವಾರು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. 'ನಾಡವರು' ಎನ್ನುವ ಪರ್ಯಾಯ ಹೆಸರಿರುವುದರಿಂದ ಅವರು ಆಡಳಿತದಲ್ಲಿ ಪಾಲುಗೊಳ್ಳುತ್ತಿದ್ದರೆಂಬ ವಿವರಗಳು ಕರ್ನಾಟಕ ಇತಿಹಾಸದ ಶಾಸನಗಳಲ್ಲಿ ದೊರೆತಿರುವುದರಿಂದ ಭೂಮಾಲಿಕರಾಗಿದ್ದರು ಎಂದು ನಿಸ್ಸಂಶಯವಾಗಿ ಹೇಳಬಹುದು. ಕನ್ನಡದ ಮೊದಲ ಕೃತಿ 'ಕವಿರಾಜ ಮಾರ್ಗ'ದಲ್ಲಿ


ಸುಭಟರ್ಕಳ್ ಕವಿಗಳ ಸು
ಪ್ರಭುಗಳ್ ಚೆಲ್ವರ್ಕಳ್ ಭಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಂಭೀರ ಚಿತ್ತರ್ ವಿವೇಕಿಗಳಾ ನಾಡವರ್ಗಳ್

ಎಂಬ ಉಲ್ಲೇಖದಲ್ಲಿ 'ನಾಡವರ್' ಎನ್ನುವುದು 'ಬಂಟರು' ಎಂಬ ವಿವರವನ್ನು ಡಾ. ಎಚ್. ಎಲ್. ನಾಗೇಗೌಡರು ತಮ್ಮ




'ಪ್ರವಾಸಿ ಕಂಡ ಇಂಡಿಯಾ'ದಲ್ಲಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಬಂಟರು ಸಮಾಜದ ಪ್ರಮುಖ ವರ್ಗದವರಾಗಿದ್ದು ಭೂಮಿಯ ಒಡೆತನ ಹೊಂದಿದ್ದರು ಎಂದು ಕಲ್ಪಿಸಿಕೊಳ್ಳಬಹುದಾಗಿದೆ. ಭೂಮಾಲಿಕ ವರ್ಗ ಸಹಜವಾಗಿಯೇ ಊರಿನಲ್ಲಿ ಗೌರವವನ್ನು ಪಡೆಯುತ್ತಿದ್ದುದರಿಂದ ದೈವ-ದೇವಸ್ಥಾನಗಳಲ್ಲಿ ತಮ್ಮದೇ ಸ್ಥಾನಗಳನ್ನು ಅಲಂಕರಿಸಿದ್ದವರು ಇವರು. ಕೇಶವ ಕೃಷ್ಣ ಕುಡ್ವರು ಹೇಳುವಂತೆ 'ದೇವಸ್ಥಾನಗಳಲ್ಲಾಗಲೀ ಭೂತಸ್ಥಾನಗಳಲ್ಲಾಗಲೀ ಅಥವಾ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಾಗಲೀ ಸಮಾಜದ ಮೇಲ್ವರ್ಗವಾದ ಬ್ರಾಹ್ಮಣ ಸಮುದಾಯದ ನಂತರದ ಸ್ಥಾನ ಈ ಬಂಟರದಾಗಿತ್ತು'.

ತುಳುನಾಡಿನ ಹೆಸರಾಂತ ಮನೆತನಗಳಲ್ಲಿ ಬಂಟರ 'ಕಕ್ವಗುತ್ತಿ'ಗೆ ನೂರಾರು ವರ್ಷಗಳ ಇತಿಹಾಸವಿದೆ. ಬಂಟ ಸಮುದಾಯದಲ್ಲಿ ಗೌರವದ ಸಂಕೇತವಾಗಿ ಮನೆತನಕ್ಕೆ ತನ್ನದೇ ಆದ ವಿಶಿಷ್ಟ ಹೆಸರುಗಳಿರುವುದು ಪದ್ಧತಿ. ಕೆಲವು ಪ್ರತಿಷ್ಠಿತ ಮನೆತನಗಳನ್ನು ಬೀಡು, ಬಾಳಿಕೆ, ಪರಾರಿ, ಅರಂತಡೆ ಹಾಗೂ 'ಗುತ್ತು' ಎನ್ನುವ ಹೆಸರುಗಳಲ್ಲಿ ಗುರುತಿಸುತ್ತಾರೆ. ಸಮಾಜದ ಗೌರವಾನ್ವಿತ 'ಕಕ್ವಗುತ್ತಿ'ನಲ್ಲಿ ನಿಟ್ಟೆಗುತ್ತು ಬೆರ್ಮು ಅಡ್ಯಂತಾಯ ಮತ್ತು ಕಕ್ವಗುತ್ತು ಅಮ್ಮು ಶೆಡ್ತಿ ದಂಪತಿಯವರ ಸುಪುತ್ರರಾದ ಕಾಳಪ್ಪ ಶೆಟ್ಟರು ಕ್ರಿ. ಶ. 1816ರಲ್ಲಿ ಜನಿಸಿದ್ದರು. ಗುತ್ತಿನ ಗತ್ತಿನಿಂದಲೇ ಬೆಳೆದ ಕಾಳಪ್ಪ ಶೆಟ್ಟರು ಮನೆತನದ ನಡಾವಳಿಗಳಿಗೆ ಭಂಗ ಬಾರದಂತೆ ತುಂಡರಸರಾಗಿಯೇ ಬಾಳಿದವರು. ತನ್ನ ಆಡಳಿತಾವಧಿಯಲ್ಲಿ ಜನಾದರಣೀಯರಾಗಿದ್ದು ಪಾರಂಪರಿಕವಾಗಿ ಬಂದ ಸಂಪ್ರದಾಯಗಳನ್ನು ಯಥಾವತ್ತಾಗಿ ಪಾಲಿಸುತ್ತಾ, ಧರ್ಮದೇವರುಗಳ ಮೇಲೆ ಅಪಾರವಾದ ಭಯಭಕ್ತಿಗಳನ್ನಿಟ್ಟುಕೊಂಡು ಬಾಳಿ ಬದುಕಿದವರು.




ಜಲಾವೃತ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮುಲ್ಕಿ



ಕಕ್ವಗುತ್ತು ಗುಡ್ಡೆ ಶಾಲೆ






ಸಾಹುಕಾರ ಕಾಳಪ್ಪ ಶೆಟ್ಟರ ''ದೊಡ್ಡಮನೆ''



ಸಾಹುಕಾರ ಕಾಳಪ್ಪ ಶೆಟ್ಟಿ



ಕೋಟೆಕೇರಿಯಲ್ಲಿರುವ ''ಹೊಸ ಮನೆ''

ಆದುದರಿಂದಲೇ ಕಕ್ವಗುತ್ತು ಸಾಹುಕಾರ್ ಕಾಳಪ್ಪ ಶೆಟ್ಟರು ಎಂಬ ಅಭಿದಾನದಿಂದ ಹೆಸರು ಪಡೆದವರು. ತನ್ನ ಜೀವಿತ ಕಾಲದಲ್ಲಿ ಮಾಡಿದ ಸಾಧನೆಯಿಂದ ಅವರ ಹೆಸರು ಶಾಶ್ವತವಾಗಿ ಆಚಂದ್ರಾರ್ಕವಾಗಿ ಉಳಿಯುವಂತಾಗಿದೆ.

ಕ್ರಿ. ಶ. 3ನೇ ಶತಮಾನದಲ್ಲಿ ರಾಜನಾಗಿದ್ದ ಧರ್ಮಪಾಲನ ಕಾಲದಲ್ಲಿ ಕೇರಳದ ಬಪ್ಪಬ್ಯಾರಿಯ ನೇತೃತ್ವದಲ್ಲಿ ನಿರ್ಮಾಣಗೊಂಡವಳೆಂಬ ಐತಿಹ್ಯದ ಜಲದುರ್ಗಾ ಪರಮೇಶ್ವರಿಯು ಬಹಳ ಪುರಾತನ ಕಾಲದಿಂದಲೇ ನಂಬಿದ ಭಕ್ತರ ರಕ್ಷಕಳಾಗಿ ಇಂಬುಕೊಡುತ್ತಾ ಬಂದವಳು. 'ಮೂಲಿಕಾಪುರ' ಮೂಲ್ಕಿಯಾಗಿ, ಕಾಲಾಂತರದಲ್ಲಿ ತನ್ನ ಹೆಸರನ್ನು ಹ್ರಸ್ವಗೊಳಿಸಿಕೊಂಡಾಗಲೂ ಜನರ ಭಕ್ತಿ ಭಾವಗಳಿಗೆ ಚ್ಯುತಿ ಬರಲಿಲ್ಲ. ಈ ಪುರಾತನ ದೇವಾಲಯದ ಆಡಳಿತವನ್ನು ಮೂಲ್ಕಿಯ ಕಕ್ವಗುತ್ತಿನ ಯಜಮಾನರ ಅಳಿಯ ಸಂತಾನ ಕಾಯಿದೆ ಪ್ರಕಾರ ನಡೆಸುತ್ತಿದ್ದರು. ಅದೇ ಪ್ರಕಾರ ಆಡಳಿತವನ್ನು 1859ರಲ್ಲಿ ಮೂಲ್ಕಿ ಕಕ್ವಗುತ್ತು ಸಾಹುಕಾರ ಕಾಳಪ್ಪ ಶೆಟ್ಟರು ವಹಿಸಿಕೊಂಡು ಮೊಕ್ತೇಸರರಾದರು. ಬಪ್ಪನಾಡು ಕ್ಷೇತ್ರದ ಮೊಕ್ತೇಸರತನ ಕಾಳಪ್ಪ ಶೆಟ್ಟರು ಹಾಕಿದ ನಾಂದಿಯಿಂದಾಗಿ ಇಂದಿಗೂ ಆ ಮನೆತನದಲ್ಲಿ ಉಳಿಯುವಂತಾಗಿದೆ. ತನ್ನ ಮೊಕ್ತೇಸರಿಕೆಯಲ್ಲಿ ದೇವಸ್ಥಾನದ ಸರ್ವತೋಮುಖ ಬೆಳವಣಿಗೆಗೆ ಅಹರ್ನಿಶಿಯಾಗಿ ದುಡಿದ ಕಾಳಪ್ಪ ಶೆಟ್ಟರು ದೇವಸ್ಥಾನದ ಇತಿಹಾಸದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗುವಂತೆ ಮಾಡಿದ್ದಾರೆ.

ಕಕ್ವಗುತ್ತು ಸಾಹುಕಾರ ಕಾಳಪ್ಪ ಶೆಟ್ಟರು ಆಗಿನ ಕಾಲದಲ್ಲಿ ಊರಿನ ಗಣ್ಯ ವ್ಯಕ್ತಿಗಳಾಗಿದ್ದು ಸಮಾಜದ ಜನರಿಗೆ ಮಾರ್ಗದರ್ಶಕ ವ್ಯಕ್ತಿತ್ವವನ್ನು ನೀಡುವಂತ ವ್ಯಕ್ತಿಯು ಕೂಡಾ. ತನ್ನ ವಂಶದ ಹಲವು ತಲೆಮಾರುಗಳಿಗೆ ಆರಾಧ್ಯ ದೈವವಾಗಿ ಕಾಣಿಸಿಕೊಂಡವರು.



ಬದುಕಿನಲ್ಲಿ ಶಿಸ್ತು, ನಿಷ್ಠೆಯನ್ನು ವ್ರತದಂತೆ ಕಾಪಾಡಿಕೊಂಡು ಬಂದು ತನ್ನ ಮುಂದಿನ ಪೀಳಿಗೆಯ ಯುವ ಜನರಿಗೆ ದಾರಿದೀಪವಾಗಿ ಬೆಳಗಿದವರು. ಧಾರ್ಮಿಕ ವಿಧಿ-ವಿಧಾನಗಳಲ್ಲಿ ಅತ್ಯಂತ ನಿಷ್ಠರಾಗಿದ್ದು, ಬಪ್ಪನಾಡು ದೇವಸ್ಥಾನದ ಸ್ಥಾಪಕ ಮೊಕ್ತೇಸರರಾದ ಮೇಲೆ ದೇವಸ್ಥಾನದ ಅಭಿವೃದ್ಧಿಗಾಗಿ ಸಾಕಷ್ಟು ಉಂಬಳಿಗಳನ್ನು ಬಿಟ್ಟು ಧಾರ್ಮಿಕ ಕಾರ್ಯಗಳು ಅಡಚಣೆಯಿಲ್ಲದೆ ಮುಂದುವರಿಯುವುದಕ್ಕೆ ಪ್ರೇರಣೆ ನೀಡಿದವರು. ಇದರಿಂದಾಗಿಯೇ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸೇವೆಯ ಪಟ್ಟಿಯಲ್ಲಿ ಅವರ ಹೆಸರು ಶಿರೋಭಾಗದಲ್ಲಿ ಉಳಿದುಕೊಂಡು ಈಗಲೂ ಗೌರವಿಸಲ್ಪಡುತ್ತಿದೆ.

'ಸುಮಾರು 1859-1860ರಿಂದ 19ನೇ ಶತಮಾನದ ಅಂತ್ಯದ ವರೆಗೆ ಅಂದರೆ 1899-1900ರವರೆಗೆ ನಲ್ವತ್ತು ವರ್ಷಗಳ ದೀರ್ಘಕಾಲ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿದ್ದುಕೊಂಡು ದೇವಸ್ಥಾನದ ಸರ್ವತೋಮುಖ ಅಭಿವೃದ್ಧಿಯ ಕಾರಣೀಕರ್ತರಾದ ಕಕ್ವಗುತ್ತಿನ ಶ್ರೀಮಾನ್ ದಿವಂಗತ ಸಾಹುಕಾರ್ ಕಾಳಪ್ಪ ಶೆಟ್ಟರು ಸೀಮೆಯ ಜನತೆಗೆ ಚಿರಸ್ಮರಣೀಯರು. ದೇವಸ್ಥಾನದಲ್ಲಿ ಜರಗುವ ಹೆಚ್ಚಿನ ವಿಶೇಷ ವಿನಿಯೋಗಾದಿಗಳಿಗಾಗಿ ಶ್ರೀಯುತರು ಭೂಮಿಗಳನ್ನೂ, ಭೂ ಉತ್ಪತ್ತಿಗಳನ್ನೂ ಉಂಬಳಿಯಾಗಿ ಬಿಟ್ಟಿದ್ದಲ್ಲದೆ ನಗದು ಹಣವನ್ನೂ ನಿರಖು ಠೇವಣಿಯಾಗಿರಿಸಿಕೊಂಡು, ಇವಕ್ಕೆ ದಾನ ಶಾಸನಗಳನ್ನು ಮಾಡಿಸಿರುತ್ತಾರೆ. ಮಂಗಳೂರು ತಾಲೂಕಿನ ಬಪ್ಪನಾಡು, ಕವತ್ತಾರು, ಮೆನ್ನಬೆಟ್ಟು, ತಾಳಿಪಾಡಿ, ಮಾನಂಪಾಡಿ, ಕಿಲ್ಪಾಡಿ ಗ್ರಾಮಗಳಿಂದಲೂ, ಕಾರ್ಕಳ ತಾಲೂಕಿನ ಕಸಬಾ, ಬೋಳ ಗ್ರಾಮಗಳಿಂದಲೂ, ಉಡುಪಿ ತಾಲೂಕಿನ ಫಲಿಮಾರು ಗ್ರಾಮದಿಂದಲೂ ನೂರಾರು ಅಕ್ಕಿಮುಡಿ ಗೇಣಿ ಬರುವಂತಹ ಭೂಮಿಗಳನ್ನು ಕ್ರಯಕ್ಕೆ ಪಡೆದು, ಆದ್ಯ ಮಹನೀಯರಿಂದ

ದಾನಶಾಸನ ರೂಪದಲ್ಲಿ ಪಡೆದುಕೊಂಡೂ, ಶ್ರೀ ದೇವಸ್ಥಾನ ನಿತ್ಯ ವಿನಿಯೋಗಾದಿಗಳ ಖರ್ಚು ವೆಚ್ಚಗಳಿಗೆ ಸೂಕ್ತ ವ್ಯವಸ್ಥೆಗಳನ್ನು ಮಾಡಿಸಿರುತ್ತಾರೆ. ದಾಖಲೆಗಳಿಂದ ಕಂಡುಬರುವಂತೆ ಶ್ರೀ ದೇವಸ್ಥಾನದ ವಿನಃ ಸುತ್ತಲೂ ಇರುವ ಪೌಳಿಗಳ ವಿಸ್ತರಣೆ, ಎದುರುಗೋಪುರ ಮತ್ತು ರಥಕೊಟ್ಟಿಗೆಗಳ ನಿರ್ಮಾಣ, ಸಮಾರಾಧನೆಗಳಿಗೆ ಅಗತ್ಯವಿರುವ ಹೆಚ್ಚಿನ ತಾಮ್ರದ ಪಾತ್ರೆಗಳನ್ನೂ, ಶ್ರೀ ದೇವರ ಅಲಂಕಾರಗಳಿಗೆ ಅಗತ್ಯವಿರುವ ಚಿನ್ನಬೆಳ್ಳಿಯ ಆಭರಣಗಳನ್ನೂ ಮಾಡಿಸಿರುತ್ತಾರೆ. ಈಗ ನಾವು ಕಾಣುವಂತಹ ಬ್ರಹ್ಮರಥವನ್ನೂ, ಸಣ್ಣ ರಥವನ್ನೂ ಮತ್ತು ಚಂದ್ರ ಮಂಡಲರಥವನ್ನು ನಿರ್ಮಿಸಿರುವುದು ಇವೆಲ್ಲವು ಕೂಡಾ ದಿವಂಗತ ಸಾಹುಕಾರ್ ಕಾಳಪ್ಪ ಶೆಟ್ಟಿಯವರು ತಮ್ಮ ಆಡಳಿತ ಸಮಯದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳಾಗಿರುವುದು ಉಲ್ಲೇಖಾರ್ಹ ವಿಷಯವಾಗಿರುತ್ತದೆ.'

ಕಾಳಪ್ಪಶೆಟ್ಟರ ಯಜಮಾನಿಕೆಯ ಕಾಲದಲ್ಲಿ, ಕಕವಗುತ್ತು, ಕೊಲ್ನಾಡುಗುತ್ತು ಮತ್ತೆ ಕಲ್ಲಿಮಾರು ಸೇರಿದಂತೆ, ಕುಟುಂಬದ ಈ ಮೂರು ಮನೆಗಳ ಆಸ್ತಿಯು, ಕಕ್ವ, ಅತಿಕಾರಿಬೆಟ್ಟು, ಮಾನಂಪಾಡಿ, ಕೊಲಕಾಡಿ, ಬಪ್ಪನಾಡು, ಕಿಲ್ಪಾಡಿ, ಬಳಕುಂಜೆ, ಸೀಮಂತೂರು, ಕಾರ್ನಾಡು, ಚೇಳ್ಯಾರು, ಉಳೆಪಾಡಿ, ಕೊಲ್ನಾಡು, ಹಳೆಯಂಗಡಿ, ಪಾವಂಜೆ ಸಹಿತ 14 ಗ್ರಾಮಗಳಲ್ಲಿ ಹರಡಿದ್ದು ಈ ಪರಿಸರದಲ್ಲಿ ಅತ್ಯಂತ ಸಿರಿನೆಲೆಯ ಮನೆಯಾಗಿತ್ತು. ಮೂಲ್ಕಿಯ ಸೀಮೆಯ ಅರಸರಿಗೆ ಸರಿಸಾಟಿಯಾಗಿ ಮೆರೆದಿತ್ತು.

ದೈವಭಕ್ತ ಕಾಳಪ್ಪ ಶೆಟ್ಟರ ಜನ್ಮಶತಾಬ್ಧಿಗೆ ಸರಿಯಾಗಿ 30 ಎಪ್ರಿಲ್ 1915ರಲ್ಲಿ ಕಕ್ವಗುತ್ತಿನಲ್ಲಿ ಇನ್ನೊಂದು ದಿವ್ಯಚೇತನದ ಉಗಮವಾಯಿತು. ದೈವಭಕ್ತಿಗೆ ಇನ್ನೊಂದು ಹೆಸರಾದ ಕಾಳಪ್ಪ



ಶೆಟ್ಟರ ಭಾಗ್ಯ ವಿಶೇಷವೋ ಎನ್ನುವಂತೆ ಅದೇ ವಂಶದಲ್ಲಿ ಬೆಳೆದ ಕುಡಿಯೊಂದು ರಾಷ್ಟ್ರಮಟ್ಟದಲ್ಲಿ ವಿಜೃಂಭಿಸಿತು. ಕಾಳಪ್ಪ ಶೆಟ್ಟರ ವಂಶವಾಹಿನಿ ನೂರು ವರ್ಷಗಳ ತರುವಾಯ ಇನ್ನೊಂದು ಹೆಸರಿನಿಂದ ಗುರುತಿಸಿಕೊಂಡುದು ವಿಶೇಷವೇ ಸರಿ. ಅದು ಯಾರೂ ಅಲ್ಲ; ಬ್ಯಾಂಕಿಂಗ್ ಕ್ಷೇತ್ರದಲ್ಲಿ, ಅದ್ವಿತೀಯ ಸಾಧನೆ ಮಾಡಿದ ಮೂಲ್ಕಿ ಸುಂದರರಾಮ ಶೆಟ್ಟಿಯವರು. ವಿಜಯಾ ಬ್ಯಾಂಕಿನ ಚುಕ್ಕಾಣಿ ಹಿಡಿದು ಸುದೀರ್ಘಕಾಲ ಹುಟ್ಟು ಹಾಕಿ, ತೀರ ಸೇರಬೇಕಾದ ಗಮ್ಯವನ್ನು ದಿಟ್ಟವಾಗಿಯೇ ತಲುಪಿದ ಧೀರೋದಾತ್ತ ನಾವಿಕ, ನಾಯಕ ಅವರು.

# ಬಾಲ್ಯ ಮತ್ತು ವಿದ್ಯಾಭ್ಯಾಸ


ಕಕ್ವಗುತ್ತು ಸಾಹುಕಾರ ಕಾಳಪ್ಪ ಶೆಟ್ಟರ ವಂಶವಾಹಿನಿಯಲ್ಲಿ ಶ್ರೀಯುತ ದಾಸಪ್ಪ ಶೆಟ್ಟರು 'ಮಾತನಾಡುವ ದೇವರೆಂದೇ' ಪ್ರಸಿದ್ಧರಾದವರು. ಪ್ರಸ್ತುತ ಮನೆತನದಲ್ಲಿ ಹಲವಾರು ಮಹನೀಯರು ಅಭಿನಂದನೀಯರಾಗಿ ಪ್ರಖ್ಯಾತರಾಗಿದ್ದಾರೆ. ಇಂತಹ ಮಹನೀಯರ ತೇಜ ಪುಂಜಗಳೆಲ್ಲಾ ಒಂದೆಡೆ ಸೇರಿದಂತೆ, ಜನರ ಆಶೀರ್ವಾದ ಸಂಚಯಗಳೇ ಪುಣ್ಯಪುಂಜವಾಗಿ ಮಾನವ ರೂಪವೆನ್ನು ಪಡೆದಂತೆ 1915 ಎಪ್ರಿಲ್ 30ರಂದು ಸೀತಮ್ಮ ಶೆಡ್ತಿಯವರಿಗೆ ಏಕಮಾತ್ರ ಗಂಡು ಮಗುವಿನ ಜನನವಾಯಿತು. ಎಲ್ಲಾ ಮಕ್ಕಳಂತೆಯೇ ಆ ಮಗು ಸಾಮಾನ್ಯವಾಗಿಯೇ ಬೆಳೆಯಿತು. ಮುಂದೊಂದು ದಿನ ಈ ಹುಡುಗ ಖ್ಯಾತಿಗಳಿಸುತ್ತಾನೆನ್ನುವ ಕುರುಹುಗಳೇನೂ ಆ ಮಗುವಿನಲ್ಲಿರಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯನಂತೆ ಬೆಳೆದ ಈ ಮಗು ಅವಿಭಕ್ತ ಕುಟುಂಬದ ಮನೆಯಲ್ಲಿ ಉಳಿದ ಮಕ್ಕಳೊಂದಿಗೆ ತಾನೂ ಒಬ್ಬ ಮಗುವಾಗಿ ಬೆಳೆದ. ಹಿರಿಯಡ್ಕ ಬೊಮ್ಮರಬೆಟ್ಟು ಮುದ್ದಣ್ಣ ಶೆಟ್ಟಿ ಮತ್ತು ಸೀತಮ್ಮ ಶೆಡ್ತಿಯವರಿಗೆ ಆರತಿಗೂ ಕೀರ್ತಿಗೂ ಎನ್ನುವಂತೆ ಒಬ್ಬನೇ ಮಗನಾಗಿದ್ದುದು ಆ ಮಗುವಿನ ಮೇಲೆ ವಿಶೇಷವಾದ ಪ್ರೀತಿ ವಾತ್ಸಲ್ಯಗಳಿಗೆ ಕಾರಣವಾಗಿರಬಹುದು. ಅವಿಭಕ್ತ ಕುಟುಂಬ ಪದ್ಧತಿಯ ಕಕ್ವಗುತ್ತಿನಲ್ಲಿ ಮಾತ್ರವಲ್ಲ ಅಳಿಯಕಟ್ಟಿಗೆ ಒಳಪಟ್ಟ ಬಂಟ ಸಮುದಾಯದಲ್ಲಿ ತಾಯಿ ಮನೆಗೆ ವಿಶೇಷವಾದ ಮಹತ್ವವಿದೆ. ಮದುವೆ ಮಾಡಿ ಗಂಡನ ಮನೆಗೆ ಹೋದ ಹೆಣ್ಣುಗಳೂ ತಮ್ಮ ಪ್ರಸವಕಾಲದಲ್ಲಿ ತಾಯಿ ಮನೆಗೆ ಬರುವುದು ವಾಡಿಕೆ. ಇದರಿಂದಾಗಿಯೇ ತುಂಬಿದ ಸಂಸಾರ. ಪ್ರಸವ, ತೊಟ್ಟಿಲು, ಮುಂಜಿ, ಮದುವೆ ಎಂದು ಬಿಡುವಿಲ್ಲದ ಕಾರ್ಯಕ್ರಮಗಳು.




ಯಾವತ್ತೂ ಗೌಜಿ, ಗದ್ದಲ. ಇಂಥ ಸನ್ನಿವೇಶದಲ್ಲಿ ತಂದೆತಾಯಿಯರ ಅಕ್ಕರೆಯ ಮಗನಾಗಿ ಸುಂದರರಾಮ ಬೆಳೆದರು. ಬಾಲ್ಯ ಸಹಜ ಮಕ್ಕಳಾಟಿಕೆಯಲ್ಲಿ, ಉಳಿದ ಮಕ್ಕಳೊಂದಿಗೆ ಆಟಪಾಠಗಳಲ್ಲಿ ಸಹಸ್ಪರ್ಧಿಯಾಗಿ ಬೆಳೆದಂತೆಲ್ಲ ತಂದೆತಾಯಿಯರ ಅಕ್ಕರೆಯೇ ಆಸರೆಯಾಗಿ ಶೆಟ್ಟರ ವ್ಯಕ್ತಿತ್ವವನ್ನು ರೂಪಿಸಿತು. ತನ್ನ ಬಾಲ್ಯದ ಹೆಚ್ಚಿನ ದಿನಗಳನ್ನು ಅವರು ಕಳೆದುದು ಕಕ್ವಗುತ್ತಿನಲ್ಲಿಯೇ. ಆದುದರಿಂದಲೇ ಅವರ ಹೆಸರಿನ ಜೊತೆಗೆ 'ಕಕ್ವಗುತ್ತು' ಎನ್ನುವ ಮನೆತನದ ಹೆಸರು ಶಾಶ್ವತವಾಯಿತು.

ಸುಂದರರಾಮ ಶೆಟ್ಟರು ತಮ್ಮ 2 ವರ್ಷದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಾರ್ಕಳದಲ್ಲಿ ಪ್ರಾರಂಭಿಸಿದರೆಂದು ತಿಳಿದು ಬರುತ್ತದೆ. ಆಗ ಅವರ ಚಿಕ್ಕಮ್ಮ ಕೃಷ್ಣ ಶೆಡ್ತಿ ಹಾಗೂ ಡಾ। ಮಹಾಬಲ ಅಡ್ಯಂತಾಯರ ಮನೆಯಲ್ಲಿ ನಿಂತು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಇದೇ ವೇಳೆ ಇವರ ತಂದೆಯವರು ದೈವಾಧೀನರಾದ ಕಾರಣ ಸಂಪ್ರದಾಯದಂತೆ ತಾಯಿ ಸೀತಮ್ಮ ಶೆಡ್ತಿಯವರು ಬೊಮ್ಮರಬೆಟ್ಟು ಮನೆಯನ್ನು ಬಿಟ್ಟು ತಾಯಿಯ ಮನೆಯಾದ ಕಕ್ವಗುತ್ತು ಮನೆಗೆ ಬಂದು ನೆಲೆ ನಿಂತರು.

ಸುಂದರರಾಮ ಶೆಟ್ಟಿಯವರು ತಮ್ಮ ಮೂರನೆಯ ಮತ್ತು ನಾಲ್ಕನೆಯ ತರಗತಿಯ ಶಿಕ್ಷಣವನ್ನು ಮೂಲ್ಕಿಯಲ್ಲಿ ಅದೇ ವರ್ಷ ಪ್ರಾರಂಭಗೊಂಡ (1924) ಪದ್ಮನಾಭ ಸರ್ವೋತ್ತಮ ಕಾಮತ್ ಪ್ರೈಮರಿ ಶಾಲೆ, ಕೊಲೆಕಾಡಿಯಲ್ಲಿ ಪೂರೈಸಿದರು. ಈ ಶಾಲೆಯಲ್ಲಿ ಅವರಿಗೆ ತನ್ನ ವ್ಯಕ್ತಿತ್ವದ ಬೆಳವಣಿಗೆಗೆ ಬೇಕಾದ ಮೂಲ ಶಿಕ್ಷಣ ದೊರೆಯಿತು. ನಂತರ ಪ್ರಾಥಮಿಕ ಹಂತದ ಏಳನೇ ತರಗತಿಯವರೆಗಿನ ವಿದ್ಯಾಭ್ಯಾಸವನ್ನು ಮೂಲ್ಕಿಯ ಮಿಶನ್ ಶಾಲೆ (ಈಗಿನ ಬೋರ್ಡ್ ಶಾಲೆ)ಗೆ ಸೇರಿ, ವಿದ್ಯಾಭ್ಯಾಸವನ್ನು ಸಮರ್ಥವಾಗಿ





ಯೂನಿಯನ್ ಕ್ಲಬ್, ಮೂಲ್ಕಿ




ಕಕ್ವಗುತ್ತು ಮನೆ







ಶಾಂಭವಿ ಗಾರ್ಡನ್



ಬೋರ್ಡ್ ಶಾಲೆ




ಮುನ್ಸಿಫ್ ಕೋರ್ಟ್ ಕಟ್ಟಡ



ಟೆನಿಸ್ ಕೋರ್ಟ್





ಕೊಲೆಕಾಡಿ ಶಾಲೆಯ ಅಧ್ಯಾಪಕರು



ಸರ್ವೋತ್ತಮ ಕಾಮತ್



ಪುತ್ತೂರು ಪದ್ಮನಾಭ ಕಾಮತ್



ಕೊಲೆಕಾಡಿ ಹಿರಿಯ ಪ್ರಾಥಮಿಕ ಶಾಲೆ, ಅತಿಕಾರಿಬೆಟ್ಟು

ನಿಭಾಯಿಸಿದರು. ಈ ಎರಡು ಶಾಲೆಗಳು ಮತ್ತು ಅಲ್ಲಿಯ ಅಧ್ಯಾಪಕರ ಮಾರ್ಗದರ್ಶನ ದಿಂದ ಸುಂದರರಾಮ ಶೆಟ್ಟಿಯವರ ವ್ಯಕ್ತಿತ್ವಕ್ಕೆ ಶಕ್ತಿಯನ್ನು ತುಂಬಿತು. ಕೊಲೆಕಾಡಿ ಶಾಲೆಯ ಪದ್ಮನಾಭ ಸರ್ವೋತ್ತಮ ಕಾಮತರು ಮತ್ತು ಮಿಶನ್ ಶಾಲೆಯ ಭೋಜರಾವ್ (ಈಗಿನ ಅದಮಾರು ಮಠ ಸ್ವಾಮೀಜಿಯವರ ಪೂರ್ವಾಶ್ರಮದ ತೀರ್ಥರೂಪರು) ರವರು ಸುಂದರರಾಮ ಶೆಟ್ಟಿಯವರ ವ್ಯಕ್ತಿತ್ವ ರೂಪಿಸಿದ ರೂವಾರಿಗಳು ಎನಿಸಿದರು. ಈ ಇಬ್ಬರು ಮಹನೀಯರ ಮಾರ್ಗದರ್ಶನದಿಂದ ಸುಂದರರಾಮನ ವ್ಯಕ್ತಿತ್ವ ಸಾರ್ಥಕವಾಗಿ ಬೆಳೆಯುವುದಕ್ಕೆ ಬುನಾದಿಯನ್ನು ಹಾಕಿ ಕೊಟ್ಟಿತು. ಮಕ್ಕಳ ಬದುಕಿನಲ್ಲಿ ಅಧ್ಯಾಪಕರ ಪಾತ್ರದ ಪ್ರಾಮುಖ್ಯತೆಯನ್ನು ಈ ಈರ್ವ ಮಹನೀಯರು ತೋರಿಸಿಕೊಟ್ಟವರು. ಇಂಗ್ಲೀಷ್ ಭಾಷೆಯಲ್ಲಿ ಪ್ರಭುತ್ವವನ್ನು ಸಾಧಿಸಿದ್ದ ಈ ಈರ್ವ ಮಹನೀಯರು ತಮ್ಮ ಜ್ಞಾನ ಸಂಪತ್ತನ್ನೆಲ್ಲಾ ವಿದ್ಯಾರ್ಥಿಗಳಿಗೆ ಧಾರೆ ಎರೆಧವರು. 'ಗುರುಭ್ಯೋ ನಮಃ' ಎನ್ನುವ ಸೂಕ್ತಿಗೆ ಅನುಗುಣವಾದ ವ್ಯಕ್ತಿತ್ವವನ್ನು ಹೊಂದಿದ್ದ ಈ ಅಧ್ಯಾಪಕರ ವ್ಯಕ್ತಿತ್ವ ಹುಡುಗ ಸುಂದರರಾಮನ ಆಕರ್ಷಣೆಯ ಮೂಲವಾಗಿತ್ತು. ಅಂತಹುದೇ ವ್ಯಕ್ತಿತ್ವವನ್ನೂ, ಭಾಷಾ ಪ್ರೌಢಿಮೆಯನ್ನೂ ತಾನೂ ಪಡೆದುಕೊಳ್ಳಬೇಕೆಂದು ಸಣ್ಣ ಪ್ರಾಯದಲ್ಲೇ ಆಶಿಸಿದ ಸುಂದರರಾಮ ಶೆಟ್ಟರು ಅವರ ಮಾರ್ಗದರ್ಶನದ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಮುಂದೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ, ಅದ್ವಿತೀಯ ವ್ಯಕ್ತಿತ್ವವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾದ ಭಾಷಾ ಪ್ರಭುತ್ವವನ್ನು ಒದಗಿಸಿಕೊಟ್ಟವರು ಈ ಈರ್ವ ಅಧ್ಯಾಪಕರು.

ತನ್ನ ಏಳನೆಯ ತರಗತಿಯ ವಿದ್ಯಾಭ್ಯಾಸವನ್ನು ಮಿಶನ್ ಶಾಲೆಯಲ್ಲಿ ಕಲಿತ ಸುಂದರರಾಮ ಶೆಟ್ಟಿಯವರು ಹೆಚ್ಚಿನ



ವಿದ್ಯಾಭ್ಯಾಸಕ್ಕಾಗಿ ಆಗಲೇ ಪ್ರಖ್ಯಾತವೆನಿಸಿದ ಮಂಗಳೂರಿನ ಸೈಂಟ್ ಎಲೋಶಿಯಸ್ ಹೈಯರ್ ಸೆಕೆಂಡರಿ ಸ್ಕೂಲ್‌ಗೆ ಸೇರಿದರು. ಆಧುನಿಕ ಕಾಲದಲ್ಲಿ ಮಂಗಳೂರಿಗೂ ಮೂಲ್ಕಿಗೂ ಹೆಚ್ಚಿನ ಅಂತರವಿಲ್ಲದಿದ್ದರೂ ಸುಂದರರಾಮ ಶೆಟ್ಟಿಯವರ ವಿದ್ಯಾಭ್ಯಾಸದ ಕಾಲದಲ್ಲಿ ಮಂಗಳೂರು ಮೂಲ್ಕಿಗೆ ಬಹಳಷ್ಟು ದೂರದಲ್ಲಿಯೇ ಇತ್ತು. ದಿನನಿತ್ಯ ಮೂಲ್ಕಿಗೆ ಬಂದು ಹೋಗುವುದಕ್ಕೆ ಅಸಾಧ್ಯವಾದುದರಿಂದ ಸುಂದರರಾಮ ಶೆಟ್ಟಿಯವರು ಮಂಗಳೂರಿನಲ್ಲಿಯೇ ಉಳಿಯಬೇಕಾಗಿ ಬಂತು. ಆಗ ಅವರ ಸಹಾಯಕ್ಕೆ ಬೋಳಾರು ಮನೆಯಲ್ಲಿ ನೆಲೆಸಿದ್ದ ಅವರ ದೊಡ್ಡಮ್ಮ (ತಾಯಿಯ ಅಕ್ಕ) ರಾಧಮ್ಮ ಹಾಗೂ ಅವರ ಪತಿ ಸುಬ್ಬ ರೈ ತಮ್ಮ ಮನೆಯಲ್ಲಿ ಆಶ್ರಯ ನೀಡಿದರು. ಸುಬ್ಬ ರೈಯವರು ಮದ್ರಾಸಿನ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವರ ಮಾವ ಮಂಗಳೂರಿನಲ್ಲಿ ತಹಶೀಲ್ದಾರಾಗಿದ್ದರು. ಉತ್ತಮ ವಿದ್ಯಾಭ್ಯಾಸವನ್ನು ಪಡೆದ, ಉದಾತ್ತ ಸಂಸ್ಕೃತಿಯ ಮನೆತನದ ಸಾಮೀಪ್ಯ ಸುಂದರರಾಮ ಶೆಟ್ಟಿಯವರ ವ್ಯಕ್ತಿತ್ವವನ್ನು ತಿದ್ದುವುದಕ್ಕೆ, ಇನ್ನಷ್ಟು ಹೊಳಪನ್ನು ನೀಡುವುದಕ್ಕೆ ಸಹಕರಿಸಿತು. ತನ್ನ ಮೂರು ವರ್ಷದ ಹೈಸ್ಕೂಲು ವಿದ್ಯಾಭ್ಯಾಸವನ್ನು 1930ರಲ್ಲಿ ಸೈಂಟ್ ಎಲೋಶಿಯಸ್ ಹೈಸ್ಕೂಲಿನಲ್ಲಿ ಪೂರ್ತಿಗೊಳಿಸಿದ ಸುಂದರರಾಮ ಶೆಟ್ಟಿಯವರು ತನ್ನ ತವರೂರಿಗೆ ವಾಪಾಸಾದರು. ಆಗಲೇ ಬ್ಯಾಡ್‌ಮಿಂಟನ್ ಆಟದಲ್ಲಿ ಪಳಗಿದ್ದ ಶೆಟ್ಟರು ಅದನ್ನೊಂದು ಹವ್ಯಾಸವಾಗಿಯೇ ರೂಢಿಸಿಕೊಂಡಿದ್ದರು. ರಾಧಮ್ಮ ಮತ್ತು ಸುಬ್ಬರೈಯವರ ಒಬ್ಬಳೇ ಮಗಳು ಸುಮತಿಯವರು ಸುಂದರರಾಮರ

ಜೊತೆಯಲ್ಲೇ ಅಣ್ಣ ತಂಗಿಯರಂತೆ ಬೆಳೆದವರು. ಅವರ ಹೆತ್ತವರೂ ಇವರನ್ನು ಮಗನಂತೇ ಬೆಳೆಸಿದ್ದರು.

ತನ್ನ ಬದುಕಿನ ಅಮೂಲ್ಯ ವಿದ್ಯಾರ್ಥಿ ಜೀವನವನ್ನು ಮೂಲ್ಕಿ, ಮಂಗಳೂರಿನಲ್ಲಿ ಶೆಟ್ಟರು ಪೂರೈಸಿದರು. ತನ್ನ ರಜೆಯ ಕಾಲಾವಧಿಗಳಲ್ಲಿ ತಂದೆಯ ಮನೆಯಾದ ಹಿರಿಯಡ್ಕ ಬೊಮ್ಮಾರ ಬೆಟ್ಟಿಗೂ ಹೋಗಿ ಬರುವುದಿತ್ತು. ಆದರೆ ಬಾಲ್ಯದ ಹೆಚ್ಚಿನ ದಿನಗಳನ್ನು ಅವರು ಕಳೆದುದು ಅಜ್ಜಿ ಮನೆ ಮೂಲ್ಕಿಯ ಕಕ್ವಗುತ್ತಿನಲ್ಲಿಯೇ. ಅಜ್ಜಿಯ ಪ್ರೀತಿಯ ಮೊಮ್ಮಗನಾಗಿ, ತಂದೆತಾಯಿಯರ ಕಣ್ಮಣಿಯಾಗಿ ಬೆಳೆದ ಸುಂದರರಾಮ ಶೆಟ್ಟರು ತನ್ನ ಹೈಸ್ಕೂಲು ವಿದ್ಯಾಭ್ಯಾಸದ ನಂತರದಲ್ಲಿಯೇ ಸ್ವಲ್ಪ ಸಮಯವನ್ನು ಊರಲ್ಲಿ ಕಳೆಯಬೇಕಾಗಿ ಬಂತು. ಆಗಾಗಲೇ ಬ್ಯಾಡ್‌ಮಿಂಟನ್ ಆಟದಲ್ಲಿ ಪ್ರೌಢಿಮೆಯನ್ನು ಪಡೆದುಕೊಂಡಿದ್ದ ಶೆಟ್ಟರು ಆ ಕ್ಷೇತ್ರದಲ್ಲಿ ಚಾಂಪಿಯನ್ ಆಗಿದ್ದರು. ಮೂಲ್ಕಿಯ 'ಶಾಂಭವಿ ಗಾರ್ಡನ್'ನಲ್ಲಿ ನಡೆಯುವ ಬ್ಯಾಡ್‌ಮಿಂಟನ್ ಪಂದ್ಯಾವಳಿಯಲ್ಲಿ ಉಡುಪಿ, ಶಿರ್ವ, ಮಂಗಳೂರು, ಅಜೆಕಾರು ಮತ್ತು ಪುತ್ತೂರಿನಿಂದ ತಂಡಗಳು ಬರುತ್ತಿದ್ದವು. ಈ ಪಂದ್ಯಾವಳಿಗಳು ಹೆಚ್ಚಾಗಿ ರಾತ್ರಿ ಹೊತ್ತಿನಲ್ಲೇ ನಡೆಯುತ್ತಿದ್ದವು. ಆಧುನಿಕ ಹೊನಲು ಬೆಳಕಿನ ವ್ಯವಸ್ಥೆ ಆಗಿನ ಕಾಲದಲ್ಲಿ ಇಲ್ಲದಿದ್ದುದರಿಂದ ಪೆಟ್ರೋಮ್ಯಾಕ್ಸ್ ಬೆಳಕಿನ ಸಹಾಯದಲ್ಲಿ ಪಂದ್ಯಾವಳಿಗಳನ್ನು ನಡೆಸಿಕೊಟ್ಟ ಕೀರ್ತಿ ಸುಂದರರಾಮ ಶೆಟ್ಟಿ ಮತ್ತು ಅವರ ಗೆಳೆಯರಿಗೆ ಸಲ್ಲುತ್ತದೆ. ಭವಾನಿಶಂಕರ ಶೆಟ್ಟಿ, ಕಡವಿನ ಬಾಗಿಲಿನ ಸೀತ ಶೆಟ್ಟಿ, ಜಯ ಮಾರ್ಲ, ರತ್ನ ಶೆಟ್ಟಿ ಹಾಗೂ ಡಾ. ಶ್ಯಾಮ ಶೆಟ್ಟಿಯವರ ಬಳಿಯಲ್ಲಿ



ಕಂಪೌಂಡರ್ ಆಗಿದ್ದ ನಂಬಿಯಾರ್ - ಇವರೆಲ್ಲಾ ಸುಂದರರಾಮ ಶೆಟ್ಟಿಯವರ ಜೀವಕ್ಕೆ ಜೀವ ಕೊಡುವ ಸ್ನೇಹಿತರು ಮಾತ್ರವಲ್ಲ ಬ್ಯಾಡ್‌ಮಿಂಟನ್ ಆಟದಲ್ಲಿ ಸಹ ಆಟಗಾರರು. ಇಂಥ ಪ್ರಾಣ ಸ್ನೇಹಿತರನ್ನು ಸುಂದರರಾಮ ಶೆಟ್ಟಿಯವರು ತನ್ನ ಔನ್ನತ್ಯದ ಕಾಲದಲ್ಲಿ ಮರೆಯದೇ ತನ್ನಿಂದಾದ ಸಹಾಯವನ್ನು ನೀಡಿ ಜೊತೆ ಜೊತೆಗೆ ಮುನ್ನಡೆಸಿದ ಕೀರ್ತಿಗೂ ಭಾಜಕರಾಗುತ್ತಾರೆ.

ತಾನು ವಿದ್ಯಾಭ್ಯಾಸದಲ್ಲಿ ಪ್ರೌಢಿಮೆಯನ್ನು ಗಳಿಸಿದ್ದರೂ ಬದುಕಿನ ಬಗೆಗೆ ಯಾವುದೇ ಕನಸುಗಳನ್ನು ಕಟ್ಟಿಕೊಳ್ಳದ ಕಾಲವದು, ಬಿಡುವು ಸಿಕ್ಕಿದಾಗ ಬ್ಯಾಡ್‌ಮಿಂಟನ್ ಆಟ, ಮೂಲ್ಕಿಯ ಯೂನಿಯನ್ ಕ್ಲಬ್‌ನಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸ, ಪರಂಪರಾಗತವಾಗಿ ಬಂದ ಕಡವಿನ ಬಾಗಿಲಿನಲ್ಲಿ ತೆರಿಗೆಯನ್ನು ತೆಗೆದುಕೊಳ್ಳುವ ಭವಾನಿಶಂಕರ ಶೆಟ್ಟಿಯವರಿಗೆ ಸಹಾಯ, ಉಳಿದಂತೆ ಮೂಲ್ಕಿಯಲ್ಲಿ ಆಗಿನ ಕಾಲಕ್ಕೆ ಪ್ರಸಿದ್ಧ ಹೋಟೆಲುಗಳಾದ 'ದುರ್ಗಾಭವನ' ಮತ್ತು 'ಕೃಷ್ಣ ಭವನ'ದ ಚಹಾ ಸೇವನೆ ಹಾಗೂ ಅವುಗಳ ಮಾಲಿಕರಾದ ಎಂ. ಆರ್. ಭಟ್ ಮತ್ತು ಪಟ್ಟಾಭಿರಾಮ ಕಾಮತರುಗಳ ಜೊತೆಗೆ ಲೋಕಾಭಿರಾಮ. ಹೀಗೆ ತನ್ನ ಬದುಕಿನ ಕೆಲ ಸಮಯಗಳನ್ನು ಕಳೆದರು. ಕಡುವಿನ ಬಾಗಿಲಿನ ನೀಲಿಗಟ್ಟಿದ ಶಾಂಭವಿ ನದಿಯ ನೀರಿನಂತೆ ಬದುಕಿನ ಅನುಭವಗಳನ್ನು ಪ್ರೀತಿ, ಸ್ನೇಹಗಳನ್ನು ಅನುಭವಿಸಿದ್ದು ಆ ಕಾಲದಲ್ಲಿಯೇ.

# ಔದ್ಯೋಗಿಕ ಜೀವನ

ಸುಂದರರಾಮ ಶೆಟ್ಟಿಯವರು ಅಪರಿಮಿತವಾದ ಸಂಪತ್ತಿನ ಮನೆಯಲ್ಲಿಯೇ ಬೆಳೆದು ಬಂದವರು, ಭೂಮಾಲೀಕರಾಗಿ, ಗುತ್ತಿನಗತ್ತಿಗೆ ಅಂಟಿಕೊಳ್ಳಲು ಸಾಧ್ಯವಿರುವ ಸಮಯದಲ್ಲಿಯೇ ಬದುಕಿನ ಬೇರನ್ನರಸುತ್ತಾ ಹೊರಟ ವ್ಯಕ್ತಿ. ತಾನು ಸ್ವತಂತ್ರನಾಗಿ ತನ್ನ ಕಾಲಿನ ಮೇಲೆ ನಿಲ್ಲಬೇಕೆಂಬ ಹಂಬಲ ಅವರ ವ್ಯಕ್ತಿತ್ವದಲ್ಲಿ ಆಗಲೇ ಮೊಳಕೆಯೊಡೆದಿತ್ತು. ಆಳುಕಾಳುಗಳ ಮಧ್ಯೆ ರಾಜ ಮರ್ಯಾದೆಯಲ್ಲಿ ಬದುಕಬಹುದಾದ ಹಿನ್ನೆಲೆಯಿದ್ದರೂ, ಅದನ್ನೆಲ್ಲಾ ತ್ಯಜಿಸಿ ತನ್ನ ಕಾಲ ಮೇಲೆ ನಿಲ್ಲಲು ಅವರು ಪ್ರಯತ್ನಿಸಿದರು. ಪರಂಪರಾಗತ ವ್ಯವಸ್ಥೆಯಿಂದ ಹೊರಬಂದು, ಸ್ವತಂತ್ರವಾದ ಬದುಕನ್ನು ಅನುಭವಿಸಲು ಕಾತುರಗೊಂಡಿದ್ದರು ಎನ್ನುವಂತೆ 1932ನೇ ಇಸವಿಯಲ್ಲಿ 'ಏಷ್ಯಾಟಿಕ್' ಎಂಬ ಇನ್ಶೂರೆನ್ಸ್ ಕಂಪೆನಿಯಲ್ಲಿ ಏಜೆಂಟರಾಗಿ ಸೇರಿಕೊಂಡರು. ತನ್ನ ಕೆಲಸವನ್ನು ದಕ್ಷ ಮತ್ತು ಶಿಸ್ತಿನಿಂದ ಮಾಡುತ್ತಾ ಬಂದುದರಿಂದ ನಿಧಾನವಾಗಿ ಯಶಸ್ಸಿನ ಮೆಟ್ಟಲನ್ನು ಏರಿದರು. ಜನರಲ್ಲಿ ಪ್ರೀತಿ ವಿಶ್ವಾಸ ಗಳಿಸಿದರು. ಎರಡು ಮೂರು ವರ್ಷದ ಅನುಭವದ ನಂತರ ಸುಭಾಸ್‌ಚಂದ್ರ ಭೋಸ್ ಮತ್ತು ಶರಶ್ಚಂದ್ರ ಭೋಸರಿಂದ ಪ್ರಾರಂಭಿಸಲ್ಪಟ್ಟ 'ವಾರ್ಡನ್' ಎಂಬ ಇನ್ಶೂರೆನ್ಸ್ ಕಂಪೆನಿಯಲ್ಲಿ ಮೆನೇಜರ್ ಆಗಿ ಮಂಗಳೂರಿನಲ್ಲಿ ಬಡ್ತಿ ಹೊಂದಿದರು. ಇಲ್ಲಿ ಸುಮಾರು 1935ರಿಂದ 43ರ ತನಕ 8 ವರ್ಷಗಳ ಸೇವೆಯನ್ನು ಸಲ್ಲಿಸಿ ಮಂಗಳೂರಿನಲ್ಲಿ ಒಳ್ಳೆಯ ಹೆಸರನ್ನು ಗಳಿಸಿದರು. ಅದೇ ಸಮಯದಲ್ಲಿ ಇವರ ಹತ್ತಿರ ಸಂಬಂಧಿ ರಂಗನಾಥ ಶೆಟ್ಟಿಯವರು ಮಂಗಳೂರು ಶಾಖೆಯಲ್ಲಿ ಗುಮಾಸ್ತರಾಗಿದ್ದರು. ಇದರ ಮಧ್ಯ 1937ರಲ್ಲಿ ತನ್ನ ಸೋದರತ್ತೆಯ ಮಗಳಾದ



ಕುಸುಮಾವತಿಯವರೊಂದಿಗೆ ವೈವಾಹಿಕ ಜೀವನವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ ಇವರು ಬೋಳಾರಿನ ಸುಬ್ಬ ರೈಯವರ ಮನೆಯಲ್ಲಿ ವಾಸ ಮಾಡಿ ವಾರಕ್ಕೊಮ್ಮೆ ಮೂಲ್ಕಿಯ ಹೊಸ ಮನೆಗೆ ಬಂದು ಹೋಗುತ್ತಿದ್ದರು. ಹೆಂಡತಿ ಮಕ್ಕಳೆಲ್ಲರೂ ಈ ಸಮಯದಲ್ಲಿ ಮೂಲ್ಕಿಯ ಹೊಸಮನೆಯಲ್ಲಿಯೇ ಇದ್ದು ಸಂಸಾರ ನಡೆಸುತ್ತಿದ್ದರು. ಇದೇ ವೇಳೆ ರಂಗನಾಥಶೆಟ್ಟಿಯವರು ಮಂಗಳೂರಿನ ಫಳ್ನೀರಿನಲ್ಲಿ ವಾಸವಾಗಿದ್ದರು. ರಜಾ ದಿನಗಳಲ್ಲಿ ಮೂಲ್ಕಿಗೆ ಬಂದು ಕಕ್ವಗುತ್ತಿನ ದೊಡ್ಡಮನೆ ಮತ್ತು ಹೊಸಮನೆಗಳ ಬಾಂಧವ್ಯವನ್ನು ಇರಿಸಿದ್ದರು. ಈ ಸಮಯದಲ್ಲಿಯೇ ತನ್ನ ಒಡನಾಡಿಗಳಾಗಿದ್ದ ಭವಾನಿಶಂಕರ ಶೆಟ್ಟಿ ಮತ್ತು ನಂಬಿಯಾರ್‌ಗೆ ತನ್ನ ಶಾಖೆಯ ಇನ್ಶೂರೆನ್ಸ್ ಏಜೆನ್ಸಿಯನ್ನು ಕೊಡಮಾಡುವ ಮೂಲಕ ಅವರ ಬದುಕಿಗೂ ದಾರಿ ದೀಪವಾದರು. ಅವರು ಕೂಡಾ ಒಳ್ಳೆಯ ಇನ್ಶೂರೆನ್ಸ್ ಬಿಸಿನೆಸ್ ಮಾಡಿ ಮುಂದೆ ಒಳ್ಳೆಯ ಹುದ್ದೆಯನ್ನು ಕೂಡಾ ಪಡೆದರು. ಇವರಿಬ್ಬರಿಗೂ ಸುಂದರರಾಮ ಶೆಟ್ಟರು ಆತ್ಮೀಯರಾಗಿ ಆಗಾಗ ಮಾರ್ಗದರ್ಶನವನ್ನು ನೀಡುತ್ತಿದ್ದರು. ಈ ಸಮಯದಲ್ಲಿ ಮಂಗಳೂರಿನಲ್ಲಿ ಡಾ. ಬಿ. ಜೆ. ಶೆಟ್ಟಿಯವರು ಸುಂದರರಾಮ ಶೆಟ್ಟಿಯವರ ಇನ್ಶೂರೆನ್ಸ್ ವೈದ್ಯರಾಗಿದ್ದರು. ಮುಂದೆ ತನ್ನ ಸೋದರ ತಂಗಿ ಸುಮತಿ ಶೆಟ್ಟಿಯುವರನ್ನು ಇವರಿಗೆ ಮದುವೆ ಮಾಡಿಸಿ ಕೊಟ್ಟವರು ಇವರೇ. ಮೂಲ್ಕಿಯಲ್ಲಿ ಇದ್ದ ಸಮಯ ಕಪ್ಪು ಬಣ್ಣದ ವ್ಯಾನ್‌ಗಾರ್ಡ್ ಕಾರಿನಲ್ಲಿ ಇವರು ತಿರುಗುತ್ತಿದ್ದ ನೆನಪು ಇಂದಿಗೂ ಇದೆ.

ಜೀವನದಲ್ಲಿ ಹೆಚ್ಚಿನ ಉನ್ನತಿಯನ್ನು ಪಡೆಯಬೇಕೆಂಬ ಹೆಬ್ಬಯಕೆಯಿದ್ದಂತಹ ಸುಂದರರಾಮ ಶೆಟ್ಟರಿಗೆ ಅವರ ಸೋದರ ಮಾವನಾದ ಶ್ರೀಯುತ ಶ್ರೀನಿವಾಸ ಆಳ್ವರು ದಾರಿದೀಪವಾದರು. ಅವರು ಆಗ ಪೂನಾದಲ್ಲಿ ಪ್ರಸಿದ್ಧ ಹೋಟೇಲ್ ಮಾಲಿಕರಾಗಿದ್ದರು.

ಅವರ ಆಹ್ವಾನದ ಮೇರೆಗೆ ಪೂನಾಕ್ಕೆ ತೆರಳಿದ ಶ್ರೀ ಶೆಟ್ಟಿಯವರು 1942ನೇ ಇಸವಿಯಲ್ಲಿ ಕ್ರೆಸೆಂಟ್ ಇನ್ಶೂರೆನ್ಸ್‌ನಲ್ಲಿ ಸ್ವಲ್ಪ ಸಮಯ ಕೆಲಸ ಮಾಡಿ ಮುಂದೆ 1943ನೆಯ ಇಸವಿಯಿಂದ 51ನೇ ಇಸವಿಯವರೆಗೆ ಇದೇ ಇನ್ಶೂರೆನ್ಸ್ ಕಂಪೆನಿಯಲ್ಲಿ ಮೆನೇಜಿಂಗ್ ಡೈರೆಕ್ಟರ್ ಆಗಿ ಮುಂಬೈಯಲ್ಲಿ ಒಳ್ಳೆಯ ಹೆಸರನ್ನು ಗಳಿಸಿದರು. ಈ ಸಮಯದಲ್ಲಿ ಮುಂಬೈಯಲ್ಲಿ ಕಾರಣಾಂತರದಿಂದ ಕೆಲಸವನ್ನು ಬಿಟ್ಟು ತನ್ನ ತಾಯ್ನಾಡಿಗೆ ಬಂದು ಸ್ವಲ್ಪ ಸಮಯ ಕಳೆಯಬೇಕಾಯಿತು. ಆಗ ಅವರು ತಮ್ಮ ಹೆಚ್ಚಿನ ಸಮಯವನ್ನು ಮೂಲ್ಕಿಯ ಯೂನಿಯನ್ ಕ್ಲಬ್‌ನಲ್ಲಿಯೂ, ಕಡವಿನ ಬಾಗಿಲಿನ ಶಾಂಭವಿ ಗಾರ್ಡನ್‌ನಲ್ಲಿಯೂ ತಮ್ಮ ಸ್ನೇಹಿತರೊಡನೆ ಕಳೆಯುತ್ತಿದ್ದರು. ಇವರು ಹವ್ಯಾಸಿ ಓದುಗರಾಗಿದ್ದರು. ಹೊಸ ಕೆಲಸವನ್ನು ಹುಡುಕುವ ಸಮಯದಲ್ಲಿ ಮದ್ರಾಸಿಗೆ ತೆರಳಿ 'ಜೈ ಭಾರತ್ ಇನ್ಶೂರೆನ್ಸ್' ಎಂಬ ಕಂಪೆನಿಯಲ್ಲಿ ಒಂದು ವರ್ಷ ಕೆಲಸ ಮಾಡಬೇಕಾಗಿ ಬಂತು. ಆಗ ಅವರ ದೊಡ್ಡ ಮಗಳು ಉಷಾ ಮುಲ್ಕಿಯ ಮೆಡಲಿನ್ ಗರ್ಲ್ಸ್ ಹೈಸ್ಕೂಲಿನಲ್ಲಿ ಓದುತ್ತಿದ್ದರು. ಕಾಲಿಗೆ ಚಕ್ರ ಕಟ್ಟಿಕೊಂಡ ಹಾಗೆ ಉದ್ಯೋಗ ನಿಮಿತ್ತ ತಿರುಗಿಕೊಂಡು ಇರುತ್ತಿದ್ದ ಶ್ರೀ ಶೆಟ್ಟಿಯವರ ಅದೃಷ್ಟ ಈ ಸಮಯದಲ್ಲಿ ಖುಲಾಯಿಸಿತು. ಕಲ್ಕತ್ತವನ್ನು ಆಧಾರವಾಗಿರಿಸಿಕೊಂಡಿದ್ದ 'ಟೈಟನ್ ಎಂಡ್ ಎಟ್ಲಾಸ್' ಎಂಬ ಇನ್ಶೂರೆನ್ಸ್ ಕಂಪೆನಿಯ ಕೆಲಸ ಬೆಂಗಳೂರಿನಲ್ಲಿ ದೊರೆಯಿತು. 1952ರಿಂದ 62ರ ತನಕ ಕೆಲಸ ಮಾಡಿ ಈ ಕಂಪೆನಿಯಲ್ಲಿ ಇವರಿಗೆ ಹೆಸರು ಹಾಗೂ ಖ್ಯಾತಿಯೂ ದೊರೆಯಿತು. ಮೂಲ್ಕಿ ಸುಂದರರಾಮ ಶೆಟ್ಟಿ ಎಂಬ ಹೆಸರನ್ನು ಆಗ ಜನರಿಂದ ಕೇಳುವ ಭಾಗ್ಯ ಅವರ ಪಾಲಿಗೆ ಬಂತು. 1946ನೆಯ ಇಸವಿಯಲ್ಲಿ ವಿಜಯಾ ಬ್ಯಾಂಕಿನ ಅಧ್ಯಕ್ಷರಾಗಿದ್ದ ಮಂಜಯ್ಯ ಹೆಗ್ಡೆಯವರು ಸುಂದರರಾಮ ಶೆಟ್ಟಿಯವರನ್ನು ವಿಜಯಾ ಬ್ಯಾಂಕಿನ



ನಿರ್ದೇಶಕರನ್ನಾಗಿ ನಿಯುಕ್ತಿಗೊಳಿಸಿದರು. ತದನಂತರ 1962ರಲ್ಲಿ ವಿಜಯಾ ಬ್ಯಾಂಕಿನ ಗೌರವ ಅಧ್ಯಕ್ಷ ಪದವಿಗೆ ಏರಿದರು. ತನ್ನ ಬದುಕಿನ ಎಲ್ಲಾ ಧ್ಯೇಯಗಳನ್ನು ವಿಜಯಾ ಬ್ಯಾಂಕಿನಲ್ಲಿ ಕಂಡುಕೊಳ್ಳಲು ಪ್ರಾರಂಭ ಮಾಡಿದರು. ವಿಜಯಾ ಬ್ಯಾಂಕಿನ ಗೌರವಾಧ್ಯಕ್ಷ ಪದವಿ ಮಹತ್ತರವಾದುದರಿಂದ ಅವರು ಆ ಸಮಯದಲ್ಲಿಯೇ ತನ್ನನ್ನು ತಾನು ವಿಜಯಾ ಬ್ಯಾಂಕಿಗೆ ಸಂಪೂರ್ಣವಾಗಿ ಅರ್ಪಿಸಿಕೊಂಡರು. 1969ನೇ ಇಸವಿಯಲ್ಲಿ ಇವರು ಬ್ಯಾಂಕಿನ ಆಡಳಿತ ಅಧ್ಯಕ್ಷರಾಗಿ ಆಯ್ಕೆಗೊಂಡು 1978ರವರೆಗೆ ತನ್ನ ಸೇವೆಯನ್ನು ಸಲ್ಲಿಸಿ ವಿಜಯಾ ಬ್ಯಾಂಕಿನ ಕೀರ್ತಿ ಪತಾಕೆಯನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅತ್ಯುನ್ನತಿಗೇರಿಸಿದ ಮಹಾನ್ ವ್ಯಕ್ತಿ ಎಂದು ಭಾರತದಲ್ಲಿ ಮಾತ್ರವಲ್ಲದೇ ಪರದೇಶದಲ್ಲಿಯೂ ಹೆಸರುವಾಸಿಯಾದರು.

ಸುಂದರರಾಮ ಶೆಟ್ಟಿಯವರು 1942ರಿಂದ - 51ನೇಯ ಇಸವಿಯವರೆಗೆ ಬೊಂಬ್ಯಾಯಲ್ಲಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಅವರು ತನ್ನ ಸೋದರ ತಂಗಿ ಹೀರಾ ಅಡ್ಯಂತಾಯ ಹಾಗೂ ತನ್ನ ಭಾವ ಡಾ। ನಿಟ್ಟೆಗುತ್ತು ವಿಶ್ವನಾಥ ಅಡ್ಯಂತಾಯ ಇವರ ಮನೆಯಲ್ಲೇ ಸಮಯವನ್ನು ಕಳೆಯುತ್ತಿದ್ದರು. ಹೀರಾ ಅಡ್ಯಂತಾಯ ಅವರು ಡಾ। ಎನ್. ಮಹಾಬಲ ಅಡ್ಯಂತಾಯ ಅವರ ಪುತ್ರಿಯಾಗಿದ್ದರು. ಸುಂದರರಾಮ ಶೆಟ್ಟರಿಗೆ ಹೀರಾ ಅಡ್ಯಂತಾಯವೆಂದರೆ ತನ್ನ ಸ್ವಂತ ತಂಗಿಗಿಂತ ಹೆಚ್ಚಿನ ಪ್ರೀತಿ ಮತ್ತು ವಾತ್ಸಲ್ಯ. ಅದನ್ನು ಯಾರಿಂದಲೂ ಅಳೆಯಲು ಸಾಧ್ಯವಿಲ್ಲ ಎನ್ನಬಹುದು. ಅವಳು ಕೂಡ ತನ್ನ ಜೀವನ ಪರ್ಯಂತ ತನ್ನ ಅಣ್ಣನನ್ನು ಒಳ್ಳೆಯ ಆತಿಥ್ಯವನ್ನು ನೀಡಿ ಸತ್ಕರಿಸುತ್ತಿದ್ದರು. ಮುಂದೆ ತಾನು ಬೆಂಗಳೂರಿನಿಂದ ಯಾವ ಸಮಯದಲ್ಲೂ ಬೊಂಬ್ಯಾಗೆ ಹೋದ ಸಮಯದಲ್ಲಿ ತನಗೆ ಪಂಚತಾರಾ ಹೊಟೇಲಲ್ಲಿ ನಿಲ್ಲುವ

ಸೌಲಭ್ಯ ಇದ್ದರೂ ತನಗೆ ಜೀವಕ್ಕೆ ಜೀವ ಕೊಡುವ ತಂಗಿಯ ಮನೆಯಲ್ಲೇ ನಿಂತು, ಅವಳ ಕೈಯಲ್ಲೇ ತಯಾರಿಸಿದ ಅಡುಗೆಯನ್ನು ಮೆಚ್ಚುತ್ತಿದ್ದರು. ಇದನ್ನು ಅವರು ತಮ್ಮ ಕೊನೆಯ ದಿನಗಳ ತನಕವೂ ನಡೆಸಿಕೊಂಡು ಹೋಗಿದ್ದರು. ಈ ತಂಗಿ ಮತ್ತು ಭಾವರ ಪ್ರೀತಿಯನ್ನು ತನ್ನ ಹೃದಯದಲ್ಲಿ ಅಡಗಿಸಿಕ್ಕೊಂಡಿದ್ದರು ಎಂದು ಅವರ ಕುಟುಂಬದವರು ಇಂದಿಗೂ ನೆನಪಿಸುತ್ತಾರೆ. ಮುಂದೆ ಅವರು ವಿಜಯಾ ಬ್ಯಾಂಕಿನ ನಿರ್ದೇಶಕರಾಗಲಿಕ್ಕೆ ಕೂಡ ಭಾವ ಡಾ। ಎನ್. ವಿ. ಅಡ್ಯಂತಾಯರು ತಮ್ಮ ಪೂರ್ಣ ಬೆಂಬಲ ಮತ್ತು ಪ್ರೋತ್ಸಾಹವನ್ನು ಇತ್ತಿದ್ದರು. ಈಗಲೂ ನಿಟ್ಟೆಗುತ್ತು ವಿಶ್ವನಾಥ ಅಡ್ಯಂತಾಯರು ತಮ್ಮ 90ರ ಹರೆಯದಲ್ಲಿ ನಿಟ್ಟೆಗುತ್ತುವಿನ ಹಿರಿಯ ವ್ಯಕ್ತಿಯಾಗಿ ಬೊಂಬ್ಯಾಯಲ್ಲಿ ವಾಸಿಸುತ್ತಾರೆ ಎಂದು ತಿಳಿಸಲು ಸಂತೋಷ ಪಡುತ್ತೇವೆ. ಅಲ್ಲದೆ ಇವರು ವಿಜಯಾ ಬ್ಯಾಂಕಿನ ನಿರ್ದೇಶಕರಾಗಿ ಹಲವಾರು ವರ್ಷ ಸೇವೆಯನ್ನು ಸಲ್ಲಿಸಿರುತ್ತಾರೆ.



# ವೈವಾಹಿಕ ಜೀವನ

''ಪ್ರತಿಯೊಬ್ಬ ಗಂಡಸಿನ ಯಶಸ್ಸಿನ ಹಿಂದೆ ಹೆಣ್ಣೊಬ್ಬಳಿದ್ದಾಳೆ'' ಎನ್ನುವುದು ಗಾದೆಯ ಮಾತು. ಕಕ್ವಗುತ್ತು ಸುಂದರರಾಮ ಶೆಟ್ಟಿಯವರ ಬದುಕಿನಲ್ಲಿ ನಡೆದು ಬಿಟ್ಟ ಶ್ರುತ ವಾಕ್ಯ ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದು, ಯಶಸ್ಸಿನ ಹಂಬಲವಿದ್ದಾಗಲೂ ಮೇಲೇರಲಾರದೆ ತಡವರಿಸುತ್ತಿದ್ದ ಬದುಕಿನಲ್ಲಿ ಭಾಗ್ಯಬಿಂಬವಾಗಿ ಬಂದವರು ಕುಸುಮಾವತಿ. ತನ್ನ ಪತಿಯ ಬದುಕಿನಲ್ಲಿ ಕುಸುಮದ ಕಂಪನ್ನು ಪಸರಿಸುತ್ತಲೇ, ಅದೃಷ್ಟದ ಊರುಗೋಲಾಗಿ ಬಂದವರೂ ಹೌದು. ಸುಂದರರಾಮ ಶೆಟ್ಟಿಯವರ ಯಶಸ್ಸಿನ ಚಾಲನೆಗೆ ಕೀಲಿಕೈಯಾದುದೇ ಅವರ ಮದುವೆ. ಮದುವೆಯ ನಂತರದಲ್ಲಿ ಶೆಟ್ಟರು ತಿರುಗಿ ನೋಡಿದ್ದಿಲ್ಲ. ಮುಟ್ಟಿದ್ದೆಲ್ಲಾ ಚಿನ್ನ; ಮಾಡಿದ್ದೆಲ್ಲಾ ಕಾರ್ಯ. ಇಲ್ಲಿಯವರೆಗೆ ಇಲ್ಲದ ಗೆಲುವು ಈಗ ಒಮ್ಮಿಂದೊಮ್ಮೆಲೇ ಎಲ್ಲಿಂದ ಬಂದು ಬಿಟ್ಟಿತು ಎಂದು ಮೂಗಿನ ಮೇಲೆ ಬೆರಳೇರಿಸುವಂತೆ ಮೆಟ್ಟಿಲ ಮೇಲೆ ಮೆಟ್ಟಲನ್ನು ಏರಿಕೊಂಡು ಯಶಸ್ಸಿನತ್ತ ಪಯಣ. ನಿಲುಗಡೆಯೆಂಬುದೇ ಇಲ್ಲದ ಊರ್ಧ್ವಗಾಮಿ ಚಲನೆ. ಶೆಟ್ಟರ ಭಾಳಪುಟದಲ್ಲಿ ಮರೆಯಲಾರದ ಅಧ್ಯಾಯ ಮದುವೆ, ಮರೆಯಲಾಗದ ಪಾತ್ರ ಕುಸುಮಾವತಿ.

ಸುಂದರರಾಮ ಶೆಟ್ಟರು ಮದುವೆಯಾದ ಹುಡುಗಿ ಕುಸುಮಾವತಿ ಅಪರಿಚಿತಳೇನೂ ಅಲ್ಲ. ಬಾಲ್ಯದಿಂದ ಒಡನಾಡಿಯಾಗಿದ್ದುಕೊಂಡು ಒಂದೇ ಬಟ್ಟಲಲ್ಲಿ ಉಣ್ಣುತ್ತಾ ಬೆಳೆದವರು ಅವರು. ಆಟ-ಪಾಠಗಳಲ್ಲಿ ಮನೆಯ ಉಳಿದ ಮಕ್ಕಳೊಂದಿಗೆ ಅವರೂ ಸೇರಿದ್ದರು. ಪ್ರೇಮ-ಕಾಮದ ವಾಸನೆ ಪ್ರಾರಂಭವಾಗುವುದಕ್ಕಿಂತ ಮೊದಲೇ ಕುಸುಮಾವತಿ ಮತ್ತು

ಸುಂದರರಾಮ ಶೆಟ್ಟರೊಳಗೆ ಅವ್ಯಕ್ತವಾದ ಪ್ರೀತಿ ಒಬ್ಬರನ್ನೊಬ್ಬರು ಬಿಟ್ಟಿರಲಾರದ ಗೆಳೆತನ, ಯಾವುದೇ ಕೆಲಸಗಳಿಗೆ ಅವರಿಬ್ಬರೂ ಒಂದು. ಸುಂದರನಿಲ್ಲದೆ ಕುಸುಮವಿಲ್ಲ; ಕುಸುಮವಿಲ್ಲದೆ ಸುಂದರನಿಲ್ಲ ಎನ್ನುವ ಸ್ಥಿತಿ. ವಿಧಿ ಎನ್ನುವುದೊಂದಿದ್ದರೆ ಶೆಟ್ಟರ ಯಶಸ್ಸನ್ನೇ ಕುಸುಮಾವತಿ ಎಂಬ ಹೆಣ್ಣು ಮಗುವಿನ ರೂಪದಲ್ಲಿ ಸೃಷ್ಟಿಸಿತ್ತೋ ಏನೋ? ಯಾರಿಗೆ ಗೊತ್ತು? ಇಲ್ಲದಿದ್ರೆ ಅಷ್ಟೆಲ್ಲ ಮಕ್ಕಳಿರುವ ಮನೆಯಲ್ಲಿ ಅವರಿಬ್ಬರೊಳಗೆ ಏಕೆ ಅಷ್ಟೊಂದು ಪ್ರೀತಿ? ಆ ಎಳವೆಯಲ್ಲೇ ಅವರಿಬ್ಬರೂ ಪರಸ್ಪರರಿಗಾಗಿ ಹುಟ್ಟಿದಂತಿತ್ತು. ಇದನ್ನು ನೋಡಿಯೇ ಇರಬೇಕು ಮನೆ ಮಂದಿಯೆಲ್ಲಾ ಈ ಇಬ್ಬರಿಗೆ ಸಂಪ್ರದಾಯದಂತೆ ತೊಟ್ಟಿಲ ಮದುವೆ ಮಾಡುವ ನಿಶ್ಚಯ ಮಾಡಿದ್ದರಂತೆ. ಆದರೆ ಏನು ಕಾರಣವೋ ಏನೋ ತೊಟ್ಟಿಲ ಮದುವೆ ನಡೆಯಲಿಲ್ಲ. ಮುಂದೊಂದು ದಿನ ಇವರು ಬಾಳ ಪಯಣದಲ್ಲಿ ಸಹ ಪಥಿಕರಾಗುತ್ತಾರೆ ಎನ್ನುವ ಕಲ್ಪನೆಯಾದರು ಯಾರಿಗಿದ್ದೀತು? ಆದರೂ ಕಾಣದ ಅಗೋಚರ ಶಕ್ತಿಯೊಂದು ಅವರೀರ್ವರ ಹೃದಯದಲ್ಲಿ ಮಧುರ ವೀಣೆಯ ತಂತಿ ಮೀಟಿ ಸುಮಧುರ ಸುಸ್ವರವನ್ನು ಹೊರಡಿಸುತ್ತಾ ಒಂದುಗೂಡಿಸುವುದಕ್ಕೆ ಕಾಯುತ್ತಿತ್ತು.

ಸುಂದರರಾಮ ಶೆಟ್ಟಿಯವರ ಸೋದರತ್ತೆಯ ಮಗಳು ಕುಸುಮಾವತಿ, ತಂದೆ ಪ್ರಸ್ತುತ ಕೇರಳದಲ್ಲಿರುವ ಕಾಸರಗೋಡಿನ ಪಕ್ಕದ ಹೇರೂರಿನವರು, ತಾಯಿ ಸುಂದರರಾಮ ಶೆಟ್ಟಿಯವರ ತಂದೆಯವರ ಸೊಸೆ. ತನ್ನ ಬಾಲ್ಯದ ಕೆಲವೇ ಕೆಲವು ದಿನಗಳನ್ನು ಇವರೀರ್ವರೂ ಹಿರಿಯಡ್ಕದ ಬೊಮ್ಮರಬೆಟ್ಟುವಿನಲ್ಲಿ ಕಳೆದವರು. ವಿದ್ಯಾಭ್ಯಾಸಕ್ಕಾಗಿ ಸುಂದರರಾಮ ಶೆಟ್ಟಿಯವರು ಕಾರ್ಕಳ, ಮೂಲ್ಕಿ ಎಂದು ತಿರುಗಿದಾಗ ಸಹಜವಾಗಿಯೇ ಪರಸ್ಪರರು ಅಗಲಲೇ ಬೇಕಾದ




ಅನಿವಾರ್ಯ ಪರಿಸ್ಥಿತಿವುಂಟಾಯಿತು. ತನ್ನ ವಿದ್ಯಾಭ್ಯಾಸವನ್ನು ಮುಗಿಸಿ ಮಂಗಳೂರಿನಲ್ಲಿ ಉದ್ಯೋಗವನ್ನು ದೊರಕಿಸಿಕೊಂಡ ಮೇಲೆ 1937ರಲ್ಲಿ ಕುಸುಮಾವತಿಯನ್ನು ಮದುವೆಯಾಗಿ ಸಂಸಾರಿಯಾದರು.


ಕುಸುಮಾವತಿ ಹೆಸರಿಗೆ ತಕ್ಕಂತೆ ಕುಸುಮ ಕೋಮಲೆ. ದೇಹ ಮಾತ್ರವಲ್ಲ ಮನಸ್ಸೂ ಕೋಮಲವಾದುದು. ಅವರದು ಅಪೂರ್ವವಾದ ವ್ಯಕ್ತಿತ್ವ. ನಡೆ ನುಡಿಯಲ್ಲಿ ನಯ ವಿನಯ ಎದ್ದು ಕಾಣುತ್ತಿತ್ತು. ಗಂಡನ ಮನೆ, ತವರು ಮನೆ ಎರಡು ಮನೆಗಳಲ್ಲಿಯೂ ಆಪ್ತಳಾಗಿ ಬಾಳಿದರು. ತಾಯಿಗೆ ತಕ್ಕ ಮಗಳಾಗಿ, ಅತ್ತೆಗೆ ತಕ್ಕ ಸೊಸೆಯಾಗಿ ಬೆಳೆದವರು. ಅತ್ತೆಯನ್ನು ತಾಯಿಗಿಂತಲೂ ವಿಶೇಷ ಆದರದಿಂದಲೇ ನೋಡಿಕೊಂಡವರು. ಪತಿಯ ಬೇಕು ಬೇಡಗಳಿಗೆ ಸ್ಪಂದಿಸುತ್ತಾ ಸಂಸಾರವನ್ನು ನಂದನವನವನ್ನಾಗಿ ಮಾಡುವುದಕ್ಕೆ ತುಂಬಾ ಕಾಳಜಿಯನ್ನು ವಹಿಸಿದರು.

ಸುಂದರರಾಮ ಶೆಟ್ಟಿಯವರ ತಾಯಿಗೆ ಸೊಸೆಯೇ ಸರ್ವಸ್ವ. 'ತನಗೆ ಹೆಣ್ಣು ಮಕ್ಕಳಿಲ್ಲದ ಕೊರತೆಯನ್ನು ಸೊಸೆ ತೀರಿಸಿದಳು' ಎಂದು ಅವರು ಯಾವತ್ತೂ ಹೇಳುವುದಿತ್ತಂತೆ. ಸಂಸ್ಕಾರವಂತ ಕುಟುಂಬದ ಮಗಳಾಗಿ ಅಂಥದ್ದೇ ಗಂಡನ ಕೈ ಹಿಡಿದು ಸಂಸ್ಕಾರವಂತ ಮನೆಗೆ ಸೊಸೆಯಾಗಿ ಬಂದ ಕುಸುಮಾವತಿಯವರದು ಮಾತಿಗೆ ನಿಲುಕದ ವ್ಯಕ್ತಿತ್ವ.


ತನ್ನ ಇಳಿವಯಸ್ಸಿನವರೆಗೂ ಕುಸುಮಾವತಿಯವರಿಗೆ ಯಾರೊಂದಿಗೂ ನಿಷ್ಠುರವಾಗಿ ನಡೆದುಕೊಳ್ಳುವ ಪರಿಸ್ಥಿತಿಯೇ ಎದುರಾಗಲಿಲ್ಲ. ಯಾರೇ ಆಗಲಿ ಮನೆಗೆ ಬಂದಾಗ ಅವರನ್ನು ಸಂಪ್ರದಾಯಬದ್ಧರಾಗಿ ಆದರಾಭಿಮಾನಗಳಿಂದಲೇ ಬರಮಾಡಿಕೊಂಡು ಸತ್ಕರಿಸಿ ಕಳುಹಿಸುವುದು ಅವರ ವಾಡಿಕೆ. ತನ್ನ



ಕಕ್ವಗುತ್ತು ಜಾರಾಂದಾಯ ಗುಡಿ



ಬಾಗಮ್ಮ ಶೆಡ್ತಿಯವರ
ಸಮಾಧಿ ಸ್ಥಳ



ಸ್ವಪತ್ನೀ ಸಮೇತರಾಗಿ ಸುಂದರರಾಮ ಶೆಟ್ಟರು



ಕುಟುಂಬ ಸದಸ್ಯರೊಂದಿಗೆ



ಇಳಿವಯಸ್ಸಿನಲ್ಲೂ ಯಾರೇ ಬರಲಿ, ಯಾವ ಹೊತ್ತಿಗೇ ಬರಲಿ ಅವರಲ್ಲಿ ಮುನಿಸು ಎಂಬುದಿಲ್ಲ. ಅವರನ್ನು ಸತ್ಕರಿಸದಿದ್ದರೆ ಕುಸುಮಾವತಿಯವರಿಗೆ ಸಮಾಧಾನವಿಲ್ಲ. ಅತಿಥಿ ಸತ್ಕಾರದಲ್ಲಿ ಅವರದು ಎತ್ತಿದ ಕೈ.

ತಂದೆ-ತಾಯಿ-ಅತ್ತೆಯವರ ಸೇವೆಯನ್ನು ಭಕ್ತಿಯಿಂದ ಮಾಡಿ ಹಿರಿಯ ಕಿರಿಯರಿಂದ ಗೌರವಿಸಲ್ಪಟ್ಟ ಅವರು, ಎಲ್ಲರಿಗೂ ಮಾದರಿಯಾದರು. ತನ್ನ ಪತಿ ಮಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾಗ ಕಕ್ವಗುತ್ತಿನಲ್ಲಿಯೇ ಸಂಸಾರ ನೌಕೆಯ ಚುಕ್ಕಾಣಿ ನಡೆಸಿದರು. ಸುಂದರರಾಮ ಶೆಟ್ಟಿಯವರು ತನ್ನ ರಜಾದಿನಗಳಲ್ಲಿ ಮಂಗಳೂರಿನಿಂದ ಬಂದು ತನ್ನ ಮಕ್ಕಳನ್ನು ನೋಡಿಕೊಂಡು ಹೋಗುತ್ತಿದ್ದರು. ತನ್ನ ಉದ್ಯೋಗ ನಿಮಿತ್ತ ಬೇರೆ ಬೇರೆ ಊರುಗಳಿಗೆ ಶೆಟ್ಟರು ಹೊರಟಾಗ ಒಟ್ಟಿಗೆ ತನ್ನ ಸಂಸಾರವನ್ನು ಕಟ್ಟಿಕೊಂಡವರು. ಇದರಿಂದಾಗಿಯೇ ಕುಸುಮಾವತಿಯವರಿಗೂ ಊರು ತಿರುಗುವ, ಲೋಕಾನುಭವಗಳಿಸಿಕೊಳ್ಳುವ ಸದಾವಕಾಶ ದೊರೆಯಿತು. ಊರು ಬಿಟ್ಟು ಹೊರ ಹೊರಟ ಮೇಲೆ ಕುಸುಮಾವತಿಯವರ ವ್ಯಕ್ತಿತ್ವ ಇನ್ನಷ್ಟು ಪ್ರಜ್ವಲಿಸಿತು. ಊರಲ್ಲಿರುವಾಗಲೂ, ಹೊರಗಿರುವಾಗಲೂ ಅವರಿಗೆ ಸಂಬಂಧಿಕರೆಂದರೆ ಅತೀ ಮೆಚ್ಚು. ಪ್ರತಿಯೊಬ್ಬ ಸಂಬಂಧಿಕರ ಮನೆಗೂ ಹೋಗುವುದು, ಅವರನ್ನೆಲ್ಲಾ ತಾನಿರುವಲ್ಲಿಗೆ ಕರೆಸಿಕೊಳ್ಳುವುದು. ಹೀಗೆ ಮಾನವ ಪ್ರೇಮಿಯಾಗಿಯೇ ಬೆಳೆದವರು ಅವರು.

ಕುಸುಮಾವತಿ ತನ್ನ ತಂದೆ ತಾಯಿಗಳಿಗೆ ಏಕ ಮಾತ್ರ ಪುತ್ರಿ. ಸುಂದರರಾಮ ಶೆಟ್ಟಿಯವರೂ ತನ್ನ ತಾಯಿಗೆ ಏಕ ಮಾತ್ರ ಪುತ್ರ. ತಂದೆಯ ಮೊದಲ ಹೆಂಡತಿಯ ಮರಣಾನಂತರ ಸುಂದರರಾಮ

ಶೆಟ್ಟಿಯವರ ತಾಯಿಯನ್ನು ಅವರು ಮದುವೆಯಾಗಿದ್ದರು. ತನ್ನ ಮೊದಲ ಹೆಂಡತಿಯಲ್ಲಿ ಅಣ್ಣನಾದ ಭವಾನಿಶಂಕರನಿಗೆ ತನ್ನ ತಂದೆ ಮನೆಯ ಎಲ್ಲಾ ಹಕ್ಕು ಭಾದ್ಯತೆಗಳನ್ನು ಬಿಟ್ಟು ಕೊಟ್ಟು ತನ್ನ ಕಾಲ ಮೇಲೆ ನಿಂತುಕೊಳ್ಳುವುದಕ್ಕೆ ಹೊರಟು, ಕಾರ್ಯಸಾಧನೆ ಮಾಡಿ ಅದೇ ಮನೆಯಲ್ಲಿದ್ದ ಕುಸುಮಾವತಿಯನ್ನು ವರಿಸಿದರು. ಸುಂದರರಾಮ ಮತ್ತು ಕುಸುಮಾವತಿಯವರಿಗೆ ಔಜ್ವಲ್ಯಮಾನವಾಗಿ ಪ್ರಜ್ವಲಿಸುತ್ತಿರುವ ಸಪ್ತರ್ಷಿಮಂಡಲದಂತೆ ಏಳು ಮಂದಿ ಮಕ್ಕಳು. ತಮ್ಮ ಹೆತ್ತವರ ಅಭೂತಪೂರ್ವ ಗುಣ ವಿಶೇಷಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಆರ್ಭವಿಸಿಕೊಂಡು ಜನ್ಮವೆತ್ತಿದ್ದಾರೊ ಎನ್ನುವಂತೆ ಅವರ ಹುಟ್ಟು.

ಹಿರಿಯ ಮಗಳು ಉಷಾ, ಎರಡನೇ ಮಗ ರಾಧಕೃಷ್ಣ ಶೆಟ್ಟಿ, ಮೂರನೇ ಮಗಳು ವೃಂದಾ, ನಾಲ್ಕನೇ ಮಗ ಎಂ. ಉದಯ ಕುಮಾರ್ ಶೆಟ್ಟಿ, ಐದನೇ ಮಗ ಎಂ. ಹರಿಪ್ರಸಾದ್ ಶೆಟ್ಟಿ, ಆರನೇ ಮಗಳು ಊರ್ಮಿಳಾ ಮತ್ತು ಕಿರಿಯ ಮಗ ಎಂ. ಅಶೋಕ್ ಕುಮಾರ್ ಶೆಟ್ಟಿ. ಸುಂದರರಾಮ ಶೆಟ್ಟಿಯವರು ಮಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾಗ ತನ್ನ ಮಡದಿ ಮತ್ತು ಮಕ್ಕಳು ಮೂಲ್ಕಿಯ ಹೊಸಮನೆಯಲ್ಲಿ ವಾಸವಾಗಿದ್ದರು. ಉಷಾ - 1951-52ರಲ್ಲಿ ಮೆಡಲಿನ್ ಬಾಲಕಿಯರ ಪ್ರೌಢಶಾಲೆ, ಮುಲ್ಕಿಯಲ್ಲಿಯೂ, ರಾಧಾಕೃಷ್ಣ - ಹೋಮ್ ಸ್ಕೂಲ್ ಮತ್ತು ಸೈಂಟ್ ಜೋಸೆಫ್ಸ್ ಯುರೋಪಿಯನ್ ಪ್ರೌಢಶಾಲೆ ಬೆಂಗಳೂರಿನಲ್ಲಿಯೂ, ವೃಂದಾ ಮತ್ತು ಉದಯ 1951-52ರಲ್ಲಿ ಮುಲ್ಕಿ ಬೋರ್ಡ್ ಶಾಲೆಯಲ್ಲಿಯೂ ಕಲಿಯುತ್ತಿದ್ದರು. ಆಮೇಲೆ ಶೆಟ್ಟರು ತಮ್ಮ ಸಂಸಾರವನ್ನು ಬೆಂಗಳೂರಿಗೆ ವರ್ಗಾಯಿಸಿದ ಕಾರಣ ಅವರ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿಯೇ ಪೂರೈಸಿದರು.



ಪ್ರಸ್ತುತ ಸುಂದರರಾಮ ಶೆಟ್ಟಿಯವರ ಏಳು ಮಕ್ಕಳಲ್ಲಿ ಇಬ್ಬರು ಮಕ್ಕಳು ಉನ್ನತವಾದ ಹುದ್ದೆಯನ್ನು ಅಲಂಕರಿಸಿಕೊಂಡು ವಿದೇಶದಲ್ಲಿ ನೆಲೆಸಿರುತ್ತಾರೆ. ಕೊನೆಯವಳಾದ ಮಗಳು ಊರ್ಮಿಳಾ ಮೂಲ್ಕಿಯ ಭವಾನಿಶಂಕರ ಟಾಕೀಸಿನ ಶಂಕರ ಶೆಟ್ಟಿಯವರ ಮಗ ಡಾ. ಕೆ. ತಾರಾನಾಥ ಶೆಟ್ಟಿಯವರನ್ನು ಮದುವೆಯಾಗಿ ಅಮೇರಿಕಾದಲ್ಲಿ ನೆಲೆಸಿರುತ್ತಾರೆ.

ಸುಂದರರಾಮ ಶೆಟ್ಟಿಯವರು ಬಹಳ ಶ್ರದ್ಧೆ ಮತ್ತು ಕಠಿಣ ಪರಿಶ್ರಮದಿಂದ ಕೆಲಸ ಮಾಡುವ ವ್ಯಕ್ತಿತ್ವ ಉಳ್ಳವರಾಗಿದ್ದರು. ತನ್ನ ದಿನನಿತ್ಯದ ದಿನಚರಿಯಲ್ಲಿ ಪ್ರಾತಃಕಾಲ ಎದ್ದು, ತನ್ನ ಇಷ್ಟ ದೇವರಾದ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿಯನ್ನು ಪೂಜಿಸಿ, ತನ್ನ ತಾಯಿಯ ಆಶೀರ್ವಾದ ಪಡೆದು ಬ್ಯಾಂಕಿಗೆ ಹೋಗುತ್ತಿದ್ದರು. ಬ್ಯಾಂಕಿನ ಕೆಲವು ಮುಖ್ಯ ವಿಷಯಗಳನ್ನು ತನ್ನ ತಾಯಿ ಮತ್ತು ಪತ್ನಿಯೊಡನೆ ಯಾವಾಗಲೂ ವಿಮರ್ಶೆ ಮಾಡುತ್ತಿದ್ದರು. ದಕ್ಷಿಣ ಕನ್ನಡದ ಹಲವಾರು ಯುವಕ ಯುವತಿಯರಿಗೆ ಉದ್ಯೋಗವನ್ನು ಕೊಟ್ಟು ಅನ್ನದಾತರಾಗಿದ್ದರು. ದಕ್ಷಿಣ ಕನ್ನಡದ ಈ ಮಕ್ಕಳು ತಮ್ಮ ಕಠಿಣ ಪರಿಶ್ರಮ ಮತ್ತು ನಿಷ್ಠೆಯಿಂದ ವಿಜಯಾ ಬ್ಯಾಂಕನ್ನು ಈ ಎತ್ತರಕ್ಕೆ ತಲುಪಲು ಸಹಾಯಮಾಡಿ ಸುಂದರರಾಮ ಶೆಟ್ಟರ ಆಸೆಯನ್ನು ಈಡೇರಿಸಿದ್ದಾರೆ. ಮೂಲ್ಕಿಯಿಂದ ಯಾರಾದರೂ ಸಹಾಯಕ್ಕೆ ಹೋದಲ್ಲಿ ಅವರನ್ನು ಬರಿಗೈಯಲ್ಲಿ ಹಿಂದಕ್ಕೆ ಕಳುಹಿಸುತ್ತಿರಲಿಲ್ಲ. ಅವರು ಆಡಳಿತ ನಿರ್ದೇಶಕರಾಗಿದ್ದ ಸಮಯದಲ್ಲಿ ಅವರನ್ನು ಕಲಿಸಿದ ಉಪಾಧ್ಯಾಯರ ಹೆಂಡತಿ ಮತ್ತು ಮಗಳು ಹೋಗಿದ್ದಾಗ, ತನ್ನ ಗುರುವಿನ ಮಗಳಿಗೆ ಕೆಲಸವನ್ನು ಕೊಟ್ಟು ಕೃತಜ್ಞರಾಗಿದ್ದಾರೆ. ಈ ರೀತಿ ಅವರು ಜಾತಿ ಮತ ಬೇಧವಿಲ್ಲದೆ ಅನೇಕ ಜನರಿಗೆ ಸಹಾಯ ಮಾಡಿದ್ದಾರೆ.

# ಶ್ರೀ ಸುಂದರರಾಮ ಶೆಟ್ಟಿ ಮತ್ತು ಕುಸುಮಾವತಿ ಶೆಟ್ಟಿಯವರ ವಂಶವಾಹಿನಿ

## ಕಕ್ವಾಗುತ್ತು ಸುಂದರರಾಮ ಶೆಟ್ಟಿ ವಂಶವಾಹಿನಿ

**ಶ್ರೀಮತಿ ಕಕ್ವಗುತ್ತು ಉಮಕ್ಕ ಶೆಡ್ತಿ (1793-1872) ಮತ್ತು ಶ್ರೀ ನಿಟ್ಟೆಗುತ್ತು ಬೆರ್ಮುಗ ಅಡ್ಯಂತಾಯ (1780-1870)**

| (1) | (2) | (3) | (4) | (5) | (6) | (7) |
|---|---|---|---|---|---|---|
| ಶಂಕರ ಶೆಟ್ಟಿ<br>(1810-1888)<br>ತಂಗಿ ಶೆಡ್ತಿ (ಹೆ)<br>ಕೊಲ್ನಾಡು - ಪಾದೆ<br>(ಅತ್ತಾವರ) | ಕಾಳಪ್ಪ ಶೆಟ್ಟಿ<br>(1813-1898)<br>ಉಂಜಕ್ಕ ಶೆಡ್ತಿ (ಹೆ)<br>ಪಕ್ಕೊಟ್ಟು | ಫಕೀರ ಶೆಟ್ಟಿ<br>(1816-1892)<br>ಮಂಜಮ್ಮ (ಹೆ)<br>ಬಳ್ಕುಂಜೆ | ಕೊರಪಲು ಶೆಡ್ತಿ<br>(1820-1904)<br>ದೂಮ ಶೆಟ್ಟಿ<br>ಪಾದೂರುಗುತ್ತು<br>ತಾಲಿಪಾಡಿಗುತ್ತು<br>ದೇಜು ಶೆಟ್ಟಿ | ಶ್ರೀಮತಿ ಕಾವೇರಿ ಶೆಡ್ತಿ<br>(1824-1913)<br>ನಾರಾಯಣ<br>ಅಡ್ಯಂತಾಯ<br>ನಿಟ್ಟೆಗುತ್ತು | ಮೈಂದಾ ಶೆಟ್ಟಿ<br>(1828-1900)<br>ಮೊದಲ ಹೆಂಡತಿ<br>ನಿಟ್ಟೆಪಾದೆ ಮನೆ | ವೆಂಕಪ್ಪ ಶೆಟ್ಟಿ<br>(1830-1910)<br>ತಾಳಿಪ್ಪಾಡಿ ಗುತ್ತು |

↓

**ಶ್ರೀಮತಿ ಕಕ್ವಗುತ್ತು ಕಾವೇರಿ ಶೆಡ್ತಿ (1824-1913) ಮತ್ತು ಶ್ರೀ ನಿಟ್ಟೆಗುತ್ತು ನಾರಾಯಣ ಅಡ್ಯಂತಾಯ (1815-1890)**

| (1) | (2) | (3) | (4) | (5) | (6) |
|---|---|---|---|---|---|
| ಬೆರ್ಮುಗ ಶೆಟ್ಟಿ<br>(1845-1930)<br>ಗಿರಿಯಮ್ಮ<br>ಕೊಲ್ನಾಡು - ಪಾದೆ | ರುಕ್ಕು ಶೆಟ್ಟಿ<br>(1848-1932)<br>ನಾಗಿ ಶೆಡ್ತಿ<br>(ಕಕ್ವ ಪರಾರಿ)<br>ಬಳ್ಕುಂಜೆ,<br>ತಿಮುರು ಗುತ್ತು | ಶ್ರೀಮತಿ ಸಿಂಧು ಶೆಡ್ತಿ<br>(1852-1931)<br>ನಾಗಪ್ಪ ಹೆಗ್ಡೆ<br>ಶಿರ್ವ<br>ಹೊಸಮನೆ | ಶ್ರೀಮತಿ ತುಂಗು ಶೆಡ್ತಿ<br>(1855-1931)<br>ತಮ್ಮಯ್ಯ ಶೆಟ್ಟಿ<br>ಕಡಂದಲೆ ಪರಾರಿ | ದಾಸು ಶೆಟ್ಟಿ<br>(1857-1940)<br>ಸೀತಮ್ಮ<br>ನಿಟ್ಟೆಗುತ್ತು | ಲೋಕಯ್ಯ ಶೆಟ್ಟಿ<br>(1860-1942)<br>ಪಾದಕ್ಕ<br>ಶಿರ್ವಕೋಡು |

↓



↓

**ಶ್ರೀಮತಿ ಕಕ್ವಗುತ್ತು ಸಿಂಧು ಶೆಡ್ತಿ (1852-1931) ಮತ್ತು ಶಿರ್ವ ಹೊಸಮನೆ ನಾಗಪ್ಪ ಹೆಗ್ಡೆ (1842-1917)**

| (1) | (2) | (3) | (4) | (5) | (6) | (7) |
|---|---|---|---|---|---|---|
| ಮಿನಾಕ್ಷಿ ಶೆಡ್ತಿ<br>(1876-1962)<br>ನಂದ್ಯಪ್ಪ ಹೆಗ್ಡೆ<br>ಶಿರ್ವ, ನಡಿಬೆಟ್ಟು | ಶ್ರೀಮತಿ ಚಂದ್ರಮ್ಮ ಶೆಡ್ತಿ<br>(1881-1964)<br>ಶೇಷು ಭಂಡಾರಿ<br>ಅರ್ಕುಳ, ನಾಲಡೆ | ಶ್ರೀಮತಿ ಪಾದಕ್ಕ ಶೆಡ್ತಿ<br>(1884-1930)<br>ಚಂದ್ರಪ್ಪ ಶೆಟ್ಟಿ<br>ಬಲ್ಕುಂಜೆ<br>ಮಂಗಳೂರು | ಶ್ರೀಮತಿ ರಾಧಮ್ಮ ಶೆಡ್ತಿ<br>(1888-1959)<br>ಸುಬ್ಬ ಶೆಟ್ಟಿ<br>ಬೋಳಾರು | ಶ್ರೀಮತಿ ಸೀತಮ್ಮ ಶೆಡ್ತಿ<br>(1889-1983)<br>ಮುದ್ದಣ್ಣ ಶೆಟ್ಟಿ<br>ದೊಡ್ಡಮನೆ | ಶ್ರೀಮತಿ ರಮಣು ಶೆಡ್ತಿ<br>(1893-1982)<br>ಸಂಕಪ್ಪ ಶೆಟ್ಟಿ<br>ಕುದೆತ್ತೂರು<br>ಮಗಂದಡಿ | ಶ್ರೀಮತಿ ಕೃಷ್ಣಿ ಶೆಡ್ತಿ<br>(1895-1980)<br>ಮಹಾಬಲ<br>ಅಡ್ಯಂತಾಯ<br>ನಿಟ್ಟೆಗುತ್ತು |

↓

**ಶ್ರೀ ಸುಂದರರಾಮ ಶೆಟ್ಟಿ ಮತ್ತು ಶ್ರೀಮತಿ ಕುಸುಮಾವತಿ ಶೆಟ್ಟಿಯವರ ವಂಶವಾಹಿನಿ**

| ಉಷಾ ರವೀಂದ್ರನಾಥ ಪೂಂಜಾ   ಡಾ. ರಾಧಾಕೃಷ್ಣ ಶೆಟ್ಟಿ | ವೃಂದ ಪ್ರೇಮನಾಥ ಪೂಂಜಾ | ಎಂ. ಉದಯ ಕುಮಾರ್ ಶೆಟ್ಟಿ<br>ಪ್ರಮೀಳಾ ಶೆಟ್ಟಿ | ಎಂ. ಹರಿಪ್ರಸಾದ್ ಶೆಟ್ಟಿ<br>ಸ್ಮಿತಾ ಶೆಟ್ಟಿ | ಶ್ರೀಮತಿ ಊರ್ಮಿಳಾ ತಾರಾನಾಥ ಶೆಟ್ಟಿ | ಎಂ. ಅಶೋಕ ಕುಮಾರ ಶೆಟ್ಟಿ |
|---|---|---|---|---|---|
| ಗಿರೀಶ್ ಪೂಂಜಾ   ಪ್ರೀತಿ ಬಲ್ಲಾಳ್<br>ಪ್ರಿಯ ಪೂಂಜಾ   ಡಾ। ರಾಜ್ ಬಲ್ಲಾಳ್<br>ಆಲೆಶ್ ಪೂಂಜಾ | ರಿತಿ ಪೂಂಜಾ   ವಿರೇನ್ ಪೂಂಜಾ | ಗಾಯತ್ರಿ ಶೆಟ್ಟಿ | ಶ್ರೀರಾಮ   ಪ್ರಿಯದರ್ಶಿನಿ | ನೀತಾ   ಟೀನಾ   ಗೀಮಾ<br>ಡಾ। ಸೂರಜ್ ಆಳ್ವ | ಅಶ್ವಿನ್ ಕುಮಾರ್<br>ಸನತ್ ರಾಮ್<br>ಅದಿತಿ ಪ್ರಿಯದರ್ಶಿನಿ<br>ರಾಧಿಕಾ ಗಿರಿಮಾಲ |

# ವಿಜಯಾ ಬ್ಯಾಂಕಿನ ಹಿನ್ನಲೆ

ಕಕ್ವಗುತ್ತು ಸುಂದರರಾಮ ಶೆಟ್ಟರು ವಿಜಯಾ ಬ್ಯಾಂಕಿನ ಸ್ಥಾಪಕರಲ್ಲ; ಆದರ ಯಶೋ ಕೀರ್ತಿ ಬೆಳಗಿಸಿದ ಕಾರಣಪುರುಷರು. ಸುಮಾರು ವರುಷಗಳ ಹಿಂದೆ ಸಣ್ಣ ಕೃಷಿಕರ ಗುಂಪೊಂದು ಕೃಷಿಕರ ಸೇವೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಜನ್ಮ ತಾಳಿತು. ಮುಂದೊಂದು ದಿನ ಇದು ಮಹಾನ್ ಬ್ಯಾಂಕು ಆಗಿ ಹೆಸರುಗಳಿಸಬಹುದೆನ್ನುವ ಯಾವುದೇ ಸೂಚನೆಯಿಲ್ಲದೆ ಪ್ರಾಕೃತಿಕ ವೈಪರೀತ್ಯಗಳಿಂದ ಅಡಿ ಮೇಲಾಗುವ ಕೃಷಿ ಪದ್ಧತಿಯ ಉತ್ತೇಜನಕ್ಕೆ ಕೃಷಿಕರ ಅಭ್ಯುದಯದ ಉದ್ದೇಶದಿಂದ ಈ ಸಂಸ್ಥೆಯ ಉಗಮವಾಯಿತು. ಇಂದು ಈ ಸಂಸ್ಥೆ ರಾಷ್ಟ್ರೀಕೃತ ಬ್ಯಾಂಕಾಗಿ 23 ರಾಜ್ಯಗಳಲ್ಲಿ ಮಾತ್ರವಲ್ಲ ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲೂ ಸುಮಾರು 843 ಬ್ಯಾಂಕು ಶಾಖೆಗಳನ್ನು ಒಳಗೊಂಡು ಅದ್ವಿತೀಯ ಎನಿಸುವಲ್ಲಿ ಮಹತ್ತರ ಪಾತ್ರ ವಹಿಸಿದವರು ಮೂಲ್ಕಿಯ ಕಕ್ವಗುತ್ತು ಸುಂದರರಾಮ ಶೆಟ್ಟರು. ಇವರ ಸತತ ಪ್ರಯತ್ನ, ಮುಂದಾಳತ್ವ, ಮಾರ್ಗದರ್ಶನ ಹಾಗೂ ವಿವೇಚನಾಶೀಲತೆ ಈ ಬ್ಯಾಂಕನ್ನು ಕೀರ್ತಿ ಶಿಖರದ ಕಡೆಗೆ ಕೊಂಡೊಯ್ಯುವುದಕ್ಕೆ ದಾರಿ ಮಾಡಿಕೊಟ್ಟಿತು.

ವಿಜಯಾ ಬ್ಯಾಂಕ್ ತನ್ನ ಬೆಳವಣಿಗೆಯ ಸುದೀರ್ಘ ಹಾದಿಯಲ್ಲಿ ಅನೇಕ ಏಳು ಬೀಳುಗಳನ್ನು ಕಂಡಿದೆ. ತನ್ನ ಅನುವರ್ತಿಗಳಾಗಿರುವ ಅನೇಕ ಸಣ್ಣ ಸಣ್ಣ ಬ್ಯಾಂಕುಗಳು ಬಾಲಗ್ರಹ




ಪೀಡೆಯಿಂದ ನರಳಿ ಬದುಕಿನ ಅಸ್ತಿತ್ವಕ್ಕಾಗಿ ಹೋರಾಟ ಮಾಡುತ್ತಿರುವಾಗ ವಿಜಯಾ ಬ್ಯಾಂಕಿನ ಪರಿಸ್ಥಿತಿಯೂ ಅವುಗಳಿಂದ ಭಿನ್ನವಾಗಿರಲಿಲ್ಲ. ಅದೃಷ್ಟದ ಬಲವೊಂದು ಗಟ್ಟಿಯಿದೆ ಎನ್ನುವಂತೆ ಅನೇಕಾನೇಕ ಸಣ್ಣ ಬ್ಯಾಂಕುಗಳು ಅವನತಿಯ ಹಾದಿಯನ್ನು ಹಿಡಿದಾಗ ವಿಜಯಾ ಬ್ಯಾಂಕು ತನ್ನ ಅನೇಕಾನೇಕ ಕಷ್ಟಕಾರ್ಪಣ್ಯಗಳನ್ನು ಕಳೆದುಕೊಂಡು ಯಶ್ವಸಿಯಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮುಂದುವರಿಯಲು ಸಹಕರಿಸಿದ ಅನೇಕ ಮಹನೀಯರಿದ್ದಾರೆ. ಅವರಲ್ಲಿ ಸುಂದರರಾಮ ಶೆಟ್ಟರೂ ಒಬ್ಬರು.

## ವಿಜಯಾ ಬ್ಯಾಂಕಿನ ಹುಟ್ಟು ಮತ್ತು ಬೆಳವಣಿಗೆ :

ಭಾರತೀಯ ಕೃಷಿ ಪದ್ಧತಿಯು ಮುಂಗಾರು ಮಳೆಯ ಅತಂತ್ರ ಸ್ಥಿತಿಯಿಂದಾಗಿ ಯಾವಾಗಲೂ ಲಾಭದಾಯಕವಾಗಿರಲಿಲ್ಲ. ಇಂಥ ಸಂದರ್ಭದಲ್ಲಿ ಕೆಲವೊಂದು ಬಡ್ಡಿ ವ್ಯವಹಾರಸ್ಥರು ಕೃಷಿಕರನ್ನು ಶೋಷಣೆ ಮಾಡಿ ಲಾಭಗಳಿಸುವುದು ತಲೆತಲಾಂತರದಿಂದಲೇ ಬೆಳೆದು ಬಂದ ವಾಡಿಕೆ.

ಈ ಶೋಷಣೆಯಿಂದ ಕೃಷಿಕರನ್ನು ಮೇಲೆತ್ತುವುದಕ್ಕಾಗಿ ಕೆಲವೇ ಕೆಲವು ಕೃಷಿಕರು ಸೇರಿಕೊಂಡು ವಿಜಯಾ ಬ್ಯಾಂಕಿನ ಕನಸನ್ನು ಸಾಕಾರಗೊಳಿಸುವಲ್ಲಿ ಅಡಿಪಾಯವನ್ನು ಹಾಕಿದರು. ಬಡ ಕೃಷಿಕರಿಗೆ ಒಳ್ಳೆಯ ಫಸಲು ಬಂದಾಗ ಹಣವನ್ನು ಒಂದು ಕಡೆಯಲ್ಲಿ ಇಟ್ಟು, ತಮಗೆ ಬೇಕಾದಂತೆ ಕೃಷಿಗೆ ವಿನಿಯೋಗಿಸುವುದಕ್ಕೆ ಅಗತ್ಯವಾದ ವ್ಯವಸ್ಥೆಯ ಅನಿವಾರ್ಯತೆ ಇತ್ತು. ಇದರಿಂದಾಗಿ ಕೈಗೆ ಸಿಕ್ಕಿದ ಲಾಭದ



ವಿಜಯಾ ಬ್ಯಾಂಕಿನ ಪ್ರಾರಂಭದ ಕಟ್ಟಡ

ಹಣವೆಲ್ಲಾ ತಮಗರಿವಿಲ್ಲದಂತೆ ಖರ್ಚಾಗಿ, ಮುಂದಿನ ಬೆಳಗಾಗುವಾಗ ಪರದಾಡಬೇಕಾದ ಪರಿಸ್ಥಿತಿಯಿಂದ ಬಡಕೃಷಿಕರಿಗೆ ಮುಕ್ತಿ ದೊರೆಯಬೇಕಾಗಿತ್ತು. ಆ ಕಾರಣದಿಂದ ಅಕ್ಟೋಬರ್ 23, 1931ರಲ್ಲಿ ವಿಜಯದಶಮಿಯ ದಿನದಂದು ಕೆಲವು ಕೃಷಿಕರು ಮಂಗಳೂರಿನ ಬಾಡಿಗೆಯ ಹಂಚಿನ ಮನೆಯೊಂದರಲ್ಲಿ ವ್ಯಾಪಾರೀ ಮನೋಭಾವದ ಸಂಸ್ಥೆಯೊಂದನ್ನು ಹುಟ್ಟು ಹಾಕಿದರು. ಕೇವಲ 5,000.00-ರೂಪಾಯಿಗಳ ನಿರಖು ಠೇವಣಿಯ ಈ ಬ್ಯಾಂಕಿನಲ್ಲಿ ಸಂದಾಯವಾದ ಬಂಡವಾಳ 8,670 ರೂಪಾಯಿಗಳು ಮಾತ್ರವಾಗಿತ್ತು. ಆಗ ಈ ಸಂಸ್ಥೆಯ ಅಧ್ಯಕ್ಷರಾಗಿದ್ದವರು ಸ್ಥಾಪಕಾಧ್ಯಕ್ಷರಾದ ಶ್ರೀ ಎ. ಬಾಲಕೃಷ್ಣ ಶೆಟ್ಟಿಯವರು. ಇವರು 1931ರಿಂದ 1936ರ ತನ್ನ ಆಡಳಿತಾವಧಿಯಲ್ಲಿ ವಿಜಯಾ ಬ್ಯಾಂಕಿನ



ಅಭಿವೃದ್ಧಿಗಾಗಿ ಶ್ರಮವಹಿಸಿದರು. ಅತ್ಯಂತ ಸುಸ್ಥಿತಿಗೆ ತರುವಲ್ಲಿ ಶ್ರೀ ಎ. ಬಾಲಕೃಷ್ಣ ಶೆಟ್ಟಿಯವರ ಮುಂದಾಳುತ್ವವನ್ನು ಮರೆಯುವಂತಿಲ್ಲ. ಇವರ ಆಡಳಿತಾವಧಿಯಲ್ಲಿ ಬ್ಯಾಂಕಿನ ಶಾಖೆಯೊಂದು 1936 ಫೆಬ್ರವರಿ 26ರಂದು ಉಡುಪಿಯಲ್ಲಿಅಸ್ತಿತ್ವಕ್ಕೆ ಬಂತು.

1937ರಲ್ಲಿ ಶ್ರೀ ಎ. ಬಾಲಕೃಷ್ಣ ಶೆಟ್ಟಿಯವರು ಮದ್ರಾಸು ಪ್ರೆಸಿಡೆನ್ಸಿಯ ಸಚಿವರಾಗಿ ಸಮಾಜ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರು. ಸಚಿವರಾಗಿ ಮತ್ತು ಬ್ಯಾಂಕಿಂಗ್ ಸೇವೆ ಎರಡೂ ಏಕ ಕಾಲದಲ್ಲಿ ನಡೆಸುವುದು ಅಸಾಧ್ಯವಾದುದರಿಂದ ಬ್ಯಾಂಕಿಂಗ್ ಸೇವೆಯನ್ನು ಸಮರ್ಥವಾಗಿ ನಿರ್ವಹಿಸಲು ಮುಂದಾಳುತ್ವವನ್ನು ವಹಿಸಿಕೊಳ್ಳುವ ವ್ಯಕ್ತಿಯೊಬ್ಬರ ಅಗತ್ಯವಿತ್ತು. ಆಗ ಮುಂದಾದವರು ಶ್ರೀ ಮಂಜಯ್ಯ ಹೆಗ್ಡೆ ಇವರ ಆಡಳಿತಾವಧಿಯಲ್ಲಿ ವಿಜಯಾ ಬ್ಯಾಂಕು ಇನ್ನಷ್ಟು ಪುಷ್ಟಿಗೊಂಡಿತ್ತು. 1941ರಲ್ಲಿ ವಿಜಯಾ ಬ್ಯಾಂಕಿನ ನಿರಖು ಬಂಡವಾಳ 4 ಲಕ್ಷ ರೂಪಾಯಿಗಳಾಗಿದ್ದು ಸಂದಾಯವಾದ ಬಂಡವಾಳ 66,000ಕ್ಕೆ ಏರಿತ್ತು. 1941 ರಿಂದ 1947ರವರೆಗಿನ ಇವರ ಆಡಳಿತಾವಧಿಯಲ್ಲಿ ವಿಜಯಾ ಬ್ಯಾಂಕು ಹೊಸ ಆರು ಶಾಖೆಗಳನ್ನು ಬೇರೆ ಬೇರೆ ಕಡೆಗಳಲ್ಲಿ ಸೃಷ್ಟಿಸಿತ್ತು.

ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಆಡಳಿತದ ಕಾಲದಲ್ಲಿ ವಿಜಯಾ ಬ್ಯಾಂಕ್ ಮಹತ್ವದ ಬದಲಾವಣೆಯೊಂದಕ್ಕೆ ತನ್ನನ್ನು ತಾನು ತೆರೆದುಕೊಂಡಿತ್ತು. ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದ

ವಿಜಯಾ ಬ್ಯಾಂಕು ಇವರ ಕಾಲದಲ್ಲಿ ಭಾರತದ ಇತರ ರಾಜ್ಯಗಳಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಹೊರಟ ಕಾಲ ಅದು. ಸ್ವಾತಂತ್ರ್ಯ ಗ್ರಾಮದ ಗಾಳಿ ರಾಷ್ಟ್ರೀಯ ಚಳುವಳಿಯಾಗಿ ಭಾರತದಾದ್ಯಂತ ಬೀಸಲು ಪ್ರಾರಂಭವಾದ ಹೊತ್ತಿಗೆ ವಿಜಯಾ ಬ್ಯಾಂಕ್ ತನ್ನ ಶಾಖೆಯೊಂದನ್ನು ಮುಂಬಯಿಯಲ್ಲಿ ಹುಟ್ಟು ಹಾಕಿತು. ಈ ಬದಲಾವಣೆ ಭೌಗೋಳಿಕವಾಗಿ ಮಾತ್ರವಾಗಿರದೆ, ಆರ್ಥಿಕವಾಗಿ ಬಹಳ ಮಹತ್ವವನ್ನು ಪಡೆದುಕೊಂಡಿತು. ಏಕೆಂದರೆ 1951ರ ಅವಧಿಗಾಗಲೇ ವಿಜಯಾ ಬ್ಯಾಂಕಿನ ನಿರಖು ಠೇವಣಿ 41 ಲಕ್ಷಗಳಾಗಿದ್ದು, ಸಂದಾಯವಾದ ಬಂಡವಾಳ 75 ಲಕ್ಷಗಳಿಗೆ ಏರಿತು.

ನ್ಯಾಯವಾದಿ ಮಂಜಯ್ಯ ಹೆಗ್ಡೆಯವರು 1946ರಲ್ಲಿಯೇ ಶ್ರೀ ಸುಂದರರಾಮ ಶೆಟ್ಟಿಯವರನ್ನು ವಿಜಯಾ ಬ್ಯಾಂಕಿಗೆ ಆಹ್ವಾನಿಸಿದ್ದರು. ಅವರ ಆಹ್ವಾನದ ಮೇರೆಗೆ ಸುಂದರರಾಮ ಶೆಟ್ಟಿಯವರು ವಿಜಯಾ ಬ್ಯಾಂಕಿನ ಆಡಳಿತದಲ್ಲಿ ಭಾಗಿಗಳಾಗಿದ್ದರು. ತನ್ನ ವೈಯಕ್ತಿಕ ಉದ್ಯೋಗಗಳನ್ನು ಬೇರೆ ಕಡೆಗಳಲ್ಲಿ ಮಾಡುತ್ತಿದ್ದು ಆ ಮೂಲಕ ಪ್ರತಿಭೆಯನ್ನು ಮೆರೆದುಕೊಂಡಿದ್ದ ಸುಂದರರಾಮ ಶೆಟ್ಟಿಯವರ ಅಗತ್ಯವನ್ನು ಮನಗೊಂಡ ಮಂಜಯ್ಯ ಹೆಗ್ಡೆಯವರು ಈ ಆಮಂತ್ರಣವನ್ನು ಇತ್ತಿದ್ದರು. ಪ್ರಾಯದಲ್ಲಿ ಹಿರಿಯರಾದ ಅವರೆಲ್ಲರ ಜೊತೆಗೆ ಇದ್ದುಕೊಂಡು ಸಂಪೂರ್ಣ ಸ್ವಾತಂತ್ರ್ಯದಿಂದ ವಿಜಯಾ ಬ್ಯಾಂಕಿನ ಅಭಿವೃದ್ಧಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಶ್ರೀ ಶೆಟ್ಟಿಯವರಿಗೆ ಆಗ ಸಾಧ್ಯವಾಗಲಿಲ್ಲ.



1953ರಲ್ಲಿ ನ್ಯಾಯವಾದಿ ಕೆ. ಸುಂದರರಾಮ ಶೆಟ್ಟಿಯವರು ವಿಜಯಾ ಬ್ಯಾಂಕಿನಲ್ಲಿ ಗೌರವಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಆಗ ಕಕ್ವಗುತ್ತು ಮುಲ್ಕಿ ಸುಂದರರಾಮ ಶೆಟ್ಟಿಯವರು ವಿಜಯಾ ಬ್ಯಾಂಕಿನ ನಿರ್ದೇಶಕರಾಗಿದ್ದರು. 1956ಕ್ಕಾಗುವಾಗ ವಿಜಯಾ ಬ್ಯಾಂಕು ಸುಮಾರು 1 ಕೋಟಿ ರೂಪಾಯಿಗಳಷ್ಟು ನಿರಖು ಠೇವಣಿಯನ್ನು ಸಂಪಾದಿಸಿತು. ಆಗ ವಿಜಯಾ ಬ್ಯಾಂಕು ಅಧ್ಯಕ್ಷರಾಗಿದ್ದವರು ಮಂಗಳೂರಿನ ವೈದ್ಯಾಧಿಕಾರಿಗಳಾಗಿದ್ದ ಡಾ। ಕೆ. ಬಾಳಪ್ಪ ಶೆಟ್ಟಿಯವರು. ಡಾ। ಬಾಳಪ್ಪ ಶೆಟ್ಟಿಯವರು ಮತ್ತು ಶ್ರೀ ಸುಂದರರಾಮ ಶೆಟ್ಟಿಯವರ ಮುತುವರ್ಜಿಯಿಂದಾಗಿ 1961ರಲ್ಲಿ ಡಿಸೆಂಬರ್ ಕೊನೆಯ ಭಾಗಕ್ಕಾಗುವಾಗ ಬ್ಯಾಂಕಿನ ನಿರಖು ಠೇವಣಿ 1.44 ಕೋಟಿಗೆ ಏರಿತು ಮಾತ್ರವಲ್ಲ ದೇಶದಾದ್ಯಂತ ಸುಮಾರು 21 ಬ್ಯಾಂಕಿನ ಶಾಖೆಗಳ ಮೂಲಕ 159 ಸಿಬ್ಬಂದಿಗಳನ್ನು ಒಳಗೊಂಡಿತ್ತು. 1962ರಿಂದ 1967ರ ವರೆಗೆ ಕಕ್ವಗುತ್ತು ಸುಂದರರಾಮ ಶೆಟ್ಟಿಯವರು ವಿಜಯಾ ಬ್ಯಾಂಕಿನ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಸುಮಾರು 1953ರ ಕಾಲಕ್ಕಾಗುವಾಗಲೇ ವಿಜಯಾ ಬ್ಯಾಂಕಿನ ಎಲ್ಲಾ ಶಾಖೆಗಳಿಗೂ ಅನ್ವಯವಾಗುವಂತೆ ಆಡಳಿತ ಕಛೇರಿಯೊಂದರ ಅಗತ್ಯವನ್ನು ಆಗಿನ ಅಧ್ಯಕ್ಷರು ಮನಗಂಡಿದ್ದರು. ಈಗಾಗಲೇ ಇರುವ ಹಂಚಿನ ಮನೆಯಿಂದ ಸುಸಜ್ಜಿತವಾದ ಕಟ್ಟಡವೊಂದಕ್ಕೆ ವಿಜಯಾ ಬ್ಯಾಂಕಿನ ವರ್ಗಾವಣೆಗೊಳ್ಳಬೇಕಾಗಿತ್ತು. ಆದರೆ ಆ ಸುಯೋಗ ಒದಗಿ ಬಂದುದು 1956ರಲ್ಲಿ ಅಂದರೆ ವಿಜಯಾ ಬ್ಯಾಂಕಿನ

ಬೆಳ್ಳಿಹಬ್ಬದ ವರ್ಷದಲ್ಲಿ ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿಯಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ಮಂಗಳೂರಿನ ಹೃದಯ ಭಾಗದಲ್ಲಿರುವ 'ಲೈಟ್ ಹೌಸ್ ಹಿಲ್'ನಲ್ಲಿ ವಿಜಯಾ ಬ್ಯಾಂಕಿನ ನೂತನ ಆಡಳಿತ ಕಛೇರಿಯನ್ನು ಉದ್ಘಾಟಿಸಿದರು.

ಭಾರತೀಯ ರಿಸರ್ವ್ ಬ್ಯಾಂಕಿನ ಹತ್ತು ಯೋಜನೆಯ ಅಡಿಯಲ್ಲಿ ಸಮರ್ಪಕವಾದ ಆಡಳಿತ ಮತ್ತು ವ್ಯವಹಾರಕ್ಕಾಗಿ ಸಣ್ಣ ಸಣ್ಣ ಬ್ಯಾಂಕುಗಳನ್ನು ದೊಡ್ಡ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ಕ್ರಿಯೆ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಅಂದರೆ ಕ್ರಿ. ಶ. 1962ರಲ್ಲಿ ವಿಜಯಾ ಬ್ಯಾಂಕಿನ ಗೌರವ ಅಧ್ಯಕ್ಷರಾಗಿದ್ದವರು ಶ್ರೀ ಸುಂದರರಾಮ ಶೆಟ್ಟಿಯವರು, ಈ ಅವಕಾಶವನ್ನು ಕೈ ತಪ್ಪದಂತೆ ನೋಡಿಕೊಂಡು ಸಂಸ್ಥೆಯ ಹಿತದೃಷ್ಟಿಯಿಂದ ಕೇರಳ, ಕರ್ನಾಟಕ ಮತ್ತು ತಮಿಳ್ನಾಡುಗಳಲ್ಲಿ ಹಂಚಿ ಹೋಗಿದ್ದ ಸುಮಾರು ಒಂಭತ್ತು ಸಣ್ಣ ಸಣ್ಣ ಬ್ಯಾಂಕುಗಳನ್ನು ವಿಜಯಾ ಬ್ಯಾಂಕಿನೊಂದಿಗೆ ವಿಲೀನಗೊಳ್ಳುವಂತೆ ಅವರು ಮಾಡಿದರು.



## • ವಿಲೀನಗೊಂಡ ಬ್ಯಾಂಕುಗಳು ಮತ್ತು ಅವುಗಳ ಸಂಪತ್ತಿನ ವಿವರಗಳು

| ಕ್ರಮ ಸಂಖ್ಯೆ | ಬ್ಯಾಂಕುಗಳ ಹೆಸರು | ಸ್ಥಳ ಮತ್ತು ರಾಜ್ಯ | ತೆಗೆದುಕೊಂಡ ದಿನಾಂಕ | (ಲಕ್ಷಗಳಲ್ಲಿ) ಠೇವಣಿಯ ಮೊತ್ತ | (ಲಕ್ಷಗಳಲ್ಲಿ) ಮುಂಗಡ | ಶಾಖೆಗಳು |
|---|---|---|---|---|---|---|
| 1. | ದೇವಾಂಗ ಬ್ಯಾಂಕ್ ಲಿಮಿಟೆಡ್ | ಬೆಂಗಳೂರು, ಕರ್ನಾಟಕ | 21-10-63 | 13.80 | 6.68 | 2 |
| 2. | ದಕ್ಷಿಣ ಬ್ಯಾಂಕ್ ಲಿಮಿಟೆಡ್ | ಎರ್ನಾಕುಲಂ, ಕೇರಳ | 12-09-64 | 29.95 | 8.71 | 4 |
| 3. | ಚಾಲಪುರಂ ಬ್ಯಾಂಕ್ ಲಿಮಿಟೆಡ್ | ಕಲ್ಲಿಕೋಟೆ, ಕೇರಳ | 13-10-64 | 26.11 | 16.20 | 8 |
| 4. | ತಳಿಪರಂಬ ಬ್ಯಾಂಕ್ ಲಿಮಿಟೆಡ್ | ತಳಿತರಂಬ, ಕೇರಳ | 24-12-64 | 1.88 | 1.63 | 1 |
| 5. | ತಲಶ್ಶೇರಿ ಬ್ಯಾಂಕ್ ಲಿಮಿಟೆಡ್ | ತಲಶ್ಶೇರಿ, ಕೇರಳ | 26-12-64 | 10.63 | 8.69 | 3 |
| 6. | ವೈಶ್ಯಾ ಮರ್ಕಂಟೈತಲ್ ಬ್ಯಾಂಕ್ ಲಿಮಿಟೆಡ್ | ರಾಮನಗರಮ್, ಕರ್ನಾಟಕ | 28-12-64 | 12.76 | 7.60 | 3 |
| 7. | ಕೂನೂರು ಸುಬ್ರಹ್ಮಣ್ಯ ವಿಲಾಸ ಉಪಕಾರ ಬ್ಯಾಂಕ್ ಲಿಮಿಟೆಡ್ | ಕೂನೂರು, ತಮಿಳ್ನಾಡು | 10-7-65 | 3.29 | 6.53 | 2 |
| 8. | ಹುಬ್ಬಿ ಸಿಟಿ ಬ್ಯಾಂಕ್ ಲಿಮಿಟೆಡ್ | ಹುಬ್ಬಳ್ಳಿ, ಕರ್ನಾಟಕ | 27-8-66 | 29.03 | 19.68 | 2 |
| 9. | ಜಯಲಕ್ಷ್ಮಿ ಬ್ಯಾಂಕ್ ಲಿಮಿಟೆಡ್ | ಮಂಗಳೂರು, ಕರ್ನಾಟಕ | 27-5-67 | 169.14 | 71.22 | 17 |

ಬ್ಯಾಂಕುಗಳ ವಿಲೀನ ಪ್ರಕ್ರಿಯೆಯ ಸಮಯದಲ್ಲಿ ವಿಜಯಾ ಬ್ಯಾಂಕಿನ ಶಾಖೆಗಳ ಸಂಖ್ಯೆ 42 ಆಗಿತ್ತು. ಇವುಗಳ ಜೊತೆಗೆ ಈ ಸಂದರ್ಭದಲ್ಲಿ ಹೊಸತಾಗಿ ಜನ್ಮ ತಾಳಿದ 26 ಹೊಸ ಶಾಖೆಗಳು ಸೇರಿ 1968ರ ಅವಧಿಗಾಗುವಾಗ ವಿಜಯಾ ಬ್ಯಾಂಕಿನ ಒಟ್ಟು ಶಾಖೆಗಳ ಸಂಖ್ಯೆ 89ಕ್ಕೆ ಏರಿತು. ಹಾಗೆಯೇ ಬ್ಯಾಂಕಿನ ನಿರಖು ಠೇವಣಿ 13.21 ಕೋಟಿಗಳಾಗಿದ್ದ 982 ಸಿಬ್ಬಂದಿಗಳನ್ನು ವಿಜಯಾ ಬ್ಯಾಂಕು ಪಡೆದುಕೊಂಡಿತು.

1969 ಬ್ಯಾಂಕಿಂಗ್ ಇತಿಹಾಸದಲ್ಲಿ ಮರೆಯಲಾಗದ ವರ್ಷ. ಪ್ರಸ್ತುತ ವರ್ಷ 14 ಶ್ರೇಷ್ಠ ಬ್ಯಾಂಕುಗಳು ರಾಷ್ಟ್ರೀಕರಣಗೊಂಡು ವೈಯಕ್ತಿಕ ಕ್ಷೇತ್ರದಿಂದ ಸಾಮಾಜಿಕ ಆಡಳಿತಕ್ಕೆ ಒಳಪಟ್ಟಿತು. ವಿಜಯಾ ಬ್ಯಾಂಕು ಈ ಸಂದರ್ಭದಲ್ಲಿ ರಾಷ್ಟ್ರೀಕರಣಗೊಂಡು ಸಾಮಾಜಿಕ ಸೇವೆಗೆ ತನ್ನನ್ನು ತಾನು ತೆರೆದುಕೊಳ್ಳದಿದ್ದರೂ ವಿಜಯಾ ಬ್ಯಾಂಕಿನ ಇತಿಹಾಸದಲ್ಲಿ ಇದೊಂದು ಗಮನಾರ್ಹ ವರ್ಷವಾಗಿ ಚಿರನೂತನವಾಯಿತು. ಮುಂದಿನ ತನ್ನ ಅಭ್ಯುದಯಕ್ಕೆ ನಾಂದಿ ಎನ್ನುವಂತೆ, ತಾನು ಏರಬೇಕಾದ ಎತ್ತರಕ್ಕೆ ಊರುಗೋಲಾಗಿ ನಿಲ್ಲಬಲ್ಲ ಧೀಮಂತ ವ್ಯಕ್ತಿತ್ವ ಮೂಲ್ಕಿ ಸುಂದರರಾಮ ಶೆಟ್ಟಿಯವರದು. ವಿಜಯಾ ಬ್ಯಾಂಕಿನ ಅಧ್ಯಕ್ಷರಾಗಿ ನಿಯುಕ್ತರಾದುದು ಇದೇ ವರ್ಷದಲ್ಲಿ. 'ವಿಜಯಾ ಬ್ಯಾಂಕಿನ ಶಿಲ್ಪಿ' ಎಂದು ಕರೆಸಿಕೊಳ್ಳುವ ಶ್ರೀ ಶೆಟ್ಟಿಯವರ ಕನಸುಗಳು ಸಾಕಾರಗೊಳ್ಳಲು ಪ್ರಾರಂಭಿಸಿದುದು ಈ ವರ್ಷದಿಂದ. ತನ್ನ ಗೌರವಾಧ್ಯಕ್ಷ ಹುದ್ದೆಯ ಕಾಲದಲ್ಲಿ, ತಾನು ಕಂಡು ಕೊಂಡಿದ್ದ ಹುದ್ದೆಯ ಆಸೆಗಳೆಲ್ಲವನ್ನೂ ಕ್ರಿಯಾ ಶೀಲಗೊಳಿಸಿ,



ವಿಜಯಾ ಬ್ಯಾಂಕಿನ ಬೆಳವಣಿಗೆಗೆ ತನ್ನನ್ನು ತಾನು ಮುಡಿಪಾಗಿ ಇಟ್ಟ ವರ್ಷ ಇದುವೇ ಆಗಿತ್ತು. ಶ್ರೀ ಸುಂದರರಾಮ ಶೆಟ್ಟಿಯವರು ವಿಜಯಾ ಬ್ಯಾಂಕಿನ ಅಧ್ಯಕ್ಷರಾಗಿ ನಿಯುಕ್ತಿಗೊಂಡಾಗ ಮಾಡಿದ ಮೊದಲ ಕೆಲಸವೆಂದರೆ ವಿಜಯಾ ಬ್ಯಾಂಕಿನ ಆಡಳಿತ ಕಛೇರಿಯನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಮನಸ್ಸು ಮಾಡಿದ್ದು. ಕರ್ನಾಟಕದ ವಾಣಿಜ್ಯ ರಾಜಧಾನಿ ಬೆಂಗಳೂರು ಆಗಿರುವುದರಿಂದ ವ್ಯವಹಾರಕ್ಕೆ ಮತ್ತು ವಾಣಿಜ್ಯ ಬಳಕೆಗೆ ಬೆಂಗಳೂರು ಪ್ರಶಸ್ತವಾದ ಸ್ಥಳವಾಗಿದ್ದುದರಿಂದ ಶ್ರೀ ಶೆಟ್ಟರು ಈ ತೀರ್ಮಾನವನ್ನು ಕೈಗೊಂಡರು. ಇದರಿಂದಾಗಿ 1969ರಲ್ಲಿ ವಿಜಯಾ ಬ್ಯಾಂಕಿನ ಆಡಳಿತ ಕಛೇರಿಯು ಬೆಂಗಳೂರಿನ ರೇಸ್ ಕೋರ್ಸ್ ರೋಡಿನಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ತೆರೆದುಕೊಂಡಿತು. ಶ್ರೀ ಶೆಟ್ಟರ ಈ ಮುಂದಾಲೋಚನಾ ತೀರ್ಮಾನ ವಿಜಯಾ ಬ್ಯಾಂಕಿನ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು ಮಾತ್ರವಲ್ಲ, ವಿಜಯಾ ಬ್ಯಾಂಕಿನ ಅಭ್ಯುದಯಕ್ಕೆ ಇದು ಅಡಿಗಲ್ಲಾಯಿತು.

ಕ್ರಿ. ಶ. 1969ರಿಂದ 1976ರ ಅವಧಿಯಲ್ಲಿ ವಿಜಯಾ ಬ್ಯಾಂಕು ಇನ್ನಿಲ್ಲದಷ್ಟು ವಿಶೇಷ ಸಾಧನೆಗಳನ್ನು ಮಾಡಿತು. ಸುಂದರರಾಮ ಶೆಟ್ಟಿಯವರ ದಕ್ಷ ಮಾರ್ಗದರ್ಶನದಲ್ಲಿ ಹಲವಾರು ಮೈಲಿಗಲ್ಲುಗಳನ್ನು ನೆಟ್ಟಿತು. 1968ರ ಅವಧಿಯಲ್ಲಿದ್ದ ಬ್ಯಾಂಕಿನ ನಿರಖು ಠೇವಣಿ 13.12 ಕೋಟಿಗಳಾಗಿತ್ತು. 1976ರ ಅವಧಿಗಾಗುವಾಗ ವಿಜಯಾ ಬ್ಯಾಂಕಿನ ನಿರಖು ಠೇವಣಿ 221.02 ಕೋಟಿ ರೂಪಾಯಿಗಳಿಗೆ

ಏರಿತು. ಬ್ಯಾಂಕಿನ ವಾರ್ಷಿಕ ಅಭಿವೃದ್ಧಿಯ ಪ್ರಗತಿ ದರವು 42.2%ಗೆ ಈ ಅವಧಿಯಲ್ಲಿ ಏರಿತು. ಸಂದಾಯ ಬಂಡವಾಳವು 13.83 ಲಕ್ಷಗಳಿಂದ 117.90 ಲಕ್ಷಗಳಿಗೆ ಏರಿತು. ಶೇರು ಡೆವಿಡೆಂಡಿನ ಬೆಲೆ ವ್ಯಾಪಾರಿಗಳಿಗೆ ಒಮ್ಮೆಲೆ ದ್ವಿಗುಣಗೊಂಡು 6% ನಿಂದ 12%ಗೆ ಏರಿತು.

ವಿಜಯಾ ಬ್ಯಾಂಕು ಈ ಅವಧಿಯಲ್ಲಿ 377 ಹೊಸ ಶಾಖೆಗಳನ್ನು ಸೃಷ್ಟಿಸಿತು ಹಾಗೂ ಒಟ್ಟು ಸಿಬ್ಬಂದಿಗಳ ಸಂಖ್ಯೆ 7457ಕ್ಕೆ ಏರಿತು. ಅಲ್ಪ ಸಮಯದಲ್ಲಿಯೇ ಇಂಥಾ ಅಭಿವೃದ್ಧಿಯನ್ನು ಬ್ಯಾಂಕು ಪಡೆದುಕೊಳ್ಳಬೇಕಾದರೆ ಸುಂದರರಾಮ ಶೆಟ್ಟಿಯವರ ಸತತ ಪ್ರಯತ್ನ ಮತ್ತು ಬುದ್ಧಿವಂತಿಕೆಯನ್ನು ಮೆಚ್ಚಲೇ ಬೇಕು. ಅವರ ಅಧಿಕಾರಾವಧಿಯಲ್ಲಿ ಬ್ಯಾಂಕಿನ ವ್ಯಾಪ್ತಿ ಆರ್ಥಿಕವಾಗಿಯೂ, ಭೌಗೋಳಿಕವಾಗಿಯೂ ಸಾಕಷ್ಟು ವಿಸ್ತಾರವಾಯಿತು. ಉತ್ತರ ಭಾರತದ ಮತ್ತು ಈಶಾನ್ಯ ಭಾರತದ ರಾಜ್ಯಗಳಲ್ಲಿ ವಿಜಯಾ ಬ್ಯಾಂಕು ತನ್ನ ಹೊಸ ಹೊಸ ಶಾಖೆಗಳನ್ನು ಪ್ರಾರಂಭಿಸಿತು. ಜಾತಿ ಧರ್ಮಗಳ ಬೇಧವಿಲ್ಲದೆ ಬಡವರಾದವರೆಲ್ಲರಿಗೂ ತಮ್ಮ ಬ್ಯಾಂಕಿನಲ್ಲಿ ಕೆಲಸ ಮಾಡುವುದಕ್ಕೆ ಶ್ರೀ ಶೆಟ್ಟರು ಅವಕಾಶ ಮಾಡಿಕೊಟ್ಟರು. ಇದರಿಂದಾಗಿಯೇ ಇಂದೂ ಕೂಡಾ ದೇಶದಾದ್ಯಂತ ಶ್ರೀ ಶೆಟ್ಟರ ಹೆಸರನ್ನು ಹೇಳುತ್ತಾ ದೀಪ ಹಚ್ಚಿ ಸ್ಮರಿಸಿಕೊಳ್ಳುವ ಎಷ್ಟೋ ಕುಟುಂಬಗಳಿವೆ. ಕಕ್ವಗುತ್ತು ಸುಂದರರಾಮ ಶೆಟ್ಟಿಯವರ ಕಾರ್ಯ ವೈಖರಿಯಿಂದಾಗಿ ಒಂದು ಸಣ್ಣ ಜಿಲ್ಲೆಯಲ್ಲಿ ಹುಟ್ಟಿಕೊಂಡ ವಿಜಯಾ ಬ್ಯಾಂಕು ತನ್ನ ಕಾರ್ಯ ವ್ಯಾಪ್ತಿಯನ್ನು ರಾಜ್ಯ, ರಾಷ್ಟ್ರ ಮಟ್ಟದಲ್ಲಿ



ಪಸರಿಸಿರುವುದು ಮಾತ್ರವಲ್ಲ, ಪ್ರಾಬಲ್ಯವನ್ನು ಪಡೆದುಕೊಂಡು ಜನ-ಮನದಲ್ಲಿ ಗೌರವ ಭಾವನೆ ಮೂಡುವಂತೆ ಮಾಡಿದೆ.

ವಿಜಯಾ ಬ್ಯಾಂಕು ತನ್ನ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸುತ್ತಾ ಹೋದಂತೆ ತನ್ನ ಗಾತ್ರವನ್ನು ವಿಸ್ತರಿಸುತ್ತಾ ಹೋಯಿತು. ಇದರಿಂದಾಗಿ ಹೊಸ ಹೊಸ ಜವಾಬ್ದಾರಿಗಳನ್ನು ನಿರ್ವಹಿಸಿ, ತನ್ನನ್ನು ತಾನು ಹೊಸ ಹೊಸ ಅನುಭವಗಳಿಗೆ ತೆರೆದುಕೊಳ್ಳಬೇಕಾದ ಅನಿವಾರ್ಯತೆ ಒದಗಿ ಬಂದಿತು. ಇದರಿಂದಾಗಿ ಗ್ರಾಹಕರ ಉಪಯೋಗಕ್ಕಾಗಿ ಅವರ ಸಮರ್ಪಕ ಸೇವೆಗಾಗಿ ಬೇರೆ ಬೇರೆ ಘಟಕಗಳನ್ನು ಸ್ಥಾಪಿಸಿತು.

| ಕ್ರ.ಸಂ. | ಘಟಕ | ತೆರೆದ ವರ್ಷ |
|---|---|---|
| 1. | ಸಿಬ್ಬಂದಿ ತರಬೇತಿ ಕಾಲೇಜು | 1970 |
| 2. | ಅಂತರಾಷ್ಟ್ರೀಯ ಹಣಕಾಸು ವಿನಿಮಯ ವಿಭಾಗ | 1971 |
| 3. | ಕೃಷಿ ಘಟಕ | 1972 |
| 4. | ಆರ್ಥಿಕ ಮತ್ತು ಸಂಖ್ಯಾ ಶಾಸ್ತ್ರ ವಿಭಾಗ | 1974 |
| 5. | ಮೆಕ್ಯಾನೈಸ್‌ಡ್ ಡಾಟಾ ಪ್ರೊಸೆಸಿಂಗ್ ವಿಭಾಗ | 1974 |
| 6. | ಕ್ರೆಡಿಟ್ ಫಂಡ್ ಕಂಟ್ರೋಲ್ ವಿಭಾಗ | 1978 |

ಕ್ರಿ. ಶ. 1976ರಲ್ಲಿ ಅಹಮ್ಮದಾಬಾದಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಮ್ಯಾನೇಜ್‌ಮೆಂಟಿನೊಂದಿಗೆ ಪುನರ್ ಸಂಘಟನೆಯ ವಿಚಾರದಲ್ಲಿ ತಿಳುವಳಿಕೆಯನ್ನು ಪಡೆದುಕೊಂಡಿತು. ಇದರಿಂದಾಗಿ ಅನೇಕ ಸುಧಾರಣೆಗಳು ಕ್ಷಿಪ್ರವಾಗಿ ನಡೆದು ವಿಜಯಾ ಬ್ಯಾಂಕಿನ 18

ಪ್ರಾದೇಶಿಕ ಕಛೇರಿಗಳು ಹುಟ್ಟಿಕೊಂಡವು ವಿಜಯಾ ಬ್ಯಾಂಕಿನ ಆಡಳಿತದಲ್ಲಿ ವಿಕೇಂದ್ರೀಕರಣವನ್ನು ತರುವುದಕ್ಕೆ ಇದು ಸಹಕಾರಿಯಾಯಿತು.

ಕ್ರಿ. ಶ. 1980 ಎಪ್ರಿಲ್ 15ರಂದು ವಿಜಯಾ ಬ್ಯಾಂಕು ರಾಷ್ಟ್ರೀಕರಣಗೊಂಡಿತು. ವಿಜಯಾ ಬ್ಯಾಂಕಿನ ಆಡಳಿತದಲ್ಲಿ ಸರಕಾರದ ಹಸ್ತಕ್ಷೇಪಕ್ಕೆ ನಾಂದಿಯಾಯಿತು. ಖಾಸಗಿ ಒಡೆತನಕ್ಕೆ ಪರ್ಯಾಯವಾಗಿ ಬ್ಯಾಂಕಿನ ಮೇಲೆ ನಿಗಾ ಇಡುವುದಕ್ಕಾಗಿ ಸರಕಾರದಿಂದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ನೇಮಿಸಲ್ಪಟ್ಟವರು ಶ್ರೀ ಸತ್ಯದೇವ ಅವರು. ಆಗಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯಾಧಿಕಾರಿ ಶ್ರೀ ವಿಜಯ ರಾಘವನ್‌ರವರು ಅಧ್ಯಕ್ಷರಾಗಿ ಮತ್ತು ನಿರ್ದೇಶಕರಾಗಿ ಮಾರ್ಚ್ 23, 1981ರಲ್ಲಿ ಆಯ್ಕೆಯಾದರು. ಖಾಸಗಿ ಒಡೆತನಕ್ಕೆ ಪರ್ಯಾಯವಾಗಿ ಬಂದ ಸರಕಾರಿ ಆಡಳಿತದ ಬದಲಾವಣೆ ವಿಜಯಾ ಬ್ಯಾಂಕಿನ ನಿರ್ದೇಶಕರಾಗಿ ಶ್ರೀ ಸುಂದರರಾಮ ಶೆಟ್ಟಿಯವರಿಗಾಗಲೀ, ಇತರ ಪದಾಧಿಕಾರಿಗಳಿಗಾಗಲೀ ಕಷ್ಟವಾಗಲಿಲ್ಲ. ಏಕೆಂದರೆ, ವಿಜಯಾ ಬ್ಯಾಂಕು ಹುಟ್ಟಿದ ಉದ್ದೇಶವೇ ರೈತರ ಅಭ್ಯುದಯದ ದೃಷ್ಟಿಯಿಂದಾಗಿತ್ತು. ಅದೇ ನೀತಿ ರಾಷ್ಟ್ರೀಯ ನೀತಿಯಾಗಿರುವುದರಿಂದಲೂ, ಬಡವರ ಅಭ್ಯುದಯವೇ ಸರಕಾರದ ಮುಖ್ಯ ಕಾಳಜಿಯಾಗಿರುವುದರಿಂದಲೂ ಶ್ರೀ ಶೆಟ್ಟರಿಗೆ ಈ ನೀತಿಯನ್ನು ಅನುಸರಿಸುವುದು ಕಷ್ಟವಾಗಲಿಲ್ಲ.



# ಮುಲ್ಕಿ ಹಾಗೂ ಆಸುಪಾಸಿನ ಜನತೆಗೆ ದಿ। ಸುಂದರರಾಮ ಶೆಟ್ಟಿಯವರ ಕೊಡುಗೆ

''ಪರೋಪಕಾರಂ ಇದಂ ಶರೀರಂ '' ಎಂಬಂತೆ ತನ್ನ ಜೀವನದಲ್ಲಿ ಕೈಲಾದಷ್ಟು ಸಹಾಯ ಮಾಡಿದ ವ್ಯಕ್ತಿ ಸುಂದರರಾಮ ಶೆಟ್ಟರು. ಬೆಂಗಳೂರು ಪ್ರಧಾನ ಕಚೇರಿಯಲ್ಲಿ ಇವರೊಂದಿಗೆ ಕೆಲಸ ಮಾಡಿದ ಪ್ರಸ್ತುತ ಅತಿಕಾರಿ ಬೆಟ್ಟು ಶಾಖೆಯಲ್ಲಿ ಕೆಲಸ ಮಾಡುತ್ತಿರುವ ನಮ್ಮೂರಿನವರಾದ ಶಂಕರ ಶೆಟ್ಟಿ ಹಾಗೂ ಕುಶಲ ಶೆಟ್ಟಿ ನನ್ನ ಬಳಿ ಹೇಳಿದ ಮಾತು ನೆನಪಿಗೆ ಬರುತ್ತದೆ. ಯಾವುದೇ ವ್ಯಕ್ತಿ ತನ್ನ ಮಕ್ಕಳ ವಿದ್ಯಾಭ್ಯಾಸ ಅಥವಾ ಮಗಳ ಮದುವೆಗೆ ಸಹಾಯ ಕೋರಿ ಸುಂದರ ರಾಮ ಶೆಟ್ಟರ ಬಳಿ ಬಂದಾಗ ಬ್ಯಾಂಕಿನಿಂದ ಕೆಲವು ಯೋಜನೆಗಳಡಿ ಸವಲತ್ತನ್ನು ಇಂತಹ ವ್ಯಕ್ತಿಗಳಿಗೆ ಒದಗಿಸಿ ಕೊಟ್ಟ ಪುಣ್ಯಾತ್ಮರಿವರು, ಎಂದು ನನ್ನ ಬಳಿ ಶಂಕರ ಶೆಟ್ಟಿ ಹಾಗೂ ಕುಶಲ ಶೆಟ್ಟಿ ಹೇಳಿದಾಗ ಆ ಅಭೂತಪೂರ್ವ ಸಹಕಾರದ ಚಿತ್ರಣ ಕಣ್ಮುಂದೆ ಬಂದು ಬಿಡುತ್ತದೆ. ತಾವೂ ಅಧ್ಯಕ್ಷರಾಗಿದ್ದಾಗ ಜಾತಿಮತ ಭೇದವಿಲ್ಲದೇ ಹಲವು ಯುವಕ ಯುವತಿಯರಿಗೆ ವಿಜಯಾ ಬ್ಯಾಂಕಿನಲ್ಲಿ ಉದ್ಯೋಗ ಕೊಡಿಸಿ ಹಲವು ಮನೆಗಳಲ್ಲಿ ಇಂದಿಗೂ ಇವರು ಆರಾಧ್ಯದೇವರಾಗಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

## ಹುಟ್ಟಿದೂರಿನ ಋಣ (ತನ್ನೂರಿಗೆ ಕೊಡುಗೆ)

**ತಾಯ್ನಾಡಿಗೆ :** ತನ್ನೂರಿನ ಪಕ್ಕದಲ್ಲಿರುವ ಅತಿ ಗ್ರಾಮೀಣ ಪ್ರದೇಶ ಹಾಗೂ ಸಾಕಷ್ಟು ವಿದ್ಯುತ್ ಮತ್ತು ಮಾರ್ಗರಸ್ತೆಯ ವ್ಯವಸ್ಥೆಗಳಿಲ್ಲದ

ಊರಾದ ಅತಿಕಾರಿ ಬೆಟ್ಟುವಿನಲ್ಲಿ 14-8-1972ರಂದು ವಿಜಯಬ್ಯಾಂಕಿನ ಶಾಖೆ ತೆರೆದರು. ಇದರಿಂದ ಗ್ರಾಮೀಣ ಪ್ರದೇಶದವರಿಗೆ ಸಹಾಯ ಮಾತ್ರವಲ್ಲದೆ, ಈ ಊರಿಗೆ ವಿದ್ಯುತ್ ಹಾಗೂ ರಸ್ತೆಯ ನಿರ್ಮಾಣಕ್ಕೆ ನಾಂದಿ ಶಾಖೆಯ ಪ್ರಾರಂಭದಿಂದ ಆಯಿತು. ಈ ಶಾಖೆಯ ಉದ್ಘಾಟನೆಗೆ ಆಗಿನ ಸಾರಿಗೆ ಸಚಿವ ಶ್ರೀ ಚೆನ್ನಬಸಪ್ಪ ಬಂದಿದ್ದು, ಈ ಸಮಾರಂಭದ ಸವಿನೆನಪು ಈ ಗ್ರಾಮದ ಹಾಗೂ ಆಸುಪಾಸಿನ ಮುಗ್ಧ ಜನರ ಮನದಲ್ಲಿ ಇನ್ನೂ ಅವಿಸ್ಮರಣೀಯವಾಗಿ ಉಳಿದಿದೆ.

**ತಾನು ಕಲಿತ ಶಾಲೆಯೆಂಬ** ಮಮಕಾರ ಪ್ರತೀ ವಿದ್ಯಾರ್ಥಿಗೂ ಇರುವುದು ಸಹಜ. ಆದರೆ ಯೋಗ ಕೂಡಿ ಬಂದಾಗ ಮಾತ್ರ ಏನಾದರೂ ಪ್ರತಿಫಲ ಸಲ್ಲಿಸಲು ಸಾಧ್ಯ. ಇಂತಹ ಯೋಗ ದಿವಂಗತ ಸುಂದರರಾಮ ಶೆಟ್ಟರಿಗೆ ಬಂದು ಒದಗಿದ್ದು ಒಂದು ಸುಯೋಗ. ತನ್ನ ಬಾಲ್ಯ ವಿದ್ಯಾಭ್ಯಾಸವನ್ನು ಕಲಿತ ಶಾಲೆ ಕೊಲೆಕಾಡಿ ಹಿರಿಯ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವ 1976ರಲ್ಲಿ ನಡೆದಾಗ, ಈ ಮಹೋತ್ಸವ ಸಮಾರಂಭದ ನಿಯೋಜಿತ ಅಧ್ಯಕ್ಷರಾದದ್ದು ಮಾತ್ರವಲ್ಲದೇ, ತಮ್ಮಿಂದಾಗುವಷ್ಟು ಶಾಲೆಗೆ ಅಮೂಲ್ಯ ಕೊಡುಗೆಯನ್ನು ನೀಡಿರುತ್ತಾರೆ. ಶಾಲೆಯನ್ನು ಪ್ರೌಢಶಾಲೆ ಮಾಡಬೇಕೆಂಬ ಕನಸು ಇಂದು ನನಸಾಗಿದೆ. ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಯಲ್ಲಿ ಶಾಲೆಯ ನಿವೃತ್ತ ಅಧ್ಯಾಪಕ ಕೆ. ಬೆಮರ್ಜುಮಾಸ್ಟರವರು ತಮ್ಮ ಲೇಖನವಾದ



''ನನ್ನ ನೆಚ್ಚಿನ ಶಾಲೆ''ಯಲ್ಲಿ ಸುಂದರರಾಮ ಶೆಟ್ಟಿಯವರ ಬಗ್ಗೆ ಬರೆದ ಮಾತುಗಳು ಇಲ್ಲಿ ಉಲ್ಲೇಖಾನರ್ಹವಾಗಿರುತ್ತದೆ.

''ಒಬ್ಬ ಮಹಾ ವ್ಯಕ್ತಿಯಾಗಿ ಬಾಳಿ ಮೆರೆಯಬೇಕಾದರೆ ಆ ವ್ಯಕ್ತಿಯು ಮಾಡಿದ ಪೂರ್ವಜನ್ಮದ ಪುಣ್ಯ ಫಲವೆಷ್ಟು . ಅವರು ಎಂತಹ ಸೌಭಾಗ್ಯವನ್ನು ಪಡೆದುಕೊಂಡು ಜನ್ಮಕ್ಕೆ ಬಂದರು ? ಎಂಬುದನ್ನು ತಿಳಿಯಲು ಯಾರಿಂದಲು ಅಸಾಧ್ಯ. ಒಬ್ಬ ಸಾಮಾನ್ಯ ವ್ಯಕ್ತಿ ಅಂಥ ಒಂದು ಯೋಗ್ಯತೆಯು ತನಗೆ ಬಂದಿತು ಅಥವಾ ಬರಬೇಕು ಎಂದು ತಿಳಿದುಕೊಂಡು ಆತುರಪಡುವಷ್ಟು ಸುಲಭವಾಗಿ ದೊರೆಯಲಾರದು. ಇವರು ಒಂದು ಯುಗಪ್ರವರ್ತಕರೆಂದು ನಾನು ಸಂಬೋಧಿಸಿದರೆ ಅದು ಎಷ್ಟಕ್ಕೂ ಮುಖಸ್ತುತಿಯಾಗಲಾರದು. ಈ ಪುಣ್ಯ ಪುರುಷನನ್ನು ಪಡೆದ ಈ ನಾಡಿನ ಜನರು ಧನ್ಯರು. ನಮ್ಮ ಕನ್ನಡ ಮಾತೆ ಮಹಾಭಾಗ್ಯವಂತೆ. ಇವರ ಈ ಘನಕಾರ್ಯವೂ ಸೂರ್ಯಚಂದ್ರರಿರುವ ತನಕ ಚಿರಸ್ಮರಣೀಯವಾಗಿ ಉಳಿಯುವುದು. ಇದು ಅರ್ಥಾತ ಸತ್ಯ ಸಾವಿರಾರು ಬಡ ಕುಟುಂಬಗಳನ್ನು ಉದ್ಧರಿಸಿದ ಈ ಮಹಾನುಭಾವರಿಗೆ ಶ್ರೀ ಭಗವಂತನು ಆರೋಗ್ಯವನ್ನು ಸಂಪತ್ತನ್ನು ಕೊಟ್ಟು ಕಾಪಾಡಲಿ ಎಂದು ಆಶಿಸುತ್ತೇನೆ. ''

ನಿಜ, ಒಂದು ಶಾಲೆಯ ಅಧ್ಯಾಪಕರು ತಮ್ಮ ಶಾಲಾ ಹಳೆವಿದ್ಯಾರ್ಥಿಯ ಬಗ್ಗೆ ಈ ಮೇಲಿನಂತೆ ಪ್ರಸ್ತುತ ಪಡಿಸಿದಾಗ ದಿ.ಸುಂದರರಾಮ ಶೆಟ್ಟರ ಕೊಡುಗೆ ಏನು ಎಂಬುದು ಊಹಿಸಲಾರದವನು ಯಾರು ಇರಲಿಕ್ಕಿಲ್ಲ. ತನ್ನೂರಿನ ತನ್ನ ಶಾಲೆ ಕಕ್ವ

ಪ್ರೈಮರಿ ಶಾಲೆ (ಗುಡ್ಡೆಶಾಲೆ) ಕಕ್ವಗುತ್ತಿನ ಹತ್ತಿರ ಸ್ಥಳಾಂತರಗೊಂಡಾಗಲು ಕಟ್ಟಡಕ್ಕೆ ಹಾಗೂ ಶಾಲೆಯ ಅಭಿವೃದ್ಧಿಗೂ ಧನ ಸಹಾಯ ಮಾಡಿದ್ದು ಇವರು ತಮ್ಮ ಬಾಲ್ಯವನ್ನು ಎಷ್ಟು ಪ್ರೀತಿಸುತ್ತಿದ್ದರು ಎಂಬುದರ ದ್ಯೋತಕವಾಗಿದೆ.

ಅಲ್ಲದೇ, ತಾನು ಕಲಿತ ಶಾಲೆಯಲ್ಲದಿದ್ದರೂ ಯು.ಬಿ.ಎಂ.ಸಿ. ಶಾಲೆಯ ನೂತನ ಕಟ್ಟಡಕ್ಕೆ ಇವರು ಧನಸಹಾಯ ಮಾಡಿದ್ದು, ವಿದ್ಯಾಸಂಸ್ಥೆಯ ಮೇಲೆ ಇರುವ ಇವರ ಅಭಿಮಾನದ ಕುರುಹುವಿಗೆ ನಿದರ್ಶನವಾಗಿದೆ.

**ಯೂನಿಯನ್ ಕ್ಲಬ್ ಮುಲ್ಕಿ :-** ತನ್ನ ಬಾಲ್ಯದ ದಿನಚರಿಯ ಒಂದು ಅಂಶವೆಂದರೆ ಮುಲ್ಕಿಯಲ್ಲಿ 1915ರಲ್ಲಿ ಸ್ಥಾಪಿತವಾದ ದಿ ಯೂನಿಯನ್ ಕ್ಲಬ್‌ನ ಸಂಗ. ಸುಂದರರಾಮ ಶೆಟ್ಟರು ''ಆಟದ ಬಯಲು ಮಾನವ ಜೀವನದ ನಿಜವಾದ ರಂಗ ಭೂಮಿ '' ಎಂದು ನಂಬಿದ ವ್ಯಕ್ತಿ ಶೆಟ್ಟರು ತಮ್ಮ ತಾರುಣ್ಯದ ಬಿಡುವಿನ ಸಮಯದಲ್ಲಿ ಕೇರಂ, ಚೆಸ್, ಟೇಬಲ್ ಟೆನಿಸ್ ಕ್ಲಬ್‌ನಲ್ಲಿ ಆಡುವುದರೊಂದಿಗೆ ವಾಚನಾಲಯದಲ್ಲಿಯೂ ತಮ್ಮ ಅಮೂಲ್ಯ ಸಮಯ ಕಳೆಯುತ್ತಿದ್ದರು. ಇಂತಹ ಕ್ಲಬ್‌ನ ಸುವರ್ಣ ಮಹೋತ್ಸವ ಆಚರಣೆಗೆ ತಮ್ಮ ಸಂಪೂರ್ಣ ಸಹಕಾರ ಶ್ರೀಯುತ ಸುಂದರರಾಮ ಶೆಟ್ಟರು ಧನ ಸಹಾಯ ರೂಪದಲ್ಲಿ ನೀಡಿದ್ದಲ್ಲದೆ, ಕ್ಲಬ್ಬಿಗೆ ಅಗತ್ಯವಿರುವ 100 ಗೋಡ್ರೇಜ್ ಕುರ್ಚಿಗಳನ್ನು, ಕಟ್ಟಡಕ್ಕೆ ಹಾಗೂ ಗ್ರಂಥಾಲಯಕ್ಕೂ ತಮ್ಮ ಉದಾರ ದೇಣಿಗೆಯನ್ನು ನೀಡಿದರು.



ದಿನಾಂಕ 31-1-1971ರಲ್ಲಿ ನಡೆದ ಸ್ವರ್ಣ ಜಯಂತಿಯ ಸವಿ ನೆನಪಿಗಾಗಿ ನಡೆದ ಸಮಾರಂಭದಲ್ಲಿ ಸ್ಮರಣ ಸಂಚಿಕೆಯನ್ನು ಇವರ ಅಭಯ ಹಸ್ತದಿಂದಲೇ ಬಿಡುಗಡೆಗೊಳಿಸಲಾಯಿತು. ಈ ಕ್ಲಬ್ಬಿಗಾಗಿ ಬೆಂಗಳೂರಿನ ಎಂ. ಪಿ. ಜೆ. ಬಾಗಿಲ್ತಾಯ, ಶ್ರೀ ಎಮ್. ಎಸ್. ರಾಮನ್, ಶ್ರೀ ಉಮಾನಾಥ ರಾವ್, ಕೆ. ವಿ. ಮಲ್ಪೆ, ಶ್ರೀ ಬಿ.ವಿಠಲ್ ಶೆಟ್ಟಿ ಹಾಗೂ ಶ್ರೀರಾಮಚಂದ್ರ ಕಾಮತ್‌ರು ಧನ ಸಹಾಯ ಮಾಡಿರುವುದು ಈ ಹಳೆದಾದ ಕ್ಲಬ್ ಎಷ್ಟೊಂದು ಪ್ರಖ್ಯಾತಿಯಾಗಿತ್ತು ಎಂಬುದನ್ನು ತೋರಿಸುತ್ತದೆ. ದಿನಾಂಕ 2-6-1975ರಂದು ಶ್ರೀಯುತ ಸುಂದರರಾಮ ಶೆಟ್ಟರಿಗೆ ಮುಲ್ಕಿಯಲ್ಲಿ ಸಾರ್ವಜನಿಕ ಸನ್ಮಾನ ಸಮಿತಿಯವರು ಅವರ ಅದ್ಭುತ ಕಾರ್ಯವನ್ನು ಮೆಚ್ಚಿ, ಅವರನ್ನು ಸನ್ಮಾನಿಸಿ 'ಕವಿತಾ ಪುಷ್ಪಹಾರಾರ್ಪಣೆ' ಮಾಡಿದರು.

ಶ್ರೀ ಶೆಟ್ಟರು ಅಧ್ಯಕ್ಷರಾಗಿದ್ದ ಸಮಯದಲ್ಲಿ, ತಮ್ಮೂರಿನ ಜಿಲ್ಲೆಯಲ್ಲಿ ಕುಂದಾಪುರ, ಶಿರ್ವ, ಪೆರಿಯಡ್ಕ ಹಾಗೂ ಪಾಂಗಾಳ ಮೊದಲಾದ ಪ್ರದೇಶಗಳಲ್ಲಿ ಬ್ಯಾಂಕಿನ ಖಾತೆಯನ್ನು ಸ್ಥಾಪಿಸಿದರು. ಶಿರ್ವದಲ್ಲಿ ಕ್ರಿಶ್ಚನ್ ಶಾಲೆಯವರು ಆರ್ಟ್ಸ್ ಮತ್ತು ವಿಜ್ಞಾನ ಪದವಿ ಶಾಲೆಯನ್ನು ಸ್ಥಾಪಿಸಲು ಆಲೋಚನೆ ಪಟ್ಟಾಗ, ಬಂಟ್ ಆಡಳಿತ ಮಂಡಳಿಯ ಶಾಲೆಯವರು ಕೂಡಾ ಕಾಲೇಜೊಂದನ್ನು ಶುರು ಮಾಡುವರೇ ಕಾರ್ಯಸಿದ್ಧರಾಗಿದ್ದರು. ಕಾಪುವಿನಲ್ಲಿ ಆ ಸಮಯ ಭಾಸ್ಕರ ಶೆಟ್ಟರು ಶಾಸಕರಾಗಿದ್ದರೂ, ಕಾಲೇಜು ಪ್ರಾರಂಭಿಸುವುದು

ಅಷ್ಟೊಂದು ಸುಲಭವಾಗಿರಲಿಲ್ಲ. ಸುಂದರರಾಮ ಶೆಟ್ಟಿಯವರೊಂದಿಗೆ ಶಿರ್ವ ಹೆಗ್ಡೆಯವರಿಗೆ ಒಳ್ಳೆಯ ಸಂಬಂಧವಿದ್ದ ಕಾರಣ ಹಾಗೂ ಸುಂದರರಾಮ ಶೆಟ್ಟಿಯವರ ಸತತ ಪರಿಶ್ರಮ ಹಾಗೂ ಕಾರ್ಯತತ್ಪರತೆಯಿಂದ 1980ರಲ್ಲಿ ಶಿರ್ವದಲ್ಲಿ ಕಾಲೇಜೊಂದು ಸ್ಥಾಪನೆಯಾಯಿತು. ಇದರ ನಿರ್ಮಾಣಕ್ಕೆ ವಿಜಯ ಬ್ಯಾಂಕ್ ಕೂಡಾ ಧನಸಹಾಯಕ್ಕಾಗಿ ಪರಿಶ್ರಮಪಟ್ಟಿರುತ್ತದೆ. ಶೆಟ್ಟರು, ಆಗಿನ ಪ್ರದಾನಿ ದಿವಂಗತ ಇಂದಿರಾಗಾಂಧಿಯವರೊಂದಿಗೆ ಉತ್ತಮ ಸಂಬಂಧವಿಟ್ಟಿದ್ದ ಕಾರಣ, ಕಾಲೇಜಿನ ನಿರ್ಮಾಣಕ್ಕೆ ಹಾದಿ ಸುಗಮವಾಯಿತು. ಶ್ರೀಯುತ ಸುಂದರರಾಮ ಶೆಟ್ಟರ ಈ ಅವಿರತ ಶ್ರಮಕ್ಕೆ ಮನ್ನಣೆಯೆಂಬಂತೆ ಊರಜನರು ಶಿರ್ವ ಕಾಲೇಜಿಗೆ **ಶ್ರೀ ಸುಂದರರಾಮ ಶೆಟ್ಟಿ ಕಾಲೇಜ್** ಎಂದೇ ನಾಮಕರಣ ಮಾಡಿ, ಇಂದು ಈ ವಿದ್ಯಾಲಯ ಹಲವು ಪ್ರತಿಭೆಗಳನ್ನು ದೇಶಕ್ಕೆ ನೀಡಿದೆ. (1980)

## ವಿಜಯ ರೈತರ ಸಂಘ ಮುಲ್ಕಿ ಹಾಗೂ ಸ್ಟಾಫ್ ಟ್ರೈನಿಂಗ್ ಸೆಂಟರ್

1977ರಲ್ಲಿ, ಶೆಟ್ಟರ ಅಧ್ಯಕ್ಷಾವಧಿಯಲ್ಲಿ, ವಿಜಯ ಬ್ಯಾಂಕ್ ವಿಜಯ ರೈತರ ಸಂಘವನ್ನು ಮೂಲ್ಕಿಯ ದೊಡ್ಡಮನೆಯ ಹತ್ತಿರ ಕಡವಿನ ಬಾಗಿಲಲ್ಲಿ ಸ್ಥಾಪಿಸಿತು. ಪ್ರಸ್ತುತ, ಈ ಸಂಘ, ಮೂಲ್ಕಿ ವಿಜಯಾ ಬ್ಯಾಂಕ್‌ನ ಕಟ್ಟೋಣದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದು ರೈತರಿಗೆ ಹಲವೂ ಸೌಲಭ್ಯ ಒದಗಿಸಿ ಸಹಾಯ ಮಾಡುತ್ತಿದೆ.



# ಶ್ರೀ ಯಂ. ಸುಂದರರಾಮ ಶೆಟ್ಟರಿಗೆ

## ಕವಿತಾ ಪುಷ್ಪಹಾರಾರ್ಪಣೆ

ದ್ವಿಪದಿ (ಝಂಪೆ ತಾಳ)

ವಿನಯ, ಜಯ, ಯಶಗಳಾ [1] ಮೂಲವರ್ಣವನಾಯ್ದು ।
ಜನವರಿಯೆ ತನ್ನ ಬಾವುಟವನಣಿಗೈದು ॥ ೧ ॥
[2] ಯುವವಿತ್ತು [3] ದೂರದರ್ಶಿತ್ವದಕ್ಷಿಯನಿತ್ತ ।
ದೈವ, ತುಳು ನಾಡವರ [4] ಸುರಭಿ, ನುತಿಪಾತ್ರ ॥ ೨ ॥
[5] ಸಿಕ್ಥಪಥತೋರ್ದೆ ಸಾಸಿರ ಮನೆಯ ಜನಕಿಂದು।
ರಿಕ್ತಹಸ್ತರಿಗೆ [6] ಮಂದಾರ, ಗುಣಸಿಂಧು ॥ ೩ ॥

ಸಾಂಗತ್ಯ (ರೂಪಕ ತಾಳ)

ಮೂದಲಿಸುವ ಶ್ವಾನ ಬೊಗಳಲಿದ್ದಾನೆಯೋ - ।
ಲಿದಿರ ನಿಂದಿಸದೆ ಪೇರ್ಮೆಯಲಿ ॥
ಕೆದಕದೆ ಹೃದಯದ ಭುವಿಯನ್ನು ಪೊಗಲು ವ-।
ಸುಂಧರೆಯಹೆ ಗುಪ್ತನಿಧಿಯ ॥ ೪ ॥

ಭಾಮಿನೀ ಷಟ್ಪದಿ

[7] ದಳಿತ ವಿಜಯದ ಶಾಖೆ [8] ನಭದೇ-।
ರಳೆಯೆ, ಪಥಿಕರ ತಣಿಸುತಾ, ಭ್ರಮ-।
ರಾಳಿಯೊಗ್ಗಿನ ಸುಂದರಂ [9] ಕುಸುಮಾವತಿಯಿದೆನಿಸಿ ॥
[10] ಮಲರು, ಫಲ, ಸೀತಮ್ಮನಂಗೊಳೆ ।
[11] ಸೆಳೆದು ಸಕಲರಿಗಾಶ್ರಯವ ಕೊ-।
ಟ್ಟಲಸದಿಹೆ,ಮಂದಾರತರು; ತವಮೂಲ [12] ಮೂಲಿಕೆಯು! ॥ ೫ ॥

ವಾರ್ಧಿಕ ಷಟ್ಪದಿ.

[13] ರಿಸಿಕರ್ಮದಿಂ, ವೈರಿ[14] ಶಲಭ ಪ್ರದೀಪನಾ-।
ಗೆಸೆದು, ಹೋರದೆ ಗೆಲ್ವ ಬಂಟ, ಬೆಳೆಸಿರುವಿ [15] ರಾ-।
ಶುಸಮೃದ್ಧ [16] ಶಾಲಿಗಳ ನಿಜಕರ್ಮಕ್ಷೇತ್ರದೊಳ್ [17] ಪೊಲ್ಲಮೆಯನುರಿಸಿ ಕೊನೆಯ ॥
[18] ಭಸಿತಸಾವನಿತ್ತು, ಆಶ್ರಿತರ ಕಲುಷಗುಣ ।
ಮಸೆವ ಪರುಷವೆ; ಮಿಸುಪ ತವಕೀರ್ತಿ ಮಾಣಿಕ-।
ಕ್ಕೆಸಮಾನವಲ್ತು ಶೇಷನ ಫಣಾಮಣಿ! ತೀವಿ ಬೆಳಗಿಸಲಿ ಜಗವನೋವಿ ॥ ೬ ॥

ಮೂಲ್ಕಿ
ತಾರೀಕು ೨-೬-'೭೫

**ಸಾರ್ವಜನಿಕ ಸಂಮಾನ ಸಮಿತಿ, ಮೂಲ್ಕಿ**

1. ಮೊದಲಿನ ಅಕ್ಷರ, 2. ದೃಷ್ಟಿ ಚಕ್ರದ ಯವ, ಅನ್ನದ ಅಗುಳು, 3. ಮುಂದಾಲೋಚನೆ. 4. ಬೇಡಿದುದನ್ನೀವ ಕಾಮಧೇನು, 5. ಅನ್ನದ ತುತ್ತು, 6. ಕಾಮಿತವನ್ನೀವ ಸುರತರು, 7. ಎಲೆಗಳಿಂದ ಕೂಡಿದ, 8. ಆಕಾಶದ ಎತ್ತರವನ್ನು ಅಳೆಯುವಂತಿದ್ದು, 9. ಹೂವುಗಳದೇ ರಾಜ್ಯ, 10. ಹೂವು, 11. ಆಕರ್ಷಿಸಿ, 12. ಮದ್ದಿನ ಬೇರು, 13. ಋಷಿ, 14. ಮಿಡಿತೆ, ಪತಂಗ, 15. ಹೆಚ್ಚು ಬೆಳೆಕೊಡುವ, ಸಮೃದ್ಧವಾಗಿ ಬೆಳೆದ, 16. ಭತ್ತದ ಸಸಿ, ಭತ್ತ, 17. ಕೆಡುಕು, ದುರ್ಗುಣ, 18. ಬೂದಿ.

ಇದೇ ಕಟ್ಟೋಣದಲ್ಲಿ ದಿನಾಂಕ 16-8-1978ರಂದು ಸ್ಟಾಫ್ ಟ್ರೈನಿಂಗ್ ಸೆಂಟರನ್ನು ಪ್ರಾರಂಭಿಸಲಾಗಿ, ಇಲ್ಲಿ ದೇಶದ ಮೂಲೆ ಮೂಲೆಗಳಿಂದ ಬ್ಯಾಂಕಿನ ನೌಕರರು ತಮ್ಮ ತರಬೇತಿಯನ್ನು ಪಡೆದು, ಮೂಲ್ಕಿಯ ಶಾಂಭವಿಯ ನಿರ್ಮಲ ಒಡನಾಟಕ್ಕೆ ಮರುಳಾಗಿ, ಸುಂದರರಾಮ ಶೆಟ್ಟರ ಜನ್ಮ ಸ್ಥಳಕ್ಕೆ ಎಷ್ಟೊಂದು ಶಕ್ತಿಯಿದೆ ಎಂದು ಅರಿತುಕೊಂಡವರೇ ಹೆಚ್ಚು. ಈ ಟ್ರೈನಿಂಗ್ ಸೆಂಟರನ್ನು ತನ್ನೂರಾದ ಮುಲ್ಕಿಯಲ್ಲಿ ಮಾಡಬೇಕೆಂಬ ಇವರ ಇಚ್ಛೆಗೆ ಸ್ಪಂದಿಸಿ ಪ್ರಸ್ತುತ ಕಟ್ಟೋಣವನ್ನು ಕೊಟ್ಟು ಸಹಕರಿಸಿದ ವ್ಯಕ್ತಿ ಮುಲ್ಕಿಯ ಡಾ। ಸೀತಾರಾಮ ಶೆಟ್ಟರು.

## ಜ್ಞಾನಮಂದಿರ ಮುಲ್ಕಿ

ಬಪ್ಪನಾಡು ದೇವಾಲಯ ಒಂಬತ್ತು ಮಾಗಣೆಗಳ ಮುಲ್ಕಿ ಸೀಮೆಯ ದೇವಾಲಯ. ಮೂಲತಃ ಇಲ್ಲಿಯ ಶ್ರೀ ದುರ್ಗಾಪರಮೇಶ್ವರಿ ದೇವಿ ಸುಮಾರು ನಲವತ್ತಕ್ಕಿಂತಲೂ ಹೆಚ್ಚು ಗ್ರಾಮಗಳ ಜನರ ಆರಾಧ್ಯದೇವತೆ. ಕಾಲಕ್ರಮದಲ್ಲಿ ಶ್ರೀದೇವಿಯು ಸೀಮೆಯ ಹೊರಗಿನ ಅಸಂಖ್ಯ ಭಕ್ತಾದಿಗಳನ್ನು ಆಕರ್ಷಿಕೊಂಡಳು. ಇಲ್ಲಿ ವಿವಾಹ, ಪ್ರವಚನ - ಹರಿಕಥೆ, ಯಕ್ಷಗಾನ, ತಾಳಮದ್ದಳೆ, ಸಂಗೀತ, ನಾಟಕ ಮುಂತಾದ ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸಲು ಬಹುಕಾಲದಿಂದ ಒಂದು ಸಮಾಜ ಮಂದಿರದ ಅವಶ್ಯಕತೆ ಕಂಡು ಬಂತು. ಅಂತಹ ಒಂದು ಸಮಾಜ ಮಂದಿರದ ನಿರ್ಮಾಣ ದೇವಾಲಯದ ಪರಿಸರದಲ್ಲಿ ಸ್ವಾಭಾವಿಕವಾಗಿ



ಇರುವ ಭಕ್ತಿಯೊಂದಿಗೆ ಜ್ಞಾನವನ್ನು ಮೈಗೂಡಿಸುವ ಪ್ರಯತ್ನದಲ್ಲಿ ಸಹಕಾರಿ. ನಾಡಿನ ಅನೇಕ ಶುಭಾಕಾಂಕ್ಷಿಗಳು ಬಪ್ಪನಾಡಿನ ದೇವಾಲಯವು ಕೇವಲ ಅಂಧಶ್ರದ್ಧಾಳುಗಳ ಕೂಟವೆನಿಸದೆ ನಾಡಿಗೇ ಮಾರ್ಗದರ್ಶನ ನೀಡಬಲ್ಲ ಗುರುಕುಲವಾಗಬೇಕು, ಒಂದಲ್ಲ ಒಂದು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಅನವರತ ನಡೆಯುತ್ತಿದ್ದು ಆಬಾಲವೃದ್ಧರನ್ನು ಮುನ್ನಡೆಗೆ ಪ್ರೇರೇಪಿಸುವಂತಿರಬೇಕು ಎಂಬುದಾಗಿ ಕಂಡ ಕನಸುಗಳಿಗೆ ತಳಹದಿಯಾಗಿ ಜ್ಞಾನಮಂದಿರದ ನಿರ್ಮಾಣ ಕಾರ್ಯ ಆರಂಭವಾಯಿತು.

ದಿ। ಸುಂದರರಾಮ ಶೆಟ್ಟರಿಗೆ ಬಪ್ಪನಾಡು ಅಮ್ಮನವರ ಮೇಲೆ ಅಪಾರ ಭಕ್ತಿಯಿತ್ತು. ತಮ್ಮ ಯಾವುದೇ ಕೆಲಸವನ್ನು ಅಮ್ಮನವರನ್ನು ಪ್ರಾರ್ಥಿಸಿಯೇ ಪ್ರಾರಂಭಿಸುತ್ತಿದ್ದರು. ದಿ। ಸುಂದರರಾಮ ಶೆಟ್ಟಿಯವರು ''ಜ್ಞಾನ ಮಂದಿರ''ದ ಯೋಜನೆಯನ್ನು ನಿರ್ಮಿಸಿದ ಶಿಲ್ಪಿಗಳಲ್ಲೊಬ್ಬರಾಗಿದ್ದರು. ಜೀರ್ಣೋದ್ಧಾರ ಸಮಿತಿಯ ಜತೆಗೆ ಅವರು ಹೊಂದಿದ್ದ ನಿಕಟ ಸಂಬಂಧದ ನೆನಪಿಗಾಗಿ ಈ ಮಂದಿರದ ಕೇಂದ್ರಿಯ ಸಭಾಭವನವನ್ನು ಅವರ ಹೆಸರಿನಿಂದ ಕರೆಯುತ್ತಿರುವುದು ಔಚಿತ್ಯಪೂರ್ಣವಾಗಿರುತ್ತದೆ. ಅವರ ಬಂಧುಗಳು ಮತ್ತು ಅಸಂಖ್ಯ ಅಭಿಮಾನಿಗಳು ಅವರ ಹೆಸರಿನಿಂದ ಸಭಾಭವನವನ್ನು ಕರೆದು, ಶ್ರೀ ಶೆಟ್ಟರ ಹೆಸರನ್ನು ಅವರ ಹುಟ್ಟೂರಿನಲ್ಲಿ ಚಿರಸ್ಥಾಯಿಗೊಳಿಸಲು ಉದಾರವಾದ ದೇಣಿಗೆಗಳನ್ನು ನೀಡುವುದು ಅಭಿನಂದನೀಯ.

ದೇವಾಲಯದ ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷರಾಗಿ ಜ್ಞಾನಮಂದಿರದ ಉತ್ಕರ್ಷಕ್ಕೂ, ಕಟ್ಟಡ ನಿಧಿ ಸಂಗ್ರಹಣೆಗೂ, ಸಮಿತಿಗೆ ಬೆನ್ನೆಲುಬಾಗಿ ದುಡಿದ ದಿ। ಸುಂದರರಾಮ ಶೆಟ್ಟಿ ಅವರ ಸೇವೆ ಅವಿಸ್ಮರಣೀಯ ಜ್ಞಾನ ಮಂದಿರದ ಉದ್ಘಾಟನಾ ಸಮಾರಂಭ 18-3-1984ರಂದು ನಡೆಯಿತು. ಶೆಟ್ಟರು ಆ ಸಮಯದಲ್ಲಿ ದೈವಾಧೀನರಾಗಿದ್ದರು. ಅವರ ಮಾರ್ಗದರ್ಶನ ಹಾಗೂ ಸಹಕಾರಗುಣಗಳು ಕಟ್ಟಡದ ಇಂಚಿ ಇಂಚಿನಲ್ಲೂ ಮಿಂಚುತ್ತಿವೆ.

**ಕೆ. ಕೆ. ಪೈ ಹಾಗೂ ಟಿ. ಎ. ಪೈಯವರೊಂದಿಗೆ ನಿಕಟ ಸಂಬಂಧ**

ಮಣಿಪಾಲದ ಪೈ ಕುಟುಂಬದವರೊಂದಿಗೆ ಅತ್ಯಂತ ಅನ್ಯೋನ್ಯ ಸಂಬಂಧವಿಟ್ಟುಕೊಂಡ ವ್ಯಕ್ತಿ ಶ್ರೀ ಸುಂದರರಾಮ ಶೆಟ್ಟರು. ಕೆ. ಕೆ. ಪೈಯವರು ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರಾಗಿರುವಾಗ, ಸುಂದರರಾಮ ಶೆಟ್ಟರು ಹಲವು ಮಾಹಿತಿ ಹಾಗೂ ಮಾರ್ಗದರ್ಶನ ಪಡೆದದ್ದು ಮಾತ್ರವಲ್ಲದೇ, ಸಿಬ್ಬಂದಿ ನೇಮಕಾತಿಯಲ್ಲಿಯೇ, ಪರಸ್ಪರ ಸಹಕಾರ ನೀಡುತ್ತಿದ್ದದ್ದನ್ನು ಕೆ. ಕೆ. ಪೈಯವರು ಈಗಲೂ ನೆನೆಸುತ್ತಾರೆ. ಟಿ. ಎ. ಪೈಯವರು ಕೇಂದ್ರ ಸರಕಾರದ ಸಚಿವರಾಗಿದ್ದ ಸಮಯ ಮತ್ತು ನಂತರವೂ ಸುಂದರರಾಮ ಶೆಟ್ಟಿ ಹಾಗೂ ಇವರ ನಡುವೆ ಇದ್ದ ಮಾನವೀಯ ಸಂಬಂಧ ಹಾಗೂ ಸ್ನೇಹ ಅತ್ಯಂತ ಮಧುರ.

ಮುಲ್ಕಿಯ ವಿಜಯಬ್ಯಾಂಕಿನ ಶಾಖೆಯಿರುವ ಕಟ್ಟಡದ ಮುಂಭಾಗದಲ್ಲಿ **ದಿ। ಸುಂದರರಾಮ ಶೆಟ್ಟರ** ಪ್ರತಿಮೆಯನ್ನು 1999ನೇ ಇಸವಿಯಲ್ಲಿ ಧರ್ಮಸ್ಥಳದ ಪದ್ಮಭೂಷಣ ವೀರೇಂದ್ರ ಹೆಗ್ಡೆ ಇವರ



ನೇತೃತ್ವದಲ್ಲಿ ಅನಾವರಣಗೊಳಿಸಲಾಯಿತು. ಈ ಸಮಾರಂಭಕ್ಕೆ ಶ್ರೀಮಾನ್ ಕೆ. ಕೆ. ಪೈ ಮತ್ತು ಮಾಜಿ ಅಧ್ಯಕ್ಷ ಲೀಲಾಧರ್ ಉಪಸ್ಥಿತರಿದ್ದರು. ಸುಂದರರಾಮ ಶೆಟ್ಟರಿಗೆ ಧರ್ಮಸ್ಥಳ ಹೆಗ್ಡೆ ಕುಟುಂಬದವರೊಂದಿಗೆ ಅಪಾರವಾದ ಪ್ರೀತಿ ಮತ್ತು ವಿಶ್ವಾಸವಿತ್ತು. ಇದರಿಂದಲೇ ರತ್ನವರ್ಮ ಹೆಗ್ಡೆ ಮತ್ತು ವೀರೇಂದ್ರ ಹೆಗ್ಡೆಯವರು ವಿಜಯಾ ಬ್ಯಾಂಕಿನ ನಿರ್ದೇಶಕರಾಗಿ ವಿಜಯಾ ಬ್ಯಾಂಕನ ಸೇವೆಯನ್ನು ಮಾಡಿದ್ದರು. ಕಾರ್ನಾಡು ಚರಂತಿಪೇಟೆ ರಸ್ತೆಯನ್ನು **ದಿ। ಸುಂದರರಾಮ ಶೆಟ್ಟಿ ರಸ್ತೆ**ಯಾಗಿ ನಾಮಕರಣ ಮಾಡಲಾಗಿದೆ.

**ಕುಟುಂಬದ ಟ್ರಸ್ಟ್**

ಜೀವನದಲ್ಲಿ ನಾವು ಕಂಡುಬರುವ ಎಲ್ಲಾ ಸಂಘ ಸಂಸ್ಥೆಗಳಿಗಿಂತಲೂ ತೀರ ನಿಕಟವಾದ, ಅತ್ಯಗತ್ಯವಾದ ಹಾಗೂ ಶಾಶ್ವತವಾದ ಸಂಸ್ಥೆಯೆಂದರೆ ಕುಟುಂಬ. ಇದನ್ನು ಮನಗಂಡು ಕಕ್ವಗುತ್ತು ಕುಟುಂಬದವರು 1993ರಲ್ಲಿ ಕುಟುಂಬದ ಸದಸ್ಯರ ಒಗ್ಗೂಡುವಿಕೆಗಾಗಿ ಮೂಲ್ಕಿ ಸುಂದರರಾಮ ಶೆಟ್ಟಿ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ (ರಿ) ನ್ನು ಪ್ರಾರಂಭಿಸಿದರು. ಕಕ್ವಗುತ್ತು ಮನೆತನದ ವಂಶ ವೃಕ್ಷ ತಯಾರಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿ ದಿವಂಗತ ಸುಂದರರಾಮ ಶೆಟ್ಟರಿಗೆ ಅರ್ಪಿಸಲಾಯಿತು. ಈ ಪುಸ್ತಕದಿಂದ ಈ ಮನೆತನದ ಸಮಗ್ರ ಮಾಹಿತಿ ಹಾಗೂ ಪರಿಚಯ ಈ ಕುಟುಂಬದವರಿಗೆ ದೊರಕುವಂತಾಯಿತು.

1981ರಲ್ಲಿ, ಶ್ರೀಯುತ ಸುಂದರರಾಮ ಶೆಟ್ಟರು ಬ್ಯಾಂಕಿನಿಂದ ನಿವೃತ್ತಿಯಾದ ಬಳಿಕ ಅಮೇರಿಕದಲ್ಲಿ ಕೆಲಕಾಲ ನೆಲಸಿದರು.

ಶಿಖಾಗೊದಲ್ಲಿ ವಾಸವಾಗಿರುವ ತಮ್ಮ ಮಗ ರಾಧಾಕೃಷ್ಣರವರ ಕುಟುಂಬದೊಂದಿಗೆ ತಮ್ಮ ಜೀವನದ ಸಮಯವನ್ನು ಹಂಚಿಕೊಂಡು, ಅಮೇರಿಕದಲ್ಲಿರುವ ಮಗಳು ಊರ್ಮಿಳಾ ಹಾಗೂ ಅಲ್ಲಿಯೇ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ತಾರಾನಾಥ ಶೆಟ್ಟಿಯವರೊಂದಿಗೆ ಕೆಲಕಾಲ ನೆಲೆಸಿದರು.


ಸ್ವಲ್ಪ ಸಮಯದ ನಂತರ ತಾಯ್ನಾಡಿಗೆ ಮರಳಿ ಬಂದ ಶೆಟ್ಟರು, ಆಗಿನ ಪರಿಸ್ಥಿತಿಗೆ ಅಗತ್ಯವಿರುವ ಹಣಕಾಸಿನ ನೆರವಿಗೆ ಬೆಂಗಳೂರಿನಲ್ಲಿ **ವಿಜಯಾ ಲೀಸಿಂಗ್ ಮತ್ತು ಫೈನಾನ್ಸ್** ಸ್ಥಾಪಿಸಿದರು. ಇದರಿಂದ ಬೆಂಗಳೂರಿನ ಜನತೆಗೆ ಅತ್ಯುತ್ತಮ ಸೇವೆ ಲಭ್ಯವಾಯಿತು.

## ಅಂತಿಮ ಯಾತ್ರೆ


1981 ರಲ್ಲಿ ಶ್ರೀಯುತ ಸುಂದರರಾಮ ಶೆಟ್ಟರವರು ಅಮೇರಿಕಕ್ಕೆ ತನ್ನ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಹೊರಟರು. ಈ ನಿರ್ಗಮನದ ಕ್ಷಣಗಳು ಕುಟುಂಬದವರಿಗೆ ಹಾಗೂ ಅವರ ಅಭಿಮಾನಿಗಳಿಗೆ ಕರಾಳವಾಗಬಹುದೆಂದೂ ತಿಳಿದಿದ್ದರೆ, ಶೆಟ್ಟರು ತಾಯ್ನಾಡನ್ನು ಬಿಟ್ಟು ಹೋಗುತ್ತಲೆ ಇರಲಿಲ್ಲವೇನೂ. ಅಮೇರಿಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲಿ 1-11-81ರಲ್ಲಿ ತೀವ್ರ ಅನಾರೋಗ್ಯದಿಂದ ಶ್ರೀಯುತ ಶೆಟ್ಟರು ಸ್ವರ್ಗದೆಡೆಗೆ ತಮ್ಮ ದಿಟ್ಟ ಹೆಜ್ಜೆಯನ್ನಿಟ್ಟು, ತಮ್ಮ ಜೀವನ ಯಾತ್ರೆಗೆ ಮುಕ್ತಾಯ ಹಾಡಿದರು. ಬೆಂಗಳೂರಿಗೆ ಅವರ ಮೃತ ಶರೀರ ತಂದಾಗ, ಇಡೀ ಜನತೆ ಕಣ್ಣೀರಿನಲ್ಲಿ ಮುಳುಗಿದ್ದಲ್ಲದೇ, ಬೆಂಗಳೂರು ಬಂದ್ ಎಂಬಂತೆ ಭಾಸವಾಯಿತು. ದೇಶದ ಜನತೆಗೆ



ಶೆಟ್ಟರ ನಿಧನ ನಂಬಲಾಗದಂತಹ ಕಹಿ ಸತ್ಯವಾಗಿತ್ತು. ಬೆಂಗಳೂರಿನಲ್ಲಿ ಶೆಟ್ಟರ ಶವಸಂಸ್ಕಾರದ ಏರ್ಪಾಟು ನಡೆದು, ಹುಟ್ಟೂರಾದ ಮೂಲ್ಕಿಗೆ ಚಿತಾಭಸ್ಮವನ್ನು ತರಲಾಯಿತು ಹಾಗೂ ಶ್ರಾದ್ಧ ಕೆಲಸ ಮುಲ್ಕಿಯಲ್ಲಿ ವಿಧಿಪೂರ್ವಕವಾಗಿ ಮಾಡಲಾಯಿತು. ಈ ಸಂದರ್ಭದಲ್ಲಿ ತಮ್ಮ ನಾಯಕನ ಧೀಮಂತ ಗುಣಕ್ಕೆ ತಾವೆಲ್ಲರೂ ಸಾಕ್ಷಿಯೆಂಬಂತೆ ಮುಲ್ಕಿ ಹಾಗೂ ಪರಿಸರದ ಊರಿನವರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಪುನೀತರಾದರು. ಬಪ್ಪನಾಡು ಅಮ್ಮನವರ ದೇವಳದ ಎದುರ ಭಾಗದಲ್ಲಿ ದಿ। ಕಾಳಪ್ಪ ಶೆಟ್ಟರ ಸಮಾಧಿಯ ಬಳಿಯಲ್ಲಿಯೇ **ದಿ। ಸುಂದರರಾಮ ಶೆಟ್ಟರ ಸಮಾಧಿ** ಕಟ್ಟಲಾಯಿತು. ಇಂದಿಗೂ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸಂಚಾರ ಮಾಡುವಾಗ ದಿ। ಶೆಟ್ಟರ ಸಮಾಧಿ ಕಾಣಲ್ಪಟ್ಟು, ಅವರ ಜೀವನದ ನಿಸ್ವಾರ್ಥ ಸೇವೆ ಹಾಗೂ ಪರೋಪಕಾರ ಗುಣ ಮನಗಂಡು ಮೈಯಲ್ಲಿ ವಿದ್ಯುತ್ ಸಂಚಾರ ಉಂಟಾಗುವುದು ನಿಜಕ್ಕೂ ಅತ್ಯದ್ಭುತ. ಶ್ರೀಯುತ ಶೆಟ್ಟರು ಇವತ್ತು ನಮ್ಮೊಂದಿಗೆ ಇಲ್ಲದಿದ್ದರೂ, ಅವರ ನಾಯಕತ್ವ ದೃಢ ನಿರ್ಧಾರ, ಕ್ರಿಯಾಶೀಲತೆ, ಗುರಿಸಾಧನೆ, ಪರೋಪಕಾರ ಗುಣ, ಸಮಕಾಲೀನರೊಂದಿಗೆ ಅತ್ಯುತ್ತಮ ಸ್ನೇಹ, ಊರ ಮೇಲೆ ನಿಷ್ಕಳಂಕ ಅಭಿಮಾನ ಮೊದಲಾದ ಸುಗುಣಗಳು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿದ ಪಕ್ಷದಲ್ಲಿ, ಅವರ ಆತ್ಮಕ್ಕೆ ಖಂಡಿತ ಸಂತೋಷವಾಗುವುದರಲ್ಲಿ ಸಂಶಯವಿಲ್ಲ.



ಸಚಿವ ಚೆನ್ನಬಸಪ್ಪನವರಿಂದ ಅತಿಕಾರಿಬೆಟ್ಟು ಶಾಖೆ ಉದ್ಘಾಟನೆ




ಸಭೆಯಲ್ಲಿ ಉಪಸ್ಥಿತರಿರುವ ಗ್ರಾಮಸ್ಥರು







ಸಚಿವರಿಂದ ಮಾತುಗಳು



ವಿಜಯಾ ಬ್ಯಾಂಕ್ ಅತಿಕಾರಿಬೆಟ್ಟು ಶಾಖೆ




ಜ್ಞಾನಮಂದಿರದ ಕಟ್ಟೋಣಕ್ಕೆ ಯುವಕರಿಂದ ಶ್ರಮದಾನ




ಜ್ಞಾನಮಂದಿರದ ಕಟ್ಟೋಣಕ್ಕೆ ಶಂಕು ಸ್ಥಾಪನೆ







ಸುಂದರರಾಮ ಶೆಟ್ಟಿರವರನ್ನೊಳಗೊಂಡ ಮುಂಬಯಿ ಸಮಿತಿ



ಸಮಿತಿಯ ಸಭೆ




ಪೇಜಾವರ ಮಠಾಧೀಶರಿಂದ ಕಟ್ಟಡದ ಶಂಕು ಸ್ಥಾಪನೆಯ
ಸಂದರ್ಭದಲ್ಲಿ ಮಾತುಗಳು




ಮೂಲ್ಕಿ ವಿಜಯಾ ಬ್ಯಾಂಕ್






ಸ್ಟಾಫ್ ಟ್ರೈನಿಂಗ್ ಸೆಂಟರ್



ಜ್ಞಾನಮಂದಿರದಲ್ಲಿರುವ ಸುಂದರರಾಮ ಶೆಟ್ಟಿ ಸಭಾಗೃಹ



ಮುಲ್ಕಿ ಸುಂದರರಾಮ ಶೆಟ್ಟಿ ಕಾಲೇಜ್, ಶಿರ್ವ



# ವಿಜಯಾ ಬ್ಯಾಂಕ್‌ನ ಯಶೋಗಾಥೆ

ದೇಶದ ಪ್ರಮುಖ ಬ್ಯಾಂಕುಗಳಲ್ಲಿ ಒಂದಾಗಿರುವ ವಿಜಯಾ ಬ್ಯಾಂಕ್, ಕರ್ನಾಟಕ ರಾಜ್ಯದ ಕರಾವಳಿ ಪಟ್ಟಣವಾಗಿರುವ ಮಂಗಳೂರಿನಲ್ಲಿ ಪ್ರಾರಂಭವಾಯಿತು. ಆಗಿನ ಕಾಲದಲ್ಲಿ ಈ ಪ್ರದೇಶದಲ್ಲಿ ಸಮರ್ಪಕವಾದ ಬ್ಯಾಂಕಿಂಗ್ ಸೌಲಭ್ಯವಿಲ್ಲದ ಕಾರಣ, ಸಮಾಜದ ಆರ್ಥಿಕ ಹಿಂದುಳಿದ ವರ್ಗದವರಿಗೆ ಹಾಗೂ ಸಣ್ಣ ರೈತರಿಗೆ ಸಹಕಾರಿಯಾಗಲು ಕೆಲವು ಕುಶಲ ಹಾಗೂ ವಾಣಿಜ್ಯ ನೆಲೆಯ ಹಿನ್ನೆಲೆಯಿರುವ ಬಂಟ ಸಮುದಾಯದ ತಂಡವೂ ಬ್ಯಾಂಕನ್ನು ಪ್ರಾರಂಭಿಸುವರೇ ನಿರ್ಧರಿಸಿದರು. ಇದಕ್ಕೆ ಪೂರಕವಾಗಿ ಮೂಲ್ಕಿಯ ದೊಡ್ಡ ಮನೆಯಲ್ಲಿ ಮೂಲ್ಕಿ ಕಕ್ವಗುತ್ತು ಕುಟುಂಬದ ಕಾಳಪ್ಪ ಶೆಟ್ಟರ ಮಗ ಎ. ಬಿ. ಶೆಟ್ಟಿ, ಮಂಜಯ್ಯ ಶೆಟ್ಟಿ, ರಾಮಕೃಷ್ಣ ಪೂಂಜ, ಮಹಾಬಲ ಅಡ್ಯಂತಾಯ ಹಾಗೂ ಇನ್ನಿತರ ಕೃಷಿಕರ ತಂಡವೂ ಸಭೆ ಸೇರಿ ಬ್ಯಾಂಕನ್ನು ಆರಂಭಿಸುವರೇ ಕೂಲಂಕುಷವಾಗಿ ಚರ್ಚಿಸಿ ರೂಪುರೇಖೆಗಳನ್ನು ತಯಾರಿಸಿತು. ಮುಲ್ಕಿಯಿಂದ 36 ಕಿ. ಮೀ. ದೂರದಲ್ಲಿರುವ ಆಗಿನ ಕಾಲದ ಕರಾವಳಿಯ ಬಂದರು ಪ್ರದೇಶವಾಗಿದ್ದ ಮಂಗಳೂರು ಪಟ್ಟಣದಲ್ಲಿ ಬ್ಯಾಂಕಿನ ಕಛೇರಿಯನ್ನು ಈಗಿನ ಬಂಟ್ಸ್ ಹಾಸ್ಟೆಲ್ ಸರ್ಕಲ್‌ನ ಎದುರಗಡೆ ತೆರೆಯುವರೇ ತೀರ್ಮಾನಿಸಿದರು. ಇವತ್ತು ವಿಜಯಾ ಬ್ಯಾಂಕ್, ಬ್ಯಾಂಕಿಂಗ್ ರಂಗದಲ್ಲಿಯೇ ಅದ್ಭುತ ಸಾಧನೆಗೈದು, ದೇಶದ ಮೂಲೆ ಮೂಲೆಗಳಲ್ಲಿಯೆ ತನ್ನ ಶಾಖೆಯನ್ನು ಹೊಂದಿಕೊಂಡು ಜನರ

ಸೇವೆಗೈಯುತ್ತಿದೆ. 1980ರಲ್ಲಿ ಇತರ 5 ಪ್ರಮುಖ ಬ್ಯಾಂಕುಗಳ ಜೊತೆಗೆ ವಿಜಯಾ ಬ್ಯಾಂಕ್ ರಾಷ್ಟ್ರೀಕರಣಗೊಂಡು, ಹೊಸ ಯುಗಕ್ಕೆ ನಾಂದಿ ಹಾಕಿತಲ್ಲದೆ ಅತ್ಯಂತ ದುರ್ಬಲ ಜನರ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ತನ್ನ ಗುರಿ ಸಾಧಿಸುತ್ತಿದೆ.


## ಪ್ರಾರಂಭ ಹಾಗೂ ಪ್ರಾರಂಭಿಕ ಬೆಳವಣಿಗೆ

ಇಂದು ವಿಜಯಾ ಬ್ಯಾಂಕ್, ಬ್ಯಾಂಕಿಂಗ್ ಕ್ಷೇತ್ರದಲ್ಲಿ ದೈತ್ಯಾಕಾರವಾಗಿ ಬೆಳೆದಿದ್ದರೂ, ಇದರ ಪ್ರಾರಂಭ ಹಾಗೂ ಬೆಳವಣಿಗೆ ತಕ್ಷಣವಾಗಿರದೆ, ತನ್ನದೇ ಆದ ಸಮಯ ಹಾಗೂ ಪರಿವರ್ತನೆಯಿಂದ ಆದದ್ದು ಸ್ಪಷ್ಟವಾಗಿ ಕಂಡು ಬರುತ್ತದೆ. ಬಡ ಹಾಗೂ ನಿಕೃತ (ತಿರಸ್ಕರಿಸಲ್ಪಟ್ಟ) ರೈತರನ್ನು ಸಾಲಗಾರರ ಕೈಯಿಂದ ವಿಮುಕ್ತಿಗೊಳಿಸಿ, ಅವರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು, ಕೆಲವು ಬಂಟರ ಕೃಷಿಕ ತಂಡವೂ 1930ನೇ ಇಸವಿಯಲ್ಲಿ 5ಲಕ್ಷ ಬಂಡವಾಳ, ಸಂದಾಯವಾದ ಬಂಡವಾಳ ರೂ. 8,670ದಿಂದ ಬಾಡಿಗೆ ಹಂಚಿನ ಮನೆಯಲ್ಲಿ ನಾಡಹಬ್ಬ ದಸರಾದ ವಿಜಯದಶಮಿಯಂದು ಬ್ಯಾಂಕನ್ನು ಪ್ರಾರಂಭಿಸಿದರು. ಈ ಕೃಷಿಕ ತಂಡದ ನಾಯಕನಾದ ಶ್ರೀ ಎ. ಬಾಲಕೃಷ್ಣ ಶೆಟ್ಟಿಯವರು ಬ್ಯಾಂಕಿನ ಸ್ಥಾಪಕಾಧ್ಯಕ್ಷರಾದರು. ನಿರ್ದೇಶಕರಾಗಿ ಶ್ರೀ ಕೆ. ಜೆ. ಬಲ್ಲಾಳ್, ಬಿ. ಎಂ. ಹೆಗಡೆ, ಎ. ಎಸ್. ಮಹಾಬಲ ರೈ ಹಾಗೂ ಬಿ. ವೆಂಕಪ್ಪ ಪೂಂಜ ಕಾರ್ಯ ನಿರ್ವಹಿಸಿದರು. ಅತ್ಯಂತ ಕಠಿಣ ಪರಿಸ್ಥಿತಿ ಅದಾಗಿದ್ದರೂ ಅವರ ಅವಧಿಯಲ್ಲಿ (1931-36) ಬ್ಯಾಂಕಿನ ಅಭಿವೃದ್ಧಿ ನಿಧಾನ ಹಾಗೂ ನಿಖರವಾಗಿತ್ತು. 1936ರಲ್ಲಿ ಉಡುಪಿಯಲ್ಲಿ ಬ್ಯಾಂಕ್ ತನ್ನ ಖಾತೆಯನ್ನು (ತೆರೆಯಿತು) ಪ್ರಾರಂಭಿಸಿತು.



1937ರಲ್ಲಿ ಶ್ರೀ ಮಂಜಯ್ಯ ಹೆಗ್ಡೆಯವರು ಅಧ್ಯಕ್ಷರಾಗಿ ನಿಯುಕ್ತಿಗೊಂಡು, ಸುಮಾರು 16 ವರ್ಷಗಳ ಕಾಲ ತಮ್ಮ ಸೇವೆ ಸಲ್ಲಿಸಿದರು. ಹೊಸ ದಕ್ಷಿಣ ಕನ್ನಡ(ಸೌತ್ ಕೆನರಾ) ಜಿಲ್ಲೆಯಲ್ಲದೇ, ಮುಂಬಾಯಿ ನಗರದಲ್ಲಿ ಹೊಸ ಶಾಖೆಯೊಂದನ್ನು ಸ್ಥಾಪಿತಗೊಂಡು, ಬ್ಯಾಂಕಿಂಗ್ ವ್ಯಾಪ್ತಿಯನ್ನು ವಿಸ್ತರಿಸಿತು. ಇವರ ಅಧ್ಯಕ್ಷತೆಯಲ್ಲಿ 16 ಹೊಸ ಶಾಖೆಗಳು ಪ್ರಾರಂಭಗೊಂಡು, ಜನ ಸಾಮಾನ್ಯರ ಬಾಗಿಲಿಗೆ ಬ್ಯಾಂಕಿಂಗ್ ಸೌಲಭ್ಯ ದೊರಕುವಂತಾಯಿತು.

1953ರಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಕೆ. ಸುಂದರರಾಮ ಶೆಟ್ಟಿಯವರ ಅವಧಿಯಲ್ಲಿ ಬ್ಯಾಂಕಿನ ಸಮೃದ್ಧಿ(ಸಂಪತ್ತು) 1ಕೋಟಿಯನ್ನು ದಾಟಿತು. ಬ್ಯಾಂಕ್ ತನ್ನ ರಜತ ಮಹೋತ್ಸವವನ್ನು 1956ರಲ್ಲಿ ಆಚರಿಸಿದಾಗ ಆಗಿನ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪರು ಬ್ಯಾಂಕಿನ ಆಡಳಿತ ಕಟ್ಟಡವನ್ನು ಮಂಗಳೂರಿನಲ್ಲಿ ಉದ್ಘಾಟಿಸಿದರು. 1958ನೇ ಸಾಲಿನ ನವೆಂಬರ್ 29ರಂದು ಬ್ಯಾಂಕನ್ನು ಹಿಂದುಳಿದ ವಾಣಿಜ್ಯೋದ್ಯಮ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 1934ರ ಆರ್.ಬಿ.ಐ. ಕಾಯಿದೆಯ 2ನೇ ಶೆಡ್ಯೂಲ್‌ನಲ್ಲಿ ಸೇರಿಸಿತು. ಡಿಸೆಂಬರ್ 1961ರಲ್ಲಿ, ಬ್ಯಾಂಕಿನ ಠೇವಣಿ ಮೊತ್ತ 1.44ಕೋಟಿಗೆ ತಲುಪಿ, 159 ಸಿಬ್ಬಂದಿಗಳಿಂದ 21 ಶಾಖೆಗಳು ಕಾರ್ಯ ನಿರ್ವಹಿಸುತ್ತಿತ್ತು. ಮಂಗಳೂರಿನ ವೈದ್ಯರಾದ ಡಾ। ಬಾಳಪ್ಪ ಶೆಟ್ಟಿಯವರ ಕಾರ್ಯಾವಧಿಯಲ್ಲಿ ಈ ಬೆಳವಣಿಗೆ ಕಂಡುಬಂತು.



ರಾಷ್ಟ್ರಪತಿ ಬಿ. ಡಿ. ಜತ್ತಿಯವರೊಂದಿಗೆ



ಎಸ್. ಎಂ. ಕೃಷ್ಣರೊಂದಿಗೆ ಶ್ರೀ ಸುಂದರರಾಮ ಶೆಟ್ಟಿ






ಪ್ರದಾನಿ ಇಂದಿರಾ ಗಾಂಧಿಯವರೊಂದಿಗೆ



ಸತ್ಯ ಸಾಯಿಬಾಬರೊಂದಿಗೆ




ರಾಷ್ಟ್ರಪತಿ ಫಕ್ರುದ್ದೀನ್ ಆಲಿಯವರೊಂದಿಗೆ



ಶ್ರೀಮತಿ ಸುಮತಿ ಜೆ. ಶೆಟ್ಟಿ





ಬಪ್ಪನಾಡು ದೇವಸ್ಥಾನದ ಎದುರು ಇರುವ

ಸುಂದರರಾಮ ಶೆಟ್ಟರ ಸಮಾಧಿ



ಮುಲ್ಕಿ ವಿಜಯಾ ಬ್ಯಾಂಕ್ ಬಳಿ ನಿರ್ಮಿಸಲಾದ

ಸುಂದರರಾಮ ಶೆಟ್ಟರ ಪ್ರತಿಮೆ

ಕರ್ನಾಟಕ, ಕೇರಳ ಹಾಗೂ ತಮಿಳುನಾಡುವಿನಲ್ಲಿದ್ದ 9 ಸಣ್ಣ ಬ್ಯಾಂಕುಗಳು( ದೇವಾಂಗ ಬ್ಯಾಂಕ್ ಲಿಮಿಟೆಡ್, ದಕ್ಷಿಣ ಭಾರತ(ಪಿ) ಲಿಮಿಟೆಡ್, ತಲಿಪರಂಬ ಬ್ಯಾಂಕ್ ಲಿಮಿಟೆಡ್, ತಲ್ಲಿಚೇರಿ ಬ್ಯಾಂಕ್ ಲಿಮಿಟೆಡ್, ವೈಶ್ಯ ಮರ್ಚಂಟೈಲ್ ಬ್ಯಾಂಕ್ ಲಿಮಿಟೆಡ್, ಕೂನೂರ ಸುಬ್ರಮಣ್ಯ ವಿಲಾಸ ಉಪಕಾರ್ ಬ್ಯಾಂಕ್ ಲಿಮಿಟೆಡ್, ಹುಬ್ಬಳ್ಳಿ ಸಿಟಿ ಬ್ಯಾಂಕ್ ಲಿಮಿಟೆಡ್ ಹಾಗೂ ಜಯಲಕ್ಷ್ಮೀ ಬ್ಯಾಂಕ್ ಲಿಮಿಟೆಡ್) ವಿಜಯ ಬ್ಯಾಂಕ್‌ನೊಂದಿಗೆ 1963 ಹಾಗೂ 1967ನೇ ಇಸವಿಯ ನಡುವಿನಲ್ಲಿ ಸೇರ್ಪಡೆಗೊಂಡಿತು ಹಾಗೂ ಈ ಸೇರ್ಪಡೆಯಿಂದ ಬ್ಯಾಂಕಿನ ಮುಂದಿನ ವರ್ಷಗಳ ಬೆಳವಣಿಗೆಗೆ ಫಲಶ್ರುತಿಯಾಯಿತು. ಇದರ ಪರಿಣಾಮವಾಗಿ 1968ನೇ ಸಾಲಿನಲ್ಲಿ ಬ್ಯಾಂಕಿನ ಶಾಖೆ 89ರಷ್ಟು ಆಗಿ, 982ನೌಕರರು ಸೇವೆ ಸಲ್ಲಿಸುವಂತಾಯಿತು. ಮುಲ್ಕಿ ಸುಂದರರಾಮ ಶೆಟ್ಟಿಯವರು 1962ನೇ ಸಾಲಿನಲ್ಲಿ ಬ್ಯಾಂಕಿನ ಗೌರವಾಧ್ಯಕ್ಷರಾಗಿ ನೇಮಕಗೊಂಡು, ''ಆಧುನಿಕ ವಿಜಯ ಬ್ಯಾಂಕ್‌ನ ಶಿಲ್ಪಿ'' ಎಂದೂ ಪರಿಗಣಿಸಲ್ಪಟ್ಟು, ಇತರ 9 ಸಣ್ಣ ಬ್ಯಾಂಕುಗಳು ವಿಜಯ ಬ್ಯಾಂಕಿನೊಂದಿಗೆ ಸೇರ್ಪಡೆಗೊಳ್ಳುವರೇ ಕಾರಣೀಭೂತರಾಗಿದ್ದು, ಮಾತ್ರವಲ್ಲದೇ, ಅತ್ಯಂತ ಸ್ಪರ್ಧಾತ್ಮಕ ಬ್ಯಾಂಕಿಂಗ್ ವಲಯದಲ್ಲಿ ವಿಜಯ ಬ್ಯಾಂಕಿನ ಸ್ಥಾನವನ್ನು ಸುಧಾರಿಸುವರೇ ಮೂಲಕರ್ತೃರಾದರು.



ಈ ಕೆಳಗಿನವರು ಬ್ಯಾಂಕಿನ ಪ್ರಾರಂಭಿಕ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

1) ಶ್ರೀಯುತ ರಾಮಕೃಷ್ಣ ಪೂಂಜಾ
2) ಶ್ರೀಯುತ ವೆಂಕಪ್ಪ ಶೆಟ್ಟಿ
3) ಶ್ರೀಯುತ ಸಾಹುಕಾರ ಅಂತಯ್ಯ ಶೆಟ್ಟಿ
4) ಶ್ರೀಯುತ ಬಿ. ಕೃಷ್ಣಯ್ಯ ಹೆಗ್ಡೆ
5) ಶ್ರೀಯುತ ಕೆ. ರಂಗನಾಥ ಬಲ್ಲಾಳ್
6) ಶ್ರೀಯುತ ಬಿ. ವೆಂಕಪ್ಪ ಪೂಂಜ
7) ಶ್ರೀಯುತ ಜಾರ್ಕಳ ನಾರಾಯಣ ಹೆಗ್ಡೆ
8) ಶ್ರೀಯುತ ಎ. ಎಸ್. ಮಹಾಬಲ ರೈ
9) ಶ್ರೀಯುತ ಟಿ. ನಾರಾಯಣ ಭಂಡಾರಿ
10) ಶ್ರೀಯುತ ಮಂಜಯ್ಯ ಹೆಗ್ಡೆ
11) ಶ್ರೀಯುತ ಬಿ. ಹಿರಿಯಣ್ಣ ಹೆಗ್ಡೆ
12) ಶ್ರೀಯುತ ವೈ ಸೂರಣ್ಣ ಶೆಟ್ಟಿ
13) ಶ್ರೀಯುತ ಎಂ. ಮಹಾಬಲ ಅಡ್ಯಂತಾಯ

## ಅತ್ಯದ್ಭುತ ಯಶಸ್ಸಿನ ಅವಧಿ

ಬ್ಯಾಂಕಿನ ಸಾಮಾಜಿಕ ನಿಯಂತ್ರಣಕ್ಕೋಸ್ಕರ, 1969ರಲ್ಲಿ 14ಉನ್ನತ ಖಾಸಗಿ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಈ ಅವಧಿಯಲ್ಲಿ ಅತ್ಯಂತ ಸೂಕ್ಷ್ಮಗ್ರಹಿಯಾದ ಶ್ರೀ ಸುಂದರರಾಮ ಶೆಟ್ಟಿಯವರ (1962ರಿಂದ 79ರ ತನಕ) ಬ್ಯಾಂಕಿನ ಪೂರ್ಣಾವಧಿಯ ಅಧ್ಯಕ್ಷನಾಗಿ ಹಾಗೂ ಮುಖ್ಯ ಕಾರ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ,

ವಿಜಯಾ ಬ್ಯಾಂಕಿನ ಕೀರ್ತಿಯನ್ನು ಸಂದರ್ಭಕ್ಕೆ ಸರಿಯಾಗಿ ಏರಿಸುವರೇ ಕಾರಣೀಭೂತರಾದರು. ಅವರು ಬ್ಯಾಂಕಿನ ಅಧ್ಯಕ್ಷನಾಗಿ ನೇಮಕವಾದದ್ದು, ಬ್ಯಾಂಕಿನ ವಿಜಯ ಪಥದ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು ಎಂಬುದು ಸ್ಮರಣೀಯ ಸಂಗತಿ. ತನ್ನ ಜೀವನದ ಅಮೂಲ್ಯ ಸಮಯವನ್ನು ಬ್ಯಾಂಕಿನ ಏಳಿಗೆ ಹಾಗೂ ಅಭಿವೃದ್ಧಿಗಾಗಿ ಮೀಸಲಿಟ್ಟ ವ್ಯಕ್ತಿ ಇವರು.

ಬ್ಯಾಂಕಿನ ಮುಖ್ಯ ಕೇಂದ್ರವನ್ನು ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ವರ್ಗಾಯಿಸಲು ಮುಖ್ಯ ವ್ಯಕ್ತಿಯೇ ಇವರಾಗಿದ್ದರು. ಬ್ಯಾಂಕಿಂಗ್ ಸಂಸ್ಥೆಯಲ್ಲಿ ವ್ಯಕ್ತಿಪರತೆಯನ್ನು ಅಳವಡಿಸುವರೇ ಇವರೇ ಕಾರಣೀಕರ್ತರಾಗಿ, ಬ್ಯಾಂಕಿಂಗ್ ಸಂಸ್ಥೆ ವ್ಯಕ್ತಿ ಪರತೆಯಿಂದ ನಡೆಯುವಂತಾಯಿತು. ಬ್ಯಾಂಕಿನ ಏಳಿಗೆಗಾಗಿ ಅವಿರತ ದುಡಿದ ದಾಖಲೆಯನ್ನು ಇವರು ಸೃಷ್ಟಿಸಿದರು. ಇವರ ಅವಧಿಯಲ್ಲಿ, ರೂಪಾಯಿ 396.1 ಕೋಟಿ ಠೇವಣಿ ಹಾಗೂ 216.6 ಕೋಟಿ ಸಾಲ ನೀಡುವಿಕೆಯಿಂದ, ವಿಜಯ ಬ್ಯಾಂಕ್ ಅವಿಸ್ಮರಣೀಯ ದಾಖಲೆಯನ್ನು ದಾಖಲಿಸಿತು. 1962-79ರ ಸಮಯದಲ್ಲಿ, 550 ಹೊಸ ಬ್ಯಾಂಕ್ ಶಾಖೆಯನ್ನು ಹಾಗೂ ತನ್ನ ನೌಕರ ಸಿಬ್ಬಂದಿಯ ಸಂಖ್ಯೆಯನ್ನು 9080ರ ತನಕ ಏರಿಸಿತು. ಬ್ಯಾಂಕ್ ತನ್ನ ನಿಚ್ಚಳಲಾಭದ ಮೊತ್ತವನ್ನು 1.59 ಲಕ್ಷದಿಂದ 32.80 ಲಕ್ಷದವರೆಗೆ ಈ ಸಂದರ್ಭದಲ್ಲಿಯೇ ಹೆಚ್ಚಳ ಮಾಡಿಕೊಂಡದ್ದು ಅಭೂತಪೂರ್ವ ಸಾಧನೆ.



## ರಾಷ್ಟ್ರೀಕರಣವಾದ ನಂತರದ ಬೆಳವಣಿಗೆ

ಬ್ಯಾಂಕುಗಳ ರಾಷ್ಟ್ರೀಕರಣದ 2ನೇ ಹಂತದ ಸಮಯದಲ್ಲಿ, ವಿಜಯಾ ಬ್ಯಾಂಕ್ ಕೂಡಾ 15ನೇ ಎಪ್ರಿಲ್ 1980ನೇ ಸಾಲಿನಲ್ಲಿ ರಾಷ್ಟ್ರೀಕರಣಗೊಂಡಿತು. ರಾಷ್ಟ್ರೀಕರಣಗೊಂಡ ಅವಧಿಯಲ್ಲಿ, ಖಾಸಗಿ ಮಾಲಕತ್ವದಿಂದ ಸರ್ಕಾರಿ ಸಂಸ್ಥೆಯಾದ ಕಾರಣ, ಬ್ಯಾಂಕಿಗೆ ಬಡ ಹಾಗೂ ದುರ್ಬಲ ಜನರ ಆಶೋತ್ತರ ನೆರವೇರಿಸುವರೇ ಯಾವುದೇ ಸಂಕಷ್ಟವುಂಟಾಗಲಿಲ್ಲ. ಈ ನಿಟ್ಟಿನಲ್ಲಿ ವಿಜಯಾ ಬ್ಯಾಂಕ್, "ಗ್ರಾಮೀಣ ಅಭಿವೃದ್ಧಿ ಹಾಗೂ ಆಧ್ಯ ವರ್ಗದ ಇಲಾಖೆಯನ್ನು" ಪ್ರಾರಂಭಿಸಿತು. ಭಾರತದ ಬ್ಯಾಂಕಿಂಗ್ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿಜಯಾ ಬ್ಯಾಂಕ್ ಉಳುವ ಮಾಲಕರಿಗೆ ಸಾಲದ ಸೌಲಭ್ಯ ಒದಗಿಸಿತು. ದಿನಾಂಕ 21-4-78ರಂದು ಶ್ರೀ ಸುಂದರರಾಮ ಶೆಟ್ಟಿಯವರು ಬ್ಯಾಂಕಿನ ಆಡಳಿತ ಕಚೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಶಂಕು ಸ್ಥಾಪನೆ ಮಾಡಿದರು. ದಿನಾಂಕ 28-10-84ರಂದು ಆಗಿನ ಕೇಂದ್ರ ಸರ್ಕಾರದ ವಿತ್ತ ಸಚಿವ ಶ್ರೀ ಪ್ರಣವಕುಮಾರ ಮುಖರ್ಜಿ ಬ್ಯಾಂಕಿನ ಪ್ರಧಾನ ಕಚೇರಿಯನ್ನು ಉದ್ಘಾಟಿಸಿದರು.

1985ರ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ, ವಿಜಯಾ ಬ್ಯಾಂಕ್ ತನ್ನ ಮೊದಲ ಪ್ರಾಂತೀಯ ಗ್ರಾಮೀಣ ಬ್ಯಾಂಕ್ (ಆರ್. ಆರ್. ಬಿ)ನ್ನು ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್ ಎಂಬ ಹೆಸರಿನಲ್ಲಿ ಪ್ರಾರಂಭಿಸಿತು. 1-1-1986 ಲಾಗಾಯ್ತು ಮಂಡ್ಯ ಹಾಗೂ ದಾರವಾಡ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಉತ್ತಮ ಕಾರ್ಯ

ನಿರ್ವಹಿಸಿತು. ಮಧ್ಯಮ ವರ್ಗದ ಕನಸಿನ ಕೂಸಾದ ಗೃಹ ನಿರ್ಮಾಣದ ಬಗ್ಗೆ ಕನಿಷ್ಠ ದರದಲ್ಲಿ ಹೊಸ ಸಾಲದ ಸವಲತ್ತನ್ನು ವಿಭಾ ಹೌಸಿಂಗ್ ಫೈನಾನ್ಸ್ ಎಂಬ ಹೆಸರಿನಲ್ಲಿ ವಿಜಯಾ ಬ್ಯಾಂಕ್ ಪ್ರಾರಂಭಿಸಿತು. ಪ್ರಾರಂಭಲಾಗಾಯ್ತು ಈ ವಿಭಾಗ, ಅತ್ಯುತ್ತಮ ಲಾಭದಾಯಕವಾದ ವಿಭಾಗವಾಗಿ ಬೆಳೆದಿದೆ.

ವಿಜಯಾ ಬ್ಯಾಂಕ್, ಬ್ಯಾಂಕಿಂಗ್ ರಂಗದಲ್ಲಿಯೇ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದು, ದೇಶಕ್ಕೆ ಪ್ರಥಮ ಬಾರಿಗೆ ''ಎ ಟಿ ಎಂ ಕ್ರೆಡಿಟ್ ಕಾರ್ಡ್'' ಸೌಲಭ್ಯವನ್ನು ಒದಗಿಸಿದ ಬ್ಯಾಂಕಿಂಗ್ ಸೆಕ್ಟರ್ ಆಗಿರುತ್ತದೆ.

## ಉಪಸಂಹಾರ

1931ನೇ ಸಾಲಿನಲ್ಲಿ ಪ್ರಾರಂಭವಾದ ವಿಜಯಾ ಬ್ಯಾಂಕ್, ಮಹಾದೆತ್ತರಕ್ಕೆ ಬೆಳೆದು ನಿಂತಿದೆ. ಸಣ್ಣ ಬಂಡವಾಳದಿಂದ ಚಿಕ್ಕ ಪೇಟೆಯಲ್ಲಿ ಪ್ರಾರಂಭವಾದ ಈ ಬ್ಯಾಂಕ್, ಇಂದು ದೇಶದಾದ್ಯಂತ ತನ್ನ ಸೇವೆ ಸಲ್ಲಿಸುತ್ತಾ, 28 ರಾಜ್ಯ ಹಾಗೂ 4 ಕೇಂದ್ರೀಯ ಆಡಳಿತ ಪ್ರದೇಶದಲ್ಲಿ 843 ಶಾಖೆಗಳನ್ನು ಹೊಂದಿರುವುದು ಅತ್ಯದ್ಭುತ ಪ್ರಗತಿ. ಸುಮಾರು 548 ಬ್ಯಾಂಕ್ ಶಾಖೆಗಳು ಗ್ರಾಮೀಣ ಹಾಗೂ ಅರೆ-ಪಟ್ಟಣ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ, ಉತ್ತಮ ಲಾಭವನ್ನು ನೀಡುವಲ್ಲಿ ಸಫಲವಾಗಿರುತ್ತದೆ. ಹೊಸ ತಂತ್ರಜ್ಞಾನ ಹಾಗೂ ಸ್ಪರ್ಧಾತ್ಮಕ ಯುಗವಾದ, ಇಂತಹ ದಿನದಲ್ಲಿಯೇ ಬ್ಯಾಂಕ್



ತನ್ನದೇ ಆದ ಗ್ರಾಹಕರನ್ನು ಪ್ರತಿ ವರ್ಷ ಆಕರ್ಷಿಸಿ ನೊಂದಾಯಿಸುತ್ತಿದೆ. ಪ್ರಸ್ತುತ ಬ್ಯಾಂಕ್ ಸುಮಾರು 52.9 ಲಕ್ಷ ನಿಷ್ಠಾವಂತ ಗ್ರಾಹಕರ ಸೇವೆ ಮಾಡುತ್ತಿದ್ದು, ಇಂತಹ ಒಂದು ದೊಡ್ಡ ಸಂಖ್ಯೆಯಲ್ಲಿ ಗ್ರಾಹಕರ ಸೇವೆ ಮಾಡುವ ಬ್ಯಾಂಕ್‌ಗಳಲ್ಲಿ ಅದ್ವಿತೀಯ ಸ್ಥಾನ ಹೊಂದಿದೆ. ಸುಮಾರು ಶೇಕಡಾ 77ರಷ್ಟು ಬ್ಯಾಂಕಿನ ಶಾಖೆಗಳು ಗಣೀಕರಣಗೊಂಡಿದ್ದು (Computerised), ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನೇ ಆಧುನಿಕರಣಗೊಳಿಸಿದೆ. ಕಳೆದ 72 ವರ್ಷಗಳಿಂದ ಅರ್ಹ ವ್ಯಕ್ತಿಗಳಿಗೆ ಸ್ನೇಹಪೂರ್ವಕವಾದ ಸೇವೆ ಸಲ್ಲಿಸುತ್ತಾ ಬಂದಿರುವ ಪ್ರತಿಷ್ಠೆ ಬ್ಯಾಂಕಿನದಾಗಿದ್ದು, ''A friend one can bank upon'' ಎನ್ನುವ ನಾಣ್ಣುಡಿ ಹುಟ್ಟು ಹಾಕಿದೆ.

ಇಂದು ದೇಶಾದ್ಯಂತ ತನ್ನ ಉತ್ತಮ ಸೇವೆಯನ್ನು ಗ್ರಾಹಕ ವರ್ಗಕ್ಕೆ ಸಲ್ಲಿಸುತ್ತಾ ಬ್ಯಾಂಕ್ ತನ್ನ ಕಾರ್ಯದ ಬಗ್ಗೆ ಮನೆ ಮಾತಾಗಿದೆ. ಆಧುನಿಕ ಪರಿಣಿತಿ ಹಾಗೂ ತಂತ್ರಜ್ಞಾನವನ್ನು ಹೊಂದಿರುವ ಬ್ಯಾಂಕ್ ತನ್ನ ಮುಂದಿನ ವರ್ಷಗಳಲ್ಲಿ ಇನ್ನಷ್ಟು ಪ್ರಗತಿ ಪಥದತ್ತ ದಾಪುಗಾಲು ಹಾಕುತ್ತಿದೆ ಎಂಬುದು ನಿಚ್ಚಳವಾಗಿ ಕಂಡು ಬರುತ್ತದೆ.

## ಪ್ರಾರಂಭದಿಂದ ಬ್ಯಾಂಕಿನ ಅಭಿವೃದ್ಧಿಯ ಬಗ್ಗೆ ಸಂಕ್ಷಿಪ್ತ ಮಾಹಿತಿ

| ಬ್ಯಾಂಕಿನ ಅಧ್ಯಕ್ಷರಾದವರು | ಅವಧಿ | ಠೇವಣಿ | ಸಾಲ | ನಿವ್ವಳ ಲಾಭ ಲಕ್ಷಗಳಲ್ಲಿ | ಶಾಖೆ | ಉದ್ಯೋಗಿಗಳ ಸಂಖ್ಯೆ |
|---|---|---|---|---|---|---|
| ಎ. ಬಿ. ಶೆಟ್ಟಿ | 1931-36 | 0.98 | 1.04 | 0.02 | 2 | ಮಾಹಿತಿ ಲಭ್ಯವಿಲ್ಲ |
| ಜಿ. ಮಂಜಯ್ಯ ಹೆಗ್ಡೆ | 1937-53 | 47.43 | 34.02 | 4.82 | 13 | ಮಾಹಿತಿ ಲಭ್ಯವಿಲ್ಲ |
| ಕೆ. ಸುಂದರರಾಮ ಶೆಟ್ಟಿ | 1953-60 | 148.41 | 100.04 | 5.01 | 21 | 159 |
| ಡಾ. ಬಾಳಪ್ಪ ಶೆಟ್ಟಿ | 1960-62 | 180.45 | 114.41 | 1.90 | 21 | 176 |
| ಎಂ. ಸುಂದರರಾಮ ಶೆಟ್ಟಿ | 1962-79 | 39613.56 | 21660.98 | 298.54 | 571 | 9080 |
| ರಂಗನಾಥ ಹೆಗ್ಡೆ | 1979 | | | | | |
| ಸತ್ಯದೇವ್ | 1980-81 | 50602.78 | 26939.23 | 61.28 | 602 | 9629 |
| ವಿಜಯ ರಾಘವನ್ | 1981-84 | 87396.55 | 49965.92 | 23.74 | 646 | 11965 |
| ಸದಾನಂದ ಶೆಟ್ಟಿ | 1984-90 | 235712.60 | 148602.29 | 2370.87 | 719 | 13,337 |
| ಕೆ. ಎಸ್. ಶೆಟ್ಟಿ | 1992 | 273476.00 | 153958.00 | 184.00 | 722 | 9059 |
| ಬಿ. ಬಿ. ಶೆಟ್ಟಿ | 1992-96 | 598851.00 | 244370.00 | 25095.00 (Loss) | 835 | 14,300 |
| ಕೆ. ಕೆ. ಚೌದರಿ | 1996-97 | 682730.00 | 247528.00 | 1896.00 | 835 | 14,268 |
| ಲೀಲಾಧರ | 1997-2000 | 1159288.00 | 495867.00 | 10638.00 | 837 | 14,324 |
| ಎಂ. ಗೋಪಾಲಕೃಷ್ಣನ್ | 2000-02 | 1468051.00 | 619666.00 | 20163.00 | 828 | 11827 |
| ಎಂ. ಎಸ್. ಕಪೂರ್ | 16-08-02ರಿಂದ | 1701981.00 | 789134.00 | 19656.00 | 843 | 11,723 |



ಪ್ರಸ್ತುತ ಎಂ. ಎಸ್. ಕಪೂರ್‌ರವರು ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿ ನಿಯುಕ್ತಿಗೊಂಡಿದ್ದು, ವಾರ್ಷಿಕ ಲೆಕ್ಕ ಪತ್ರಗಳ ಮುಕ್ತಾಯವಾದ 30 ದಿನಗಳಲ್ಲಿ ವಾರ್ಷಿಕ ಫಲಿತಾಂಶವನ್ನು ಪ್ರಕಟಿಸಿದ ಮೊಟ್ಟ ಮೊದಲ ಬ್ಯಾಂಕ್ ಎಂಬ ಹೆಮ್ಮೆಗೆ ವಿಜಯ ಬ್ಯಾಂಕ್ ಪಾತ್ರವಾಗಿದೆ. ಈ ಸಾಲಿನಲ್ಲಿ ಬ್ಯಾಂಕಿನ ಒಟ್ಟು ಆದಾಯ 252.51 ಕೋಟಿ ರೂಪಾಯಿಗಳಿಂದ 432.36 ಕೋಟಿ ರೂಪಾಯಿಗಳಿಗೆ ಏರಿದೆ. ಸ್ವಯಂ ನಿವೃತ್ತಿ ಯೋಜನೆಯ (VRS) ವೆಚ್ಚವಾಗಿ 107.58 ಕೋಟಿ ರೂಪಾಯಿಗಳನ್ನು ಸೇರಿಸಿಕೊಂಡ ಮೇಲೂ ಈ ಮಟ್ಟದಲ್ಲಿ ನಿವ್ವಳ ಲಾಭಗಳಿಸಲು ಸಾಧ್ಯವಾಗಿರುವುದು ಬ್ಯಾಂಕಿನ ಹೆಗ್ಗಳಿಕೆಯಾಗಿದೆ. ಮುಂದಿನ ವರ್ಷದೊಳಗೆ ಒಟ್ಟು ಶಾಖೆಗಳ ಸಂಖ್ಯೆಯನ್ನು ಒಂದು ಸಾವಿರಕ್ಕೆ ಏರಿಸಲು ಹಾಗೂ ನಿವ್ವಳಲಾಭವನ್ನು 400 ಕೋಟಿ ರೂಪಾಯಿಗಳಿಗೆ ಏರಿಸಲು ಬ್ಯಾಂಕ್ ಉದ್ದೇಶಿಸಿದ್ದು ಗಮನಾರ್ಹವಾಗಿದೆ. ಗೃಹಸಾಲ ನೀಡಿಕೆಯಲ್ಲಿ ತೊಡಗಿರುವ ಬ್ಯಾಂಕಿನ ಅಧೀನ ಸಂಸ್ಥೆಯನ್ನು ಬ್ಯಾಂಕಿನ ಜತೆ ವಿಲೀನ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಹಾಗೂ ಇದಕ್ಕಾಗಿ ಮರ್ಚೆಂಟ್ ಬ್ಯಾಂಕರನ್ನು ನೇಮಿಸಲಾಗಿದೆ. ಒಟ್ಟಾರೆ ಲಾಭಗಳಿಕೆಯನ್ನು ಗಮನದಲ್ಲಿರಿಸಿಕೊಂಡು ಬ್ಯಾಂಕ್ ಶೇಕಡಾ 12ರಷ್ಟು ಡಿವಿಡೆಂಡ್ ಘೋಷಿಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ವಿಜಯಾ ಬ್ಯಾಂಕ್ ವಿಮಾಕ್ಷೇತ್ರವನ್ನು ಪ್ರವೇಶಿಸಿ, ವಿಮಾಕ್ಷೇತ್ರದ ಇತರ ದೊಡ್ಡ ಕಂಪೆನಿಗಳ ಜತೆಗೆ ಒಪ್ಪಂದ ಮಾಡಿಕೊಂಡಿರುತ್ತದೆ. ಪ್ರಸ್ತುತ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಪಿ. ಎ. ಸೇರಿ ಹಾಗೂ

ಹಿರಿಯ ಪ್ರಧಾನ ವ್ಯವಸ್ಥಾಪಕರಾಗಿ ಕೆ. ರತ್ನಾಕರ ಹೆಗ್ಡೆ ಅಭೂತಪೂರ್ವ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

## ಪ್ರಾರಂಭವಾದಂದಿನಿಂದ ಬ್ಯಾಂಕಿನ ಬಗ್ಗೆ ಸೂಕ್ತ ಮಾಹಿತಿ ಹಾಗೂ ಅಧ್ಯಕ್ಷರ ಅವಧಿಯ ಪರಿಚಯ

**ಎ. ಬಿ. ಶೆಟ್ಟಿ** : ಬ್ಯಾಂಕಿನ ಪ್ರಥಮ ಅಧ್ಯಕ್ಷರು (1931 ರಿಂದ 1936ರವರೆಗೆ) ಈ ಅವಧಿಯಲ್ಲಿ ಬ್ಯಾಂಕಿನ ಠೇವಣಿ 0.98, ಸಾಲ ನೀಡುವಿಕೆ 1.04, ನಿವ್ವಳ ಲಾಭ 0.02 ಆಗಿದ್ದು 2 ಶಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿತ್ತು. (ಉದ್ಯೋಗಿಗಳ ಸಂಖ್ಯೆ ಲಭ್ಯವಿಲ್ಲ)

**ಬಿ. ಮಂಜಯ್ಯ ಹೆಗ್ಡೆ (1937 -53)** : ಬ್ಯಾಂಕಿನ ಠೇವಣಿ ಲಕ್ಷ ರೂಪ್ಯಾಗಳಲ್ಲಿ 47.43, ಸಾಲ ನೀಡುವಿಕೆ 34.02 ಹಾಗೂ ನಿವ್ವಳ ಲಾಭ 0.48 ಆಗಿತ್ತು 13 ಶಾಖೆಗಳು ಕಾರ್ಯ ನಿರ್ವಹಿಸುತ್ತಿತ್ತು(ಉದ್ಯೋಗಿಗಳ ಸಂಖ್ಯೆ ಲಭ್ಯವಿಲ್ಲ)

**ಕೆ. ಸುಂದರರಾಮ ಶೆಟ್ಟಿ (1953 - 60)**: ಬ್ಯಾಂಕಿನ ಠೇವಣಿ 148.41, ಸಾಲ ನೀಡುವಿಕೆ 100.04 ಹಾಗೂ ನಿವ್ವಳ ಲಾಭ 1.30 ಆಗಿತ್ತು. 21 ಶಾಖೆಗಳಲ್ಲಿ 159 ಜನರು ಉದ್ಯೋಗಿಗಳಾಗಿದ್ದರು.

**ಡಾ. ಬಾಳಪ್ಪ ಶೆಟ್ಟಿ (1960 - 62)**: ಬ್ಯಾಂಕಿನ ಠೇವಣಿ 180.45, ಸಾಲ ನೀಡುವಿಕೆ 114.41 ಹಾಗೂ ನಿವ್ವಳ ಲಾಭ 1.59 ಆಗಿತ್ತು. 21 ಶಾಖೆಗಳಲ್ಲಿ 159 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದರು.



**ಮುಲ್ಕಿ ಸುಂದರರಾಮಶೆಟ್ಟಿ (1962 - 79)** : ಬ್ಯಾಂಕಿನ ಠೇವಣಿ 39613.56, ಸಾಲ ನೀಡುವಿಕೆ 21660.98 ಹಾಗೂ ನಿವ್ವಳ ಲಾಭ 32.80 ಆಗಿತ್ತು. 571 ಶಾಖೆಗಳು 9080 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದರು. ಇದೊಂದು ಬ್ಯಾಂಕಿನ ಅಭೂತಪೂರ್ವ ಬೆಳವಣಿಗೆಯ ಕಾಲವಾಗಿತ್ತು.

ರಂಗನಾಥ ಹೆಗ್ಡೆ(1979)

**ಸತ್ಯದೇವ್ (1980 - 81)** : ಬ್ಯಾಂಕಿನ ಠೇವಣಿ 50602.78, ಸಾಲ ನೀಡುವಿಕೆ 21939.23 ಹಾಗೂ ನಿವ್ವಳ ಲಾಭ 25.14 ಆಗಿತ್ತು. 602 ಶಾಖೆಗಳಲ್ಲಿ 9629 ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದರು.

**ವಿಜಯರಾಘವನ್(1981-84)** : ಬ್ಯಾಂಕಿನ ಠೇವಣಿ 87,396.55, ಸಾಲ ನೀಡುವಿಕೆ 49965.92 ಹಾಗೂ ನಿವ್ವಳ ಲಾಭ 5.51 ಆಗಿತ್ತು. 646 ಶಾಖೆಗಳಲ್ಲಿ 11965 ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದರು.

**ಸದಾನಂದ ಶೆಟ್ಟಿ (1984 - 90)** : ಬ್ಯಾಂಕಿನ ಠೇವಣಿ 2,35,712.60, ಸಾಲ ನೀಡುವಿಕೆ 1,48602.20 ಲಕ್ಷರೂಗಳಲ್ಲಿ ಹಾಗೂ ನಿವ್ವಳ ಲಾಭ 723.80 ಆಗಿತ್ತು. 719 ಶಾಖೆಗಳಲ್ಲಿ 13,337 ಜನರು ಉದ್ಯೋಗಿಗಳಾಗಿದ್ದರು.

**ಕೆ. ಎಸ್. ಶೆಟ್ಟಿ (1992)** : ಬ್ಯಾಂಕಿನ ಠೇವಣಿ 2,73,476.00, ಸಾಲ ನೀಡುವಿಕೆ 1,53,958.00 ಹಾಗೂ ನಿವ್ವಳ ಲಾಭ 184.00 ಆಗಿತ್ತು. 722 ಶಾಖೆಗಳಲ್ಲಿ 9059 ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದರು.

**ಬಿ. ಬಿ. ಶೆಟ್ಟಿ (1992-96)** : ಠೇವಣಿ 5,98,851.00, ಸಾಲ ನೀಡುವಿಕೆ 2,44,370.00 ಹಾಗೂ ನಿವ್ವಳ ಲಾಭ 25,095.00 ಆಗಿತ್ತು. 835 ಶಾಖೆಗಳಲ್ಲಿ 14,300 ಉದ್ಯೋಗಿಗಳಿದ್ದರು.

**ಕೆ. ಸಿ. ಚೌದರಿ (1996-97)** : ಠೇವಣಿ 6,82,730.00, ಸಾಲ ನೀಡುವಿಕೆ 2,47,528.00 ಹಾಗೂ ನಿವ್ವಳ ಲಾಭ 1,896.00 ಆಗಿತ್ತು. 835 ಶಾಖೆಗಳಲ್ಲಿ 14,268 ಉದ್ಯೋಗಿಗಳಿದ್ದರು.

**ಲೀಲಾಧರ (1997-2000)** : ಠೇವಣಿ 11,59,288.00, ಸಾಲ ನೀಡುವಿಕೆ 4,95,867.00 ಹಾಗೂ ನಿವ್ವಳಲಾಭ 5284.00 ಆಗಿತ್ತು. 837 ಶಾಖೆಗಳಲ್ಲಿ 14,324 ಉದ್ಯೋಗಿಗಳಿದ್ದರು. ಇವರ ಅವಧಿಯಲ್ಲಿ ವಿಜಯಾ ಬ್ಯಾಂಕು ಒಳ್ಳೆಯ ಅಭಿವೃದ್ಧಿಯನ್ನು ಪಡೆದು, ಒಳ್ಳೆಯ ಹೆಸರನ್ನು ಪಡೆದಿದೆ.

**ಎಸ್. ಗೋಪಾಲಕೃಷ್ಣನ್ (2000-02)** : ಠೇವಣಿ 14,68,051, ಸಾಲ ನೀಡುವಿಕೆ 6,19,666.00 ಹಾಗೂ ನಿವ್ವಳ ಲಾಭ 13,090.00 ಆಗಿತ್ತು. 828 ಶಾಖೆಗಳಲ್ಲಿ 11,827 ಉದ್ಯೋಗಿಗಳಿದ್ದರು.

## ಎಂ. ಎಸ್. ಕಪೂರ್‌ರವರ ಪರಿಚಯ

ಶ್ರೀಯುತ ಎಂ. ಎಸ್. ಕಪೂರ್‌ರವರು ವಿಜಯಾ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿ ನೇಮಕಗೊಂಡಿದ್ದು, ದಿನಾಂಕ 16-08-2002ರಿಂದ ತಮ್ಮ ಜವಬ್ದಾರಿಯನ್ನು ನಿಭಾಯಿಸಿಕೊಂಡು ಬಂದಿರುತ್ತಾರೆ. ವಿಜಯಾ ಬ್ಯಾಂಕಿಗೆ ಸೇರ್ಪಡೆಗೊಳ್ಳುವ ಮೊದಲು ಶ್ರೀಯುತ ಎಂ. ಎಸ್. ಕಪೂರ್



ಸುಮಾರು 33 ವರ್ಷಗಳ ಕಾಲ ಬ್ಯಾಂಕಿಂಗ್ ರಂಗದಲ್ಲಿ ಈ ಕೆಳಗಿನಂತೆ ಅವಿಸ್ಮರಣೀಯ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ.

1996ರಲ್ಲಿ ಪಂಜಾಬ ಹಾಗೂ ಸಿಂಧ್ ಬ್ಯಾಂಕಿನ ಗುಮಾಸ್ತನಾಗಿ ನೇಮಕಗೊಂಡರು. ಸುಮಾರು 28 ವರ್ಷಗಳ ಕಾಲ ಬ್ಯಾಂಕಿನ ವಿವಿಧ ಹುದ್ದೆಗಳಾದ ಶಾಖ ಪ್ರಬಂಧಕ, ಪ್ರಾಂತೀಯ ಪ್ರಬಂಧಕ, ವಲಯ ಪ್ರಬಂಧಕ ಹಾಗೂ ಇನ್ನಿತರ ಹುದ್ದೆಗಳನ್ನು ನಿರ್ವಹಿಸಿ, ದೆಹಲಿ, ಚಂಡೀಗಡ್, ಜಲಂಧರ್ ಭೋಪಾಲ, ಶ್ರೀನಗರ, ಚೆನ್ನೈ, ಕೊಲಕತ್ತ, ಮುಂಬಯಿ, ಅಮೃತಸರ್ ಹಾಗೂ ಲಂಡನ್‌ಗಳಲ್ಲಿ ತಮ್ಮ ಸೇವೆ ಸಲ್ಲಿಸಿರುತ್ತಾರೆ. ಪಂಜಾಬಿನಲ್ಲಿ ಭಯೋತ್ಪಾದನೆಯ ದಿನಗಳು ಹಾಗೂ ವರ್ಷಗಳಾದ 1987-89ರಲ್ಲಿ, ಅಮೃತಸರದಲ್ಲಿ ಇವರು ತಮ್ಮ ಸೇವೆಯನ್ನು ಯಶಸ್ವಿಯಾಗಿ ಹಾಗೂ ಧೈರ್ಯದಿಂದ ನಿರ್ವಹಿಸಿ ಬಂದಿರುವುದು ಶ್ಲಾಘನೀಯ. ಲಂಡನಿನಲ್ಲಿರುವ ಬ್ಯಾಂಕಿನ ಶಾಖೆಗಳಲ್ಲಿಯೂ ಇವರು ಮುಖ್ಯ ಕಾರ್ಯಾಂಗ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿರುತ್ತಾರೆ. 1996ರಲ್ಲಿ ಬ್ಯಾಂಕಿನ ಜನರಲ್ ಮೆನೇಜರ್ ಆಗಿ ಇವರು ನಿಯುಕ್ತಿಗೊಂಡರು. ಈ ಸಂದರ್ಭದಲ್ಲಿ ಕಂಪ್ಯೂಟರ್ (ಗಣೀಕರಣ ಯಂತ್ರ), ಲೆಕ್ಕಪತ್ರ, ಯೋಜನೆ ಹಾಗೂ ಅಭಿವೃದ್ಧಿ, ವಿದೇಶ ವಿನಿಮಯ ಹಾಗೂ ಸಾಮಾನ್ಯ ಆಡಳಿತದ ಮುಖ್ಯಾಧಿಕಾರಿಯಾಗಿ, ಈ ಜವಬ್ದಾರಿಯನ್ನು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ನಿರ್ವಹಿಸಿಕೊಂಡು ಬಂದಿರುತ್ತಾರೆ.

ಮುಖ್ಯ ವಿಜಿಲೆನ್ಸ್ ಅಧಿಕಾರಿಯಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಇಂಡಿಯನ್ ಒವರ್‌ಸೀಸ್ ಬ್ಯಾಂಕಿನಲ್ಲಿಯೂ ಇವರು ಸೇವೆ ಸಲ್ಲಿಸಿರುತ್ತಾರೆ. ಪಂಜಾಬ ಹಾಗೂ ಸಿಂಧ್ ಬ್ಯಾಂಕಿನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ನಂತರ, ಸುಮಾರು 9 ತಿಂಗಳುಗಳ ಕಾಲ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದು, ಈ ಸಂದರ್ಭದಲ್ಲಿ 2000ನೇ ಸಾಲಿನ ಮೇ ತಿಂಗಳಿನಲ್ಲಿ ಸಿಂಡಿಕೇಟ್ ಬ್ಯಾಂಕಿನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಸೇರ್ಪಡೆಗೊಂಡರು. 31-01-2002 ಲಾಗಾಯ್ತು ಇವರು ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ.

ಗ್ರಾಮೀಣ ಪ್ರದೇಶದ ಶಾಖೆಗಳಿಂದ ಹಿಡಿದು ಅಂತರರಾಷ್ಟ್ರೀಯ ಮಟ್ಟದ ಶಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಒಬ್ಬರೇ ಒಬ್ಬ ವ್ಯಕ್ತಿ ಭಾರತೀಯ ಬ್ಯಾಂಕಿಂಗ್ ರಂಗದಲ್ಲಿ ಇವರಾಗಿರುವುದು ತುಂಬಾ ಅಭಿನಂದನಾರ್ಹ ವಿಷಯವಾಗಿರುತ್ತದೆ.

2 ಬಾರಿ ಮುಖ್ಯ ವಿಜಿಲೆನ್ಸ್ ಅಧಿಕಾರಿಯಾಗಿ ಹಾಗೂ 2 ಬಾರಿ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಈ ಮಹಾನ್‌ವ್ಯಕ್ತಿ, 3ನೇ ಬಾರಿ ತಮ್ಮ ಸೇವಾ ಅವಧಿಯಲ್ಲಿ ವಿಜಯಾ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿರುತ್ತದೆ.



**ಎಂ. ಎಸ್. ಕಪೂರ (16-08-2002ರಿಂದ)** : ಇವರ ಅವಧಿಯಲ್ಲಿ ಆರ್ಥಿಕ ವರ್ಷ 2002-03ರಲ್ಲಿ ಬ್ಯಾಂಕಿನ ನಿವ್ವಳ ಲಾಭ ಹಿಂದಿನ ವರ್ಷದಿಂದ ಶೇಕಡಾ 50.2 ಹೆಚ್ಚಾಗಿದ್ದು, 196.56 ಕೋಟಿ ರೂಪಾಯಿಗಳ ನಿವ್ವಳ ಲಾಭ ಗಳಿಸಿದೆ. ಸಾಲ ನೀಡಿಕೆಯಲ್ಲಿಯೂ ಶೇಕಡಾ 15.9ರಷ್ಟು ಏರಿಕೆಯಾಗಿದ್ದು, ಅದರ ಮೊತ್ತ 17,020 ಕೋಟಿ ರೂಪಾಯಿಗಳಾಗಿದೆ. 843 ಶಾಖೆಗಳಲ್ಲಿ 11,723 ಉದ್ಯೋಗಿಗಳಿರುವರು. ಸಾರ್ವಜನಿಕ ರಂಗದ ವಿಜಯಾ ಬ್ಯಾಂಕ್ ತನ್ನ ಎರಡನೇ ಈಕ್ವಿಟಿ ಇಶ್ಯೂವನ್ನು ಅಕ್ಟೋಬರ್ 9ರಂದು ಮಾರುಕಟ್ಟೆಗೆ ಸಾರ್ವಜನಿಕರ ಹೂಡಿಕೆಗೆ ಬಿಡುಗಡೆ ಮಾಡುವರೆಂದು ಇತ್ತೀಚೆಗೆ ಮಂಗಳೂರಿಗೆ ಭೇಟಿ ನೀಡಿದ ಅಧ್ಯಕ್ಷ ಮತ್ತು ಆಡಳಿತ ನಿರ್ದೇಶಕ ಶ್ರೀಯುತ ಎಮ್. ಎಸ್. ಕಪೂರ್ ಸಾರ್ವಜನಿಕರಿಗೆ ತಿಳಿಸಿದರು.

2006ರಲ್ಲಿ ಪ್ಲಾಟಿನಂ ಜುಬ್ಲಿಯನ್ನು ಆಚರಿಸುವ, ವಿಜಯಾ ಬ್ಯಾಂಕಿನ ಠೇವಣಿಯನ್ನು ರೂಪ್ಯಾ 25 ಸಾವಿರ ಕೋಟಿಗೂ ಶಾಖೆಗಳ ಸಂಖ್ಯೆ ಒಂದು ಸಾವಿರಕ್ಕೂ ವಿಸ್ತರಿಸುವ ಆಸೆಯನ್ನು ಈಗಿನ ಆಡಳಿತ ನಿರ್ದೇಶಕರು ಇಟ್ಟುಕೊಂಡಿದ್ದು, ವಿಜಯಾ ಬ್ಯಾಂಕು ಇನ್ನೂ ಹೆಚ್ಚಿನ ಜನರಿಗೆ ಸೇವೆಯನ್ನು ಕೊಡಲಿ ಎಂದು ಬಪ್ಪನಾಡು ಶ್ರೀದುರ್ಗಾಪರಮೇಶ್ವರಿಯನ್ನು ಪ್ರಾರ್ಥಿಸಿ ಈ ಪುಸ್ತಕವನ್ನು ಶ್ರೀದೇವಿಯ ಪಾದ ಕಮಲಗಳಿಗೆ ಅರ್ಪಿಸಲು ಇಚ್ಛಿಸುತ್ತೇನೆ.

## ಬ್ಯಾಂಕಿನ ಈಗಿನ ನಿರ್ದೇಶಕರು


ಶ್ರೀಯುತ ಎಮ್. ಎಸ್. ಕಪೂರ್
ಅಧ್ಯಕ್ಷರು ಹಾಗೂ
ಆಡಳಿತ ನಿರ್ದೇಶಕರು


ಶ್ರೀಯುತ ಪಿ. ಎ. ಸೇಠಿ
ಕಾರ್ಯನಿರ್ವಾಹಕ
ನಿರ್ದೇಶಕರು


ಶ್ರೀಯುತ ಆರ್. ರಂಗನಾಥ


ಶ್ರೀಯುತ ಎ. ಪಿ. ಹೋತಾ


ಶ್ರೀಯುತ ಎಮ್. ಕಿರಣ್


ಶ್ರೀಯುತ ಬಾಬು ಸೇಠ್
ಟಿಯರ್‌ವಾಲ


ಶ್ರೀಮತಿ ಸುಧಿರ ಮಿಶ್ರಾ.


ಶ್ರೀಯುತ ಪವನ್
ಕುಮಾರ್ ಶರ್ಮಾ


ಶ್ರೀಯುತ ಎಸ್.
ಅನಂತನ್


ಶ್ರೀಯುತ ಆರ್. ಅಶೋಕ್
ಕುಮಾರ್


ಶ್ರೀಯುತ ಬಿ. ಕೆ
ಜಗದೀಶಚಂದ್ರ.


ಶ್ರೀಯುತ ಎಸ್. ಪಿ. ಕೃಷ್ಣ
ಸ್ವಾಮಿ



## ಬ್ಯಾಂಕಿನ ಈಗಿನ ಮಹಾಪ್ರಬಂಧಕರು (G.M.)


ಶ್ರೀಯುತ ಕೆ. ರತ್ನಾಕರ್
ಹೆಗ್ಡೆ


ಶ್ರೀಯುತ ಕೆ. ಅಮರನಾಥ
ಶೆಟ್ಟಿ


ಶ್ರೀಯುತ ಎಮ್. ಕಿರಣ್
ಕುಮಾರ್


ಶ್ರೀಯುತ ಕೆ. ಜಯಕರ
ಶೆಟ್ಟಿ



ಶ್ರೀಯುತ ಅಶೋಕ್
ಕುಮಾರ ಮಂಡಲ್


ಶ್ರೀಮತಿ ಪ್ರಭಾ ಎಸ್.
ಪ್ರಸಾದ್


ಶ್ರೀಯುತ ಎಸ್.
ಲಕ್ಷ್ಮೀಕಾಂತ ಹೆಗ್ಡೆ


ಶ್ರೀಯುತ ಹರಿ ಪ್ರಕಾಶ್
ಶೆಟ್ಟಿ


ಶ್ರೀಯುತ ಎಚ್. ರತ್ನಾಕರ
ಹೆಗ್ಡೆ



# RESOLUTION

*Resolution passed by the members of Bunts' Sangha Bangalore(Regd.) on 10th November 1981 to condoll the death of Mr. Mulki Sunder Ram Shetty.*

*We, the members of Bunts' Sangha, Bangalore(Regd.) mourn the sad and untimely demise of our esteemed member, Mr. Mulki Sunder Ram Shetty. Our love for Mr. Sunder Ram Shetty, who gave all his strength, courage and all the powers of his great mind to the struggle for the good and happiness of our people is boundless. The image of Mr. Sunder Ram Shetty the image of a man of crystal moral purity,*



*singular modesty, inexhaustible energy, high principles, selfless devotion and deep love for the community, will live for ever in the hearts and minds of our people. His name and his service to the community, will be cherished for ever.*

*We place on record our gratitude for the yeoman service, he has rendered to our people.*

*We offer our sincere and heart-felt condolence to Smt. Kusumavathi Shetty and family.*

*We, the members of Bunts' Sangha, Offer our Sincere prayer for his great soule to rest in peace; and we pray the God to bestow strength and courage to his bereaved family to bear the loss and carryout his unfinished task.*

| | |
|---|---|
| Bangalore<br>10th November 1981 | MEMBERS OF THE BUNTS' SANGHA<br>BANGALORE (REGD.) |

## ಕೆಲವು ಅನಿಸಿಕೆಗಳು

1. ಮುರಲೀಧರ ಭಂಡಾರಿಯವರು ದಿ. ಸುಂದರರಾಮ ಶೆಟ್ಟಿಯವರ ಬಗ್ಗೆ ಈ ರೀತಿ ತಿಳಿಸಿದರು. ಒಮ್ಮೆ ಪ್ರಾಯದ ಮುದುಕಿಯೊಬ್ಬರು ತಮ್ಮ ಎಸ್. ಎಸ್. ಎಲ್. ಸಿ ಕಲಿತ ಮೊಮ್ಮಗಳಿಗೆ ಕೆಲಸವನ್ನು ಕೊಡಲು ಒಂದು ಕಾಗದವನ್ನು ಬರೆದರು. ಅಲ್ಲದೆ ಅವರ ಮನೆಯಲ್ಲಿ ಇರುವ ಬಡತನವನ್ನೂ ವಿವರಿಸಿದರು. ಕೂಡಲೇ ಸುಂದರರಾಮ ಶೆಟ್ಟರು ಮೂಲ್ಕಿ ಶಾಖೆಯ ಮೆನೇಜರರಿಗೆ, ಆ ಮನೆಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಅರಿತು ಕೊಂಡು ಬರಲು ತಿಳಿಸಿದರು. ಪರಿಸ್ಥಿತಿಯನ್ನು ಅರಿತುಕೊಂಡ ಸುಂದರರಾಮ ಶೆಟ್ಟರು ಕೂಡಲೇ ಆ ಹುಡುಗಿಗೆ ಮೂಲ್ಕಿ ಶಾಖೆಯಲ್ಲಿಯೇ ಕೆಲಸವನ್ನು ಕೊಟ್ಟು ಆ ಮನೆಯ ದೀಪವನ್ನು ಬೆಳಗಿಸಿದರು. ಅವರು ಕೂಡಾ ಸುಂದರರಾಮ ಶೆಟ್ಟರ ಫೋಟೋವನ್ನು ತಮ್ಮ ಮನೆಯಲ್ಲಿಟ್ಟು ದೇವರಂತೆ ಪೂಜಿಸುತ್ತಾರೆ.

2. ಮೂಲ್ಕಿ ಪುತ್ತೂರು ದೇವೇಂದ್ರ ಕಾಮತರ ಮಗ ದೇವರಾಯ ಕಾಮತ್, ಈಗ 89 ಪ್ರಾಯ. ಇವರು ಸುಂದರರಾಮ ಶೆಟ್ಟರ ಶಾಲೆಯ ಸಹಪಾಠಿ. ಇಬ್ಬರೂ ಒಟ್ಟಿಗೆ ಮಧ್ಯಾಹ್ನದ ಊಟದ ಬುತ್ತಿಯನ್ನು ಹಿಡಿದು ಕೊಂಡು ಕಕ್ವಗುತ್ತಿನಿಂದ ಪಂಜಿನಡ್ಕ ಪದ್ಮನಾಭ ಮೆಮೋರಿಯಲ್ ಶಾಲೆಗೆ ಬರುತ್ತಿದ್ದರು. ಬುತ್ತಿಯನ್ನು ಪಂಜಿನಡ್ಕ ದೇವೇಂದ್ರ ಕಾಮತರ ಅಂಗಡಿಯಲ್ಲಿಟ್ಟು, ಅಲ್ಲಿಯೇ ಮಧ್ಯಾಹ್ನ



ಊಟ ಮಾಡುತ್ತಿದ್ದರು. ಸಾಯಂಕಾಲ ಪುನಃ ನಡೆದು ಕೊಂಡೇ ಹೋಗುವಂತಹ ಪರಿಸ್ಥಿತಿ. ಆಗ ದೇವೇಂದ್ರ ಕಾಮತರು ಇಬ್ಬರು ಮಕ್ಕಳಿಗೂ ಬೆಲ್ಲ ನೀರನ್ನು ಕೊಟ್ಟು ಕಳುಹಿಸುತ್ತಿದ್ದರು. ಈ ನೆನಪನ್ನು ಸುಂದರರಾಮ ಶೆಟ್ಟರು ಯಾವಾಗಲೂ ನೆನಪಿಸಿಕೊಳ್ಳುತ್ತಿದ್ದರು ಮತ್ತು ದೇವರಾಯ ಕಾಮತರ ಇಬ್ಬರು ಮಕ್ಕಳಿಗೂ ಕೆಲಸವನ್ನು ಕೊಟ್ಟಿದ್ದರು. ಇದರಲ್ಲಿ ದೊಡ್ಡವರಾದ ಪಿ. ಶ್ರೀನಿವಾಸ ಕಾಮತರು ಕೈಕಂಬ ವಿಜಯಾ ಬ್ಯಾಂಕಿನ ಶಾಖೆಯಲ್ಲಿ ದುಡಿಯುತ್ತಿದ್ದಾರೆ. ಇವರು ಸುಂದರರಾಮ ಶೆಟ್ಟರನ್ನು ತಮ್ಮ ಪಾಲಿನ ದೇವರೆಂದು ಈಗಲೂ ಪೂಜಿಸುತ್ತಾರೆ.

3. ಪ್ರೋ. ಸಾಮ್ಯುವೆಲ್ ಮಾಬೆನ್ ಹೇಳಿದಂತೆ ಮಿಶನ್ ಶಾಲೆಯ ಕ್ಲಾರ್ ಮಾಸ್ಟರರ ಹೆಂಡತಿ ಒಮ್ಮೆ ತಮ್ಮ ಮಗಳೊಂದಿಗೆ, ಸುಂದರರಾಮ ಶೆಟ್ಟರು ಮೂಲ್ಕಿಗೆ ಬಂದಾಗ ಭೇಟಿ ನೀಡಿ ತಮ್ಮ ಕಷ್ಟವನ್ನು ಹೇಳಿ, ಮಗಳಿಗೆ ಒಂದು ಕೆಲಸವನ್ನು ಕೊಡಬೇಕೆಂದು ಪ್ರಾರ್ಥಿಸಿದರು. ಕೂಡಲೇ ತಮ್ಮ ಗುರುಗಳ ಮಗಳಿಗೆ ಕೆಲಸವನ್ನು ಕೊಟ್ಟು ಕೃತಜ್ಞರಾದರು.

4. ಮೂಲ್ಕಿ ಪುರಸಭೆಯ ಉಪಾಧ್ಯಕ್ಷರಾಗಿದ್ದಂತಹ ಅಬೂಬಕ್ಕರ್ ತಮ್ಮ ಅನಿಸಿಕೆಯನ್ನು ಈ ರೀತಿ ಹೇಳಿದ್ದಾರೆ. ಸುಮಾರು 25 ವರ್ಷಗಳ ಹಿಂದೆ ಅವರ ತಂದೆ ಮಸೀದಿಯಲ್ಲಿ 'ಮುಲ್ಲಾ' ಆಗಿ ಸೇವೆ ಸಲ್ಲಿಸುತ್ತಾ ಇದ್ದರು. ಎಂಟು ಹತ್ತು ಮಂದಿ ಮಕ್ಕಳ ತಂದೆ,

ಎಲ್ಲರನ್ನೂ ಸಾಕಿ ವಿದ್ಯಾಭ್ಯಾಸವನ್ನು ನೀಡುವುದು ಆ ಸಮಯದಲ್ಲಿ ಬಹಳ ಕಷ್ಟವಾಗಿತ್ತು. ಇವರು ಮೂಲ್ಕಿಯ ಪ್ರಸಿದ್ಧ ವೈದ್ಯರಾಗಿದ್ದ ಡಾ. ಸೀತಾರಾಮ ಶೆಟ್ಟಿಯವರನ್ನು ಕರೆದುಕೊಂಡು ಸುಂದರರಾಮ ಶೆಟ್ಟಿಯವರ ಹತ್ತಿರ ಕೆಲಸ ಕೇಳಿದ ತಕ್ಷಣ ನನ್ನ ತಮ್ಮನಿಗೆ ಸುಂದರರಾಮ ಶೆಟ್ಟರು ಕೆಲಸ ಕೊಟ್ಟು ನಮಗೆ ತುಂಬಾ ಸಹಾಯ ಮಾಡಿದ್ದಾರೆ.

5. ಮೂಲ್ಕಿ ಕಕ್ವಗುತ್ತು ಸುಂದರರಾಮ ಶೆಟ್ಟರದು ಒಂದು ಅಪೂರ್ವ ವ್ಯಕ್ತಿತ್ವ. ಶ್ರೀಮಂತ ಮನೆತನದಲ್ಲಿ ಹುಟ್ಟಿ, ಶ್ರೀಮಂತಿಕೆಯಿಂದಲೇ ಬೆಳೆದರೂ, ಸಮಾಜದ ಎಲ್ಲಾ ಸ್ತರದ ಜನರಲ್ಲೂ, ಪ್ರೀತಿ, ವಿಶ್ವಾಸವನ್ನು ಹೊಂದಿದ್ದರು. ಮನೆಯ ಕೆಲಸದ ಆಳಾದರೂ ಸರಿ ಅವರಿಗೆ ಎಲ್ಲಿಲ್ಲದ ಅನುಕಂಪ, ಕನಿಕರ. ದೀನರ ಬದುಕಿನ ಬಗ್ಗೆ ಅವರಿಗಿದ್ದ ಕಾಳಜಿಯೇ ಅವರಿಗೆ ಸಮಾಜವನ್ನು ಎತ್ತಿ ಹಿಡಿಯುವ ದಿವ್ಯಶಕ್ತಿಯನ್ನು ದೇವರು ವರವಾಗಿತ್ತರು. ಸಮಾಜದ ಉದ್ಧಾರಕ್ಕಾಗಿ ಪರಮಾತ್ಮನು ಸೃಷ್ಟಿಸಿದ ಮಾನವರೂಪಿ ದೇವತಾ ದೂತರಾಗಿದ್ದರು ಅವರು.

ಕ್ರಿ. ಶ. 1915ರಿಂದ 1981ರವರೆಗೆ ಅವರ ಜೀವಿತಾವಧಿಯಲ್ಲಿ ಅವರು ಗೈದ ಸಾಧನೆ, ಸತ್ಕಾರ್ಯ, ಶತ ಶತ ವರ್ಷಗಳಲ್ಲಿ ಓರ್ವ ಸಾಮಾನ್ಯ ಮನುಜ ಸಾಧಿಸಲಾರ. ದೇವರಿಗೆ ಇಷ್ಟವಾದವರನ್ನು ಬೇಗನೇ ತನ್ನೆಡೆಗೆ ಕರೆಸಿಕೊಳ್ಳುತ್ತಾನೆಂಬ ಪೂರ್ವಿಕರ ಅನುಭವದ



ಮಾತಿಗೆ ಸುಂದರರಾಮ ಶೆಟ್ರು ಒಂದು ಉದಾಹರಣೆ. ಅಲ್ಪಾಯುಷಿಯಾಗಿ, ಅಕಸ್ಮಾತ್ ಕಣ್ಮರೆಯಾದರೂ, ಎಲ್ಲರ ಮನದಾಳದಲ್ಲಿ ಶಾಶ್ವತವಾದ ನೆನಪಿನ ಬುತ್ತಿಯನ್ನು ಉಳಿಸಿ ಹೋದ ಅಮರ ಜೀವ.

ಶ್ರೀ ಶೆಟ್ಟರದು ಆಜಾನುಬಾಹು ಸುಂದರ ರೂಪ. ದಿಟ್ಟ ನಡೆ, ನೇರ ನುಡಿ, ಕಂಚಿನ ಕಂಠ, ಸದಾ ನಗುತ್ತಿರುವ ಆಕರ್ಷಕ ಕಣ್ಣುಗಳು, ಬಾಯ್ತೆರೆದು ಒಮ್ಮೆ ನಕ್ಕರೆಂದರೆ ಏನೋ ಒಂದು ಸಮ್ಮೋಹನಾ ಶಕ್ತಿ ಆ ನಗುವಿನಲ್ಲಿ. ತನ್ನ ಒಳ್ಳೇತನದಿಂದ ಎಲ್ಲರನ್ನೂ ಸೆಳೆದು ಕೊಳ್ಳುವ ಅಯಸ್ಕಾಂತ ಶಕ್ತಿ ಅವರಲ್ಲಿತ್ತು. ಅಂತಹ ಅಪರೂಪದ ವ್ಯಕ್ತಿತ್ವ ಹೊಂದಿದ್ದ ಸುಂದರ ರಾಮ ಶೆಟ್ಟರು ಎಲ್ಲರ ಮನದಲ್ಲೂ, ಅಂದೂ, ಇಂದೂ, ಎಂದೆಂದೂ ಅಚ್ಚಳಿಯದೆ ಉಳಿದು ಕೊಂಡಿದ್ದಾರೆ. ಅವರಿಂದಾಗಿ ಜೀವನದ ದಾರಿ ಕಂಡು ಕೊಂಡ ಸಾವಿರಾರು ಮನೆಗಳಲ್ಲಿ ಇಂದಿಗೂ ಅವರ ಹೆಸರು ಹೇಳಿ, ದೀಪ ಉರಿಸಿ, ತುತ್ತು ಉಣ್ಣುವವರಿದ್ದಾರೆ.

ಅವರು ಜನ್ಮತಳೆದ ಕಕ್ವಗುತ್ತಿನಲ್ಲಿ ನಾವೂ ಜನ್ಮ ತಾಳಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ನಮಗೆ ಹೆಮ್ಮೆ ಎನಿಸುತ್ತದೆ. ಮನುಷ್ಯ ಎಷ್ಟು ಕಾಲ ಬದುಕಿದ ಎಂಬುದು ಮುಖ್ಯವಲ್ಲ. ಬದುಕಿದ್ದು ಸ್ವಲ್ಪ ಕಾಲವೇ ಆಗಿದ್ದರೂ ಹೇಗೆ ಬದುಕಿದ ಎಂಬುದು ಮುಖ್ಯ. ಆ ರೀತಿ ಸಮಾಜ ಬಾಂಧವರ ಸರ್ವತೋಮುಖ ಏಳಿಗೆಗಾಗಿ ತನ್ನ

ಜೀವನವನ್ನು ಮುಡಿಪಾಗಿಟ್ಟು ಕೀರ್ತಿ ಶಿಖರದ ತುತ್ತ ತುದಿಯಲ್ಲಿರುವಾಗಲೇ ಪರಮಾತ್ಮನ ಪಾದ ಸೇರಿದರೂ, ತನ್ನ ಸತ್ಕಾರ್ಯದ ಸುಗಂಧವನ್ನು ಪ್ರಪಂಚದ ಮೂಲೆ ಮೂಲೆಗೂ ಪಸರಿಸಿ ಧನ್ಯರಾದ ಶೆಟ್ಟರಿಗಿದೋ ನಮ್ಮ ಕಕ್ವಗುತ್ತಿನ ಸಮಸ್ತ ಭಾಂಧವರ ಹೃದಯ ತುಂಬಿದ ಭಕ್ತಿಯ ನಮನಗಳು.

ಶ್ರೀ ದೇವಿಯು ಅವರ ಕುಟುಂಬಕ್ಕೆ ಅಷ್ಟೈಶ್ವರ್ಯ, ಆಯುರಾರೋಗ್ಯ, ಸುಖ, ಶಾಂತಿ ಕರುಣಿಸಲೆಂದು ಪ್ರಾರ್ಥಿಸುತ್ತಾ ದಿವ್ಯ ಚೇತನಕ್ಕೆ ಮತ್ತೊಮ್ಮೆ, ಮಗದೊಮ್ಮೆ ಅಶ್ರುತರ್ಪಣಗೈಯುತ್ತಿದ್ದೇನೆ.

**ಶ್ರೀಮತಿ ಶಶಿಕಲಾ ಸುಕುಮಾರ ಶೆಟ್ಟಿ**



**Usha R. Punja**
**"Sudha-Nidhi"**

**21/22, Mahatma Gandhi Road**
**Bangalore - 560 001**
**☎ 5584544**

Dear Dr. Kudva,

It was good to know that so much effort has been put in to produce the book of my father Mr. Sundar Ram Shetty - who left a mark on so many people, with whom he came into Contact. This is a very good gesture on your part and it will help all his family members specially the younger generation to realise the values he lived for. We appreciate the work that will be the end result.

I have been with enclosed some information which may be worth while inserting where you think fit - as a part of the story. I am not so elosuent in Kannnada hence you will have the additional work of translation to suit the writing work.

Thanking you,

Yours Sincerely

*Usha Punja*

# ಹಿನ್ನುಡಿ



ದಿವಂಗತ ಶ್ರೀ ಸುಂದರರಾಮ ಶೆಟ್ಟಿಯವರ ಬಗ್ಗೆ ನೆನಪಿಸಿಕೊಳ್ಳುವುದು ನನ್ನ ಮಟ್ಟಿಗೆ ಒಂದು ಸುಂದರ ಸ್ಮರಣೆ. ಅವರೊಂದು ಮಹಾಸಾಗರ. ಹಿಂದೆ ನೋಡುತ್ತಿರಲಿಲ್ಲ. ಮುಂದೆ, ನೋಡುವ ಮುಂದಾಳ್ತನದ ವ್ಯಕ್ತಿತ್ವ ಅವರದ್ದು.

ವಿಜಯಾ ಬ್ಯಾಂಕಿನ ನನ್ನ 33 ವರ್ಷಗಳ ದುಡಿಮೆಯಲ್ಲಿ ಇಡೀ ಬ್ಯಾಂಕಿಗ್ ರಂಗದಲ್ಲಿ ಅವರಂಥಹ ಓರ್ವ ಮಹಾ ಮುಖಂಡವನ್ನು ನಾನು ಕಂಡಿರಲಿಲ್ಲ. ಅವರು ಅದ್ವಿತೀಯ, ಚಿರಸ್ಮರಣೀಯ ಅವರು ಮಾಡಿದ ಬ್ಯಾಂಕಿಗ್‌ದಾಖಲೆಗಳನ್ನು ಈತನಕ ಯಾವುದೇ ಬ್ಯಾಂಕಿನಿಂದ ಇಡೀ ಭಾರತದಲ್ಲಿ ಮುರಿಯಲಾಗಲಿಲ್ಲ.

ವಿಜಯಾ ಬ್ಯಾಂಕಿನ ನನ್ನ ಮೌಖಿಕ ಪರೀಕ್ಷೆ ನಡೆದದ್ದು 1-4-1964ರಲ್ಲಿ ಅದೂ ಸುಂದರರಾಂ ಶೆಟ್ಟರ ಸಮ್ಮುಖದಲ್ಲಿ ನನಗೆ ಪ್ರಶ್ನೆ ಕೇಳಿ ಪರೀಕ್ಷಿಸಿದವರು ಶ್ರೀಯುತ ಜಯರಾಂ ಶೆಟ್ಟಿ, ಅಂದಿನ ಬ್ಯಾಂಕಿನ ಸೆಕ್ರೆಟರಿಯವರು. ಅಂದು ಪದವೀಧರರು ಕ್ಲಾರ್ಕ್ ನೌಕರಿಗೆ ಸೇರುತ್ತಿರಲಿಲ್ಲ. ನನ್ನ ಬಿ. ಎಸ್. ಸಿ ಪದವಿ ಮುಗಿಸಿ ನಾನು ಮಿಶನ್ ಹೈಸ್ಕೂಲ್ ಕಾಸರಗೋಡಿನಲ್ಲಿ ಶಿಕ್ಷಕನಾಗಿ ತಿಂಗಳೊಂದರ ರೂ. 120/- ವರಮಾನ ಪಡೆಯುತ್ತಿದ್ದೆ. ಆದರೆ ಬ್ಯಾಂಕಿನಲ್ಲಿ ತಿಂಗಳ



ಸಂಬಳ ಆಗ ಬರೇ ರೂ. 60/- ಆಗಿತ್ತು. ಈ ಅರ್ಧ ಸಂಬಳಕ್ಕೆ ಕ್ಲಾರ್ಕ್ ಆಗಿ ಯಾಕೆ ಸೇರುತ್ತೀ ಎಂಬುದೇ ಅವರ ಮುಖ್ಯ ಪ್ರಶ್ನೆಯಾಗಿತ್ತು. ''ಭವಿಷ್ಯದಲ್ಲಿ ಬ್ಯಾಂಕಿನ ಪುರೋಗತಿ ಚೆನ್ನಾಗಿ ಆಗುವುದು ಖಂಡಿತ. ಅಲ್ಲದೆ ಊರು ನೋಡುವ ಆಸೆ ನನ್ನಲ್ಲಿ ಬಲವಾಗಿದೆ. ಏನಾದರೂ ಹೊಸತನ್ನು ಕಾಣಬೇಕು, ಹೊಸತನ್ನು ಮಾಡಬೇಕು ಎಂಬ ಆಸಕ್ತಿ ನನ್ನಲ್ಲಿದೆ'' ಎಂದು ಉತ್ತರಿಸಿದೆ. ಇದರಿಂದ ಪ್ರಭಾವಿತರಾದ ಸುಂದರರಾಂ ಶೆಟ್ಟರು ''ಅವನನ್ನು ತೆಗೆದುಕೊಳ್ಳಿ'' ಎಂದರು. ಕೆಲವೇ ದಿನಗಳಲ್ಲಿ ಮಂಗಳೂರಿನ ಪ್ರಧಾನ ಕಛೇರಿಗೆ ಸೇರಲು ಆದೇಶ ಬಂತು. 16-4-64ರಂದು ಬ್ಯಾಂಕ್ ಸೇರಿದೆ. 6 ತಿಂಗಳ ಬಳಿಕ ಕಾಸರಗೋಡಿನ ಶಾಖೆಗೆ ವರ್ಗಾಯಿಸಿದರು. 1965 ಜೂನ್ ತಿಂಗಳಲ್ಲಿ ಹುಬ್ಬಳ್ಳಿಯ ದಾಜಿಬಾನ್ ಪೇಟೆಯ ಹೊಸ ಶಾಖೆಗೆ ನನ್ನ ವರ್ಗವಾಯಿತು. ಎಲ್ಲವನ್ನೂ ಸಂತೋಷದಿಂದ ಸ್ವೀಕರಿಸಿದೆ. 3 ವರ್ಷಗಳ ಕಾಲ ಹುಬ್ಬಳ್ಳಿಯಲ್ಲಿ ದುಡಿಯುವಾಗ ಕಾನೂನು ಪರೀಕ್ಷೆ (ಎಲ್.ಎಲ್.ಬಿ.)ಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಎರಡನೇ ರ‍್ಯಾಂಕ್ ಪಡೆದು ಪಾಸಾದೆ. ಬ್ಯಾಂಕಿಂಗ್ ಪರೀಕ್ಷೆ (ಸಿ.ಎ.ಐ.ಬಿ.) ಕೂಡ ಡಿಸ್ಟಿಂಕ್ಷನ್ ಪಡೆದು ಪಾಸಾದೆ. ಶಾಖೆಯಲ್ಲೂ ನನ್ನ ದುಡಿಮೆ ಶ್ಲಾಘನೀಯವಾಗಿತ್ತು. ಎರಡೇ ತಿಂಗಳೊಳಗೆ ಸುಂದರರಾಂ ಶೆಟ್ಟರು ನನ್ನ ಬಗ್ಗೆ ವಿಚಾರಿಸಿ ನನಗೆ ಆಫೀಸರನಾಗಿ ಬಡ್ತಿಕೊಡಿಸಿದರು. ಅಲ್ಲಿಂದ ಬೆಂಗಳೂರು ನಗರದಲ್ಲಿ ಒಂದು ವರ್ಷ ಆಫೀಸರನಾಗಿ ದುಡಿದೆ. 1970ರಲ್ಲಿ ಬ್ಯಾಂಕಿನ 79ನೇ ಬೆಳಗಾವಿ ಶಾಖೆಗೆ ನನ್ನನ್ನು ಬ್ರಾಂಚ್ ಮ್ಯಾನೇಜರನಾಗಿ ನೇಮಕ ಮಾಡಿದರು. ಅಲ್ಲೂ 3 ವರ್ಷ

ಶ್ಲಾಘನೀಯ ಸೇವೆಯ ಬಳಿಕ ಮದರಾಸಿಗೆ ನನ್ನನ್ನು ವರ್ಗಾಯಿಸಲಾಯಿತು. 1973ರಲ್ಲಿ ಬ್ಯಾಂಕಿನ ಹೊಸ ತರಬೇತಿ ಕೇಂದ್ರ ಬೆಂಗಳೂರಲ್ಲಿ ಪ್ರಾರಂಭಗೊಂಡಿತು. ಅದಕ್ಕೆ ಮೆನೇಜರುಗಳನ್ನು ಆಫೀಸರನ್ನೂ ತರಬೇತಿ ಕೊಡಲು ಚಾಣಾಕ್ಷರು ಬೇಕೆಂದು ಶ್ರೀಯುತ ಸುಂದರಾಂ ಶೆಟ್ಟರು 3 ವರ್ಷಗಳ ಕಾಲ ನನ್ನನ್ನು ತರಬೇತಿ ಕೇಂದ್ರಕ್ಕೆ ವರ್ಗಾಯಿಸಿದರು. ಸಂತೋಷದಿಂದ ಸ್ವೀಕರಿಸಿದೆ. ಕಾನೂನಿನ ಸ್ನಾತಕೋತ್ತರ ಪರೀಕ್ಷೆ (ಎಲ್.ಎಲ್.ಎಮ್.)ಯನ್ನು ಬೆಂಗಳೂರಲ್ಲಿ ಈ ಮೂರು ವರ್ಷಗಳ ಕಾಲದಲ್ಲಿ ಮುಗಿಸಿದೆ. ಇದರಿಂದ ಹರ್ಷಿತರಾದ ಸುಂದರಾಂ ಶೆಟ್ಟರು ನನಗೆ ಪಾಲ್ಘಾಟಿನ ಶಾಖೆಗೆ ಮ್ಯಾನೇಜರನಾಗಿ ಕಳುಹಿಸಿದರು. ಮುಂದೆ ಅಲ್ಲಿಂದ ಇನ್ಸ್ಪೆಕ್ಟಿಂಗ್ ಆಫೀಸರನಾಗಿ ಬಡ್ತಿಕೊಟ್ಟು ಇಡೀ ಭಾರತ ಸಂಚರಿಸಲು ಅನುವು ಮಾಡಿಕೊಟ್ಟರು. ಈ ದಿಸೆಯಲ್ಲಿ 7 ವರ್ಷಗಳ ಕಾಲ ಬಹಳಷ್ಟು ಶಾಖೆಗಳನ್ನು ಆಡಿಟ್ ಮಾಡಲು ಇಡೀ ಉತ್ತರ ಭಾರತವನ್ನು ತಿರುಗಿದೆ. ಅಸ್ಸಾಂ, ಮಿಜೊರಾಂ, ನಾಗಾಲ್ಯಾಂಡ್, ಮಣಿಪುರ, ತ್ರಿಪುರ, ಮೇಘಾಲಯ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ, ಒರಿಸ್ಸಾ, ಕಾಶ್ಮೀರ, ಪಂಜಾಬ, ದೆಹಲಿ, ಕಲ್ಕತ್ತ, ಮುಂಬೈ ಮುಂತಾದ ಮಹಾನಗರಗಳ ಶಾಖೆಗಳನ್ನು ತಪಾಸಣೆ ಮಾಡುವ ಉದ್ಯೋಗ ಸಿಕ್ಕಿತು. ಇದರಿಂದ ನನ್ನ ಬ್ಯಾಂಕಿಂಗ್ ಅನುಭವ ಮುಗಿಲನ್ನು ಮುಟ್ಟಿತು. ಇದಕ್ಕೆ ಕಾರಣ ಶ್ರೀಯುತ ಸುಂದರಾಂ ಶೆಟ್ಟರು. ನನ್ನ ದುಡಿಮೆಯನ್ನು ಶ್ಲಾಘಿಸಿ ನನಗೆ ಪುನಃ ಸೀನಿಯರ್ ಮೆನೇಜರನಾಗಿ ಬಡ್ತಿಕೊಟ್ಟು ನನ್ನನ್ನು ಆಂಧ್ರಪ್ರದೇಶದ



ವಿದೇಶ ವಿನಿಮಯ ಶಾಖೆಯಾದ ಗುಂಟೂರಿನಲ್ಲಿ ಪ್ರಧಾನ ಬ್ರಾಂಚ್ ಮ್ಯಾನೇಜರನಾಗಿ ನೇಮಿಸಿದರು. ಅಷ್ಟರಲ್ಲಿ ಬ್ಯಾಂಕ್ ರಾಷ್ಟ್ರೀಕರಣಗೊಂಡಿತು. ಸುಂದರಾಂ ಶೆಟ್ಟರು ಬ್ಯಾಂಕನ್ನು ಬಿಟ್ಟರು. ನಾನು ಅಷ್ಟರಲ್ಲಿ 15 ವರ್ಷ ಸೇವೆ ಮುಗಿಸಿ ಸೀನಿಯರ್ ಮ್ಯಾನೇಜರನಾಗಿದ್ದೆ. ಮುಂದಿನ ಬಡ್ತಿಗೆ ತಯಾರಾಗಿದ್ದೆ. ಆದರೆ ಸುಂದರಾಂ ಶೆಟ್ಟರಿಲ್ಲದೆ ಬ್ಯಾಂಕ್ ತನ್ನತನವನ್ನು ಕಳಕೊಂಡಿತ್ತು. ನೌಕರರಲ್ಲಿ ತೃಪ್ತಿ ಇರಲಿಲ್ಲ. ಅವರಿಗೆ ಭಡ್ತಿ ಇರಲಿಲ್ಲ. ಬ್ಯಾಂಕಿನ ಪುರೋಗತಿ ಕುಂಠಿತವಾಯಿತು. ನನ್ನ ಮಕ್ಕಳು ಈ 15 ವರ್ಷದಲ್ಲಿ ಬೇರೆ ಬೇರೆ ರಾಜ್ಯಗಳ ವಿದ್ಯಾಭ್ಯಾಸದಿಂದ ತತ್ತರಿಸಿ ಹೋಗಿದ್ದರು. ಅದಕ್ಕಾಗಿ ಮೂಲ್ಕಿ ತರಬೇತಿ ಕೇಂದ್ರಕ್ಕೆ ವರ್ಗ ಕೇಳಿಕೊಂಡು ಬಂದೆ. ಬ್ಯಾಂಕಿನವರು ನನ್ನನ್ನು ಪ್ರಧಾನ ಶಿಕ್ಷಕ (ಪ್ರಿನ್ಸಿಪಾಲ)ನಾಗಿ ತರಬೇತಿ ಕೇಂದ್ರದಲ್ಲಿ 9 ವರ್ಷಗಳ ಕಾಲ ಇರಿಸಿದರು. ಮುಂದಿನ ವರ್ಗ, ಕೊನೇಯದ್ದು ಕೇರಳದ ತಿರುವನಂತಪುರಕ್ಕೆ. ಅಲ್ಲಿನ ರೀಜಿನಲ್ ಆಫೀಸಿಗೆ. ಅಲ್ಲಿ ನಾಲ್ಕು ವರ್ಷ ಸೇವೆ ಸಲ್ಲಿಸಿ 1997ರಲ್ಲಿ ಸ್ವಯಂ ನಿವೃತ್ತಿ ಪಡೆದೆ. ಸ್ವಂತೃಪ್ತ ಸೇವೆಯಿಂದ ತೃಪ್ತನಾಗಿ ಮೂಲ್ಕಿಗೆ ಬಂದು ಒಂದು ಚಿಕ್ಕ ಮನೆಯನ್ನು ಕಟ್ಟಿ ವಾಸವಾಗಿದ್ದೇನೆ.

ನನ್ನ ಜೀವನದಲ್ಲಿ ಸುಂದರಾಂ ಶೆಟ್ಟರನ್ನು ನೆನಪಿಸುವ ಸಾವಿರಾರು ನಿದರ್ಶನಗಳಿವೆ. ಅದು ಹೇಳಿ ಮುಗಿಯಲಾರದು. ಜಾತಿ ಮತ ಬೇಧವಿಲ್ಲದೆ ಎಲ್ಲರಿಗೂ ಸಹಾಯ ಮಾಡಿದ ವಿಶೇಷ ವ್ಯಕ್ತಿ ಇವರು. ನನ್ನ ಜೀವನದ ಎಲ್ಲ ಪುರೋಗತಿಗಳಿಗೆ ಕಾರಣ ವಿಜಯಾ ಬ್ಯಾಂಕ್ ಹಾಗೂ ಅದರ ಚೇಯರ್‌ಮನ್ ಶ್ರೀಯುತ ಸುಂದರಾಂ

ಶೆಟ್ಟರು. ಇದನ್ನು ಎಂದೂ ಮರೆಯುವಂತಿಲ್ಲ. ಸಹಸ್ರಾರು ನೌಕರರಿಗೂ ಇದು ಸತ್ಯ. ಇಂಥಹ ಒಂದು ಚಿಕ್ಕ ನಿದರ್ಶನ ಇಲ್ಲಿ ತಿಳಿಸ ಬಯಸುತ್ತೇನೆ.

ದೆಹಲಿಯ ಶಾಖೆಯ ಬ್ರಾಂಚ್ ಮೆನೇಜರರೊಬ್ಬರು ಅಪ್ಪಿ ತಪ್ಪಿಯೋ, ತಿಳಿದೊ, ಹೆಡ್ಡಾಫೀಸಿನ ನಿರ್ದೇಶನಕ್ಕೆ ಮಹತ್ವ ಕೊಡದೆ ಕೋಟಿಗಟ್ಟಲೆ ವ್ಯವಹಾರ ನಡೆಸಿದ್ದರು. ಅದು ರಿಸರ್ವ್ ಬ್ಯಾಂಕ್ ನಿಯಮಕ್ಕೂ ವಿರುದ್ಧವಾಗಿತ್ತು. ನನ್ನ ತಪಾಸಣೆಯ ವೇಳೆ ಇದರ ಅರಿವಾಯಿತು. ದೆಹಲಿಯ ರೀಜನಲ್ ಮ್ಯಾನೇಜರರು ಆ ಬ್ರಾಂಚ್ ಮ್ಯಾನೇಜರನನ್ನು ಕೆಲಸದಿಂದ ಅಮಾನತು ಕಳಿಸಲು ಶಿಫಾರಸು ಮಾಡಿದರು. ಸುಂದರಾಂ ಶೆಟ್ಟರು ಲೆಕ್ಕ ತಪಾಸಣೆ ಮಾಡಿದ ನನ್ನನ್ನು ಕರೆದು ಬ್ರಾಂಚಿನ ವಿವರಗಳನ್ನು ಕೇಳಿದರು. ಬಳಿಕ ಆ ಮ್ಯಾನೇಜರರನ್ನು ನನ್ನ ಹೇಳಿಕೆಯಂತೆ ದಕ್ಷಿಣ ಭಾರತದ ಒಂದು ಹಳ್ಳಿಗೆ ವರ್ಗಾಯಿಸಿದರು. ಇನ್ನು ಇಂಥಹ ಅಪರಾಧವೆಸಗಬಾರದೆಂದು ಲಿಖಿತವಾಗಿ ಅವರಿಗೆ ಚುರುಕು ಮುಟ್ಟಿಸಿದರು. ಯಾರ ಭವಿಷ್ಯಕ್ಕೂ ಅಡ್ಡಗಾಲು ಹಾಕದೆ ಒಳಗೆ ಕನಿಕರತೆಯಿಂದ ನೌಕರರನ್ನು ತಂದೆಯಂತೆ ಸಲಹಿದ ಮಹಾನ್ ವ್ಯಕ್ತಿ ಶ್ರೀಯುತ ಶೆಟ್ಟರು.

ಪ್ರತಿಯೊಬ್ಬ ಮಾನವನ ಹುಟ್ಟು ಒಂದು ವಿಶೇಷ. ಆತನು ತನ್ನ ಪರಿಸರದಲ್ಲಿ ಒಂದಲ್ಲ ಒಂದು ರೀತಿಯ ಸಮಾಜ ಸೇವೆ ಮಾಡಿಯೇ ಮಾಡುತ್ತಾನೆ. ಆದರೆ ಸುಂದರಾಂ ಶೆಟ್ಟರು



ಸೊನ್ನೆಯಿಂದ ಎದ್ದು ನಿಂತವರು. ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿ ಕೊಂಡ ಧೀಮಂತ ವ್ಯಕ್ತಿ. ತಮ್ಮೂರವರಿಗೆ, ದಕ್ಷಿಣ ಕನ್ನಡದವರಿಗೆ, ಕರ್ನಾಟಕದವರಿಗೆ ಉದ್ಯೋಗವಿತ್ತು ಜನಪ್ರಿಯರೆನಿಸಿದರು. ಜೀವನ ಪರ್ಯಂತ ಶೆಟ್ಟರು ಈ ನೌಕರರಿಗೆ ಪ್ರಾಥ ಸ್ಮರಣೀಯರಾದರು. ಈ ಮಹತ್ಕಾರ್ಯ ಮೂಲ್ಕಿಯ ಜನತೆಯ ನೆನಪಿನಲ್ಲಿರಿಸುವುದು ಅಗತ್ಯ. 20ನೇ ಶತಮಾನದ ಬ್ಯಾಂಕಿಂಗ್ ಮಹಾನಾಯಕ ಇವರು. ಇವರ ಬ್ಯಾಂಕಿಂಗ್ ದಾಖಲೆ, ಈತನಕ ಯಾರಿಂದಲೂ ಮುರಿಯಲ್ಪಟ್ಟಿಲ್ಲ. ಇದೊಂದು ಆಶ್ಚರ್ಯ!

ಶ್ರೀಯುತ ಸುಂದರಾಂ ಶೆಟ್ರ ಬಗ್ಗೆ ಈ ಕಿರು ಕೃತಿಯಲ್ಲಿ ನನ್ನ ಕೆಲವು ಅನುಭವಗಳನ್ನು ತಮ್ಮ ಮುಂದಿರಿಸಲು ಅನುವುಮಾಡಿ ಕೊಟ್ಟ ಲೇಖಕರಾದ, ಮೂಲ್ಕಿಯ ಜನಪ್ರಿಯ ಸಮಾಜ ಸೇವಕರು ಡಾಕ್ಟರರೂ ಆದ, ಮೂಲ್ಕಿ ನರ್ಸಿಂಗ್ ಹೋಂನ ಡಾ। ಅಚ್ಯುತ ಕುಡ್ವರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು

20-9-2003

ಯೋಗ ಧಾಮ **ದೇವದಾಸ್ ರಾವ್**

ಕೆರೆಕಾಡು, ಮೂಲ್ಕಿ